- ಓಂ -

- ಶ್ರೀಮತೇ ನಮಃ -

ನಾಲಾಯಿರ ದಿವ್ಯ ಪ್ರಬಂಧಮ್

।

ನಾನ್ಗಾಯಿರಂ

।

ತಿರುವಾಯ್ಮೊಳಿ

ನಮ್ಮಾಳ್ವಾರ್

(ತಿರುಕ್ಕುರುಹೂರ್ ಶಠಗೋಪನ್ ವಿರಚಿತ)

।

ನಾಲ್ಕನೆಯ ಸಾವಿರ

ತಮಿಳುಮೂಲ, ಕನ್ನಡದಲ್ಲಿ ಪ್ರತಿಪದಾರ್ಥ ತಾತ್ಪರ್ಯ
ಮತ್ತು
ವಿವರಣೆಯೊಂದಿಗೆ

ಸಂಪುಟ - 16

ಭಾಗ - 5

Garani Srinivasan

విషయ సూచిక

సం.	విషయం	పాత్రగల్లు		పుట
1	స్త్రైయాంర్ శర్కర శర్త -	11	-	1
2	ఫిలడ ఫిలడ ఫిలడ	11	-	21
3.	మాశయం శేలది -	11	-	43
4.	లారేప్యామా శలంజి - -	11	-	62
5.	వజ్ఞస్త్రయాలవస్త్రై మేలర దాళ్	11	-	79
6.	శరత్ ఇంగలమా శైయిద్ధనమా -	11	-	99
7	నీలద్రి నీలన్న - - -	11	-	123
8.	ఆరావమురి - - -	11	-	145
9.	మానీలయ నీలకృష్ణనల్లార్	11	-	165
10.	పిలాస్పాదాము - -	11	-	183-206
	ఇట్లు	110		

3.9.84

- ಶ್ರೀಃ - (1) - ಶ್ರೀಯೈನಮಃ -

ತಿರುವಾಯ್ಮೊೞಿ - ಐದನೆಯ ದಶಕ - ಮೊದಲ ತಿರುವಾಯ್ಮೊೞಿ

திருவாய்மொழி - ஐந்தாம்பத்து - முதல் திருவாய்மொழி

ಕೈಯಾರ್ ಶಕ್ಕರತ್ತು - கையார் சக்கரத்து

1 கையார் சக்கரத்து என் கருமாணிக்கமே யென்றென்று,
பொய்யே கைம்மை சொல்லிப் புறமே புறமே யாடி,
மெய்யே பெற்றொழிந்தேன் விதிவாய்க்கின்று காப்பாரார்?,
ஐயோ! கண்ணபிரான்! அறையோ இனிப் போனாலே

ಕೈಯಾರ್ ಶಕ್ಕರತ್ತು ಎನ್ ಕರುಮಾಣಿಕ್ಕ ಮೇಯೆನ್ಱೆನ್ಱು,
ಪೊಯ್ಯೇ ಕೈಮ್ಮೈ ಸೊಲ್ಲಿಪ್ಪುಱಮೇ ಪುಱಮೇಯಾಡಿ,
ಮೆಯ್ಯೇ ಪೆಱ್ಱೊೞಿನ್ದೇನ್ ವಿದಿವಾಯ್ಕ್ಕಿನ್ಱು ಕಾಪ್ಪಾರಾರ್?,
ಐಯ್ಯೋ! ಕಣ್ಣಪಿರಾನ್! ಅಱೈಯೋ ಇನಿಪ್ಪೋನಾಲೇ.

ಕೈ கை = ಕೈಯಲ್ಲಿ, ಆರ್ ஆர் = ಧರಿಸಿದ, ಶಕ್ಕರತ್ತು சக்கரத்து = ಚಕ್ರಾಯುಧವುಳ್ಳ ಎನ್ என் = ನನ್ನ, ಕರುಮಾಣಿಕ್ಕಮೇ கருமாணிக்கமே = ಕರಿಯ ಮಾಣಿಕ್ಯವೇ, ಎನ್ಱು ಎನ್ಱು என்று என்று = ಎಂದು ಹೇಳುತ್ತ ಹೇಳುತ್ತಲೇ, ಪೊಯ್ಯೇ பொய்யே = ಸುಳ್ಳಾಗಿಯೇ, ಕೈಮ್ಮೈ கைம்மை = ಕಪಟದ ಮಾತನ್ನು, ಸೊಲ್ಲಿ சொல்லி = ಹೇಳುತ್ತ, ಪುಱಮೇ ಪುಱಮೇ ಆಡಿ புறமே புறமே ஆடி ಬಾಹ್ಯವಿಷಯಗಳಲ್ಲಿ ಆಡುತ್ತ, ಮೆಯ್ಯೇ மெய்யே = ಯಥಾರ್ಥವಾದದ್ದನ್ನ (ನಿತ್ಯವಾದದನ್ನೇ, ಪೆಱ್ಱು பெற்று = ಪಡೆದು, ಒೞಿನ್ದೇನ್ ஒழிந்தேன் = ಮುಗಿಸಿದ್ದೇನೆ, ವಿದಿ விதி = (ವಿಧಿಯ) ಭಗವಂತನ, ವಾಯ್ಕ್ಕು வாய்க்கு = ಅನುಗ್ರಹಕ್ಕೆ ಇನ್ಱು இன்று = ಇಂದು (ಈಗ), ಕಾಪ್ಪಾರ್ காப்பார் ತಡೆಗಟ್ಟುವವರು. ಆರ್ ஆர் ಯಾರು? ಐಯ್ಯೋ ஐயோ = ಅಯ್ಯೋ, ಕಣ್ಣಪಿರಾನ್ கண்ணபிரான் = ಕೃಷ್ಣಪರಮಾತ್ಮ, ಅಱೈಯೋ அறையோ = (ಕೂಗಿ ಹೇಳುತ್ತೇನೆ), ನನ್ನ ಹೊಡೆಯುತ್ತೇನೆ ಇನಿ இனி = ಇನ್ನು, ಪೋನಾಲೇ போனாலே = ಹೋದರೆ (ಹೋಗುವುದಾದರೆ),

ಕೈಯಲ್ಲಿ ಧರಿಸಿದ ಚಕ್ರಾಯುಧವುಳ್ಳ ನನ್ನ ಕರಿಯ ಮಾಣಿಕ್ಯವೇ,

ಎಂದು ಹೇಳುತ್ತ ಹೇಳುತ್ತಲೇ, ನುಣ್ಣಗಾಯಿತು. ಕಾಮಬಾಣದ ಮೊನೆಗಳನ್ನುದುತ್ತಾ, ಬಾಹ್ಯವಿಷಯಗಳಲ್ಲಿ ನಲಿದಾಡುತ್ತಾ ಯಥೇಚ್ಛವಾಗಿದ್ದನೇ (ಸ್ವಚ್ಛಂದನಾಗಿದ್ದೆ) ಪಡೆದುಕೊಂಡಿದ್ದೇನೆ! ವಿಧಿಯು (ಭಗವಂತನ) ಅನುಗ್ರಹವನ್ನು ಈಗ ಕೇಳಿಗಳು ಇವರು ಯಾರು? ಅಯ್ಯೋ, ಕೃಷ್ಣ ವಿರಹಾರ್ತ ಏನು ಹೋಗದೆ ಹೇಳುತ್ತೇನೆ, ಇನ್ನು (1) (ನೀನು) ಹೋಗುವುದಾದರೆ?

ಈ ರಾತ್ರಿ ಅರ್ಧಪೂರ್ಣವಾಗಿದೆ. ಭಗವಂತನು ಎಂಥ ಕೃಪಾಳು! ಅವನ ಪ್ರಾಪ್ತಿಗೆ ಸಾಧ್ಯ ಎಂಬುದನ್ನು ಸೃಷ್ಟಿಸುತ್ತದೆ ಬಂದು ನೆಲಕ್ಕೆ ಬಾರದ ಗ್ರಹಪ್ರಯಾಣ ಉಂಟಾಯಿತೆಂದರೆ, ಅದನ್ನು ಕಡೆಗಳುವುದು ಯಾರು ಸಾಧ್ಯವಿಲ್ಲ ಎಂಬ ದನ್ನು ಸೃಷ್ಟಿಸುತ್ತದೆ.

ಭಗವಂತನ ರಾತ್ರಿ ಕ್ರೀಡೆಯನ್ನು, ಅವನ ಅನ್ಯಾಯದ ಆನಂದಿಸುವುದು ಸಾಮರ್ಥ್ಯವನ್ನು ಕಂಡು ಮನಸ್ಸು ಹೋಗದಾದುತ್ತ ವಿಷಯ ನಿಜಭಕ್ತನ ಕೆಲಸ. ಭಕ್ತಿಯು ಸುಳ್ಳಲ್ಲ ಇಲ್ಲದೆ, ಮನಸ್ಸಿನಲ್ಲಿ ಬಾಹ್ಯವಿಷಯಗಳಲ್ಲಿ ವಾಸನೆಯನ್ನು ಕಂಡುಕೊಂಡು, ಎಲ್ಲಿ ಬಿಡದಂತೆ ಬಾಹ್ಯವಿಷಯಗಳಲ್ಲಿ ಕೇಳುತ್ತಾ ಅದನ್ನೇ ಆನಂದದಿಂದ ಕೇಳಿದು ಕೃಪೆ ಪಡುವವನಾದರೂ, ನಟನೆಯಾದರೂ ಉತ್ತಮಭಕ್ತನಂತೆ ಬಾಯಲ್ಲಿ ಭಗವಂತನ ನಾಮ ಗಳನ್ನು ಉಚ್ಚರಿಸುತ್ತಿರುವವನನ್ನು ಆ ಭಗವಂತನು ಕಡೆಗಣಿಸುವುದಿಲ್ಲ. ಅಮೃತ ಆ [illegible] ನಿಜಭಕ್ತನ ಹಾಗೆಯೇ ಭಗವಂತನು ತನ್ನ ಕೃಪೆಯನ್ನು ಅನುಗ್ರಹಿಸುತ್ತಾನೆ. ತನ್ನನ್ನು ಜೋಕನನು ಮರೆಯಬಾರದು. ಅವನು ಹೇಗೆ ಯಾವ ರೀತಿಯಲ್ಲಿ ತನ್ನನ್ನು ಸ್ಮರಿಸಿದರೂ ತನಗೆ ಸಂತೋಷವೇ ಇದೇ ಭಗವಂತನಿಗೆ ಬೇಕಾದದ್ದು.

ಆಚಾರರು ಹೇಳುತ್ತಾರೆ: ಉತ್ತಮ ಭಕ್ತನಂತೆ ನಟಿಸುತ್ತ, ನಾನಾ ಬಾಹ್ಯ ಬಾಹ್ಯ ರೀತಿಯಲ್ಲಿ ಭಗವನ್ನಾಮವನ್ನು ಪಠಿಸುತ್ತಾ, ನಾನಾ ಬಾಹ್ಯ ವಿಷಯಗಳಲ್ಲಿ ಮುಳುಗಿರುತ್ತಾ ಇರುವ ನನಗೆ ನಿಜವಾದ ಭಗ ವಂತನ ಅನುಗ್ರಹವುಂಟಾಯಿತಲ್ಲ! ಇನ್ನು ಕ್ರಮವು ನನ್ನಿಂದ ಅನುಕ್ಷ ದಕ್ಕೆ ಸಾಧ್ಯವಾದೀತೇ? ಎಂದಿಗೆ ಇಲ್ಲ.

ಭಗವಂತನನ್ನು ಯಾವ ರೀತಿಯಲ್ಲಾದರೂ, ಯಾವ ರೀತಿಯಲ್ಲಾದರೂ ಸ್ಮರಿಸಲಿ ಅದು ಕಾಮವಾಗಿರಲಿ, ಆತ್ಮವಂಚನೆಯಾಗಿರಲಿ. ನಟನೆಯಾಗಿ ರಲಿ ಆಡಂಬರವಾಗಿರಲಿ. ಇತರರನ್ನು ಮೋಸಗೊಳಿಸುವುದೇ ಆಗಿರಲಿ. ಅದು ಹೇಗೆಯೇ ಇದ್ದರೂ, ಭಗವಂತನು ಅದನ್ನು ಸ್ವೀಕರಿಸಿ, ನಿಜವಾದ ರೀತಿ ಯಲ್ಲೇ ಫಲವನ್ನಿತ್ತು, ಅವನನ್ನು ತನ್ನವನನ್ನಾಗಿ ಮಾಡಿಕೊಳ್ಳುತ್ತಾನೆ.

2. போறாய் மாமருதின் நடுவே என் பொல்லா மணியே,
தேனே! இன்னமுதே! என்றென்றே சில கூத்துச்
சொல்ல,
தானெம் பெருமான் அவன் என்னாகி ஒழிந்தான்
வானே மாநிலமே மற்றும் முற்றும் என்னுள்ளனவே.

ಪೋನಾಯ್ ಮಾಮರುದಿನ್ ನಡುವೇ ಎನ್ ಪೊಲ್ಲಾ ಮಣಿಯೇ
ತೇನೇ! ಇನ್ನಮುದೇ! ಎನ್ರೆನ್ರೇ ಶಿಲ ಕೂತ್ತುಚ್ಚೊಲ್ಲ
ತಾನೆಂಪೆರುಮಾನ್ ಅವನ್ ಎನ್ನಾಹಿ ಒಳಿಂದಾನ್
ವಾನೇ ಮಾ ನಿಲಮೇ ಮತ್ತ್ರುಮುತ್ತ್ರುಮೆನ್ನುಳ್ಳನವೇ.

ಪೋನಾಯ್ போறாய் = ಹೋದವನೇ (ನುಸುಳಿದವನೇ), ಮಾ ಮರುದಿನ್ ನಡುವೇ மா மருதின் நடுவே = ದೊಡ್ಡ ಮತ್ತಿ ಮರಗಳ ನಡುವೆ, ಎನ್ என் = ನನ್ನ, ಪೊಲ್ಲಾ பொல்லா மணியே = ರಂಧ್ರವಿಲ್ಲದ (ವಿಶುದ್ಧವಾದ) ರತ್ನವೇ, ತೇನೇ ಮಣಿಯೇ, ~~ಇನ್~~ ಇನ್ இன் = ಇನಿದಾದ, ~~[illegible]~~ தேனே = ಜೇನಿನಂತೆ ಮಧುರವಾದವನೇ, ~~[illegible]~~, ಅಮುದೇ அமுதே = ಅಮೃತಸ್ವರೂಪಿಯೇ, ಎನ್ರು ಎನ್ರು என்று என்று = ಎಂದು ಎಂದು (ಎಂದು ಮುಂತಾಗಿ), ಶಿಲ ಕೂತ್ತು சில சொல்ல = ಹೇಳಿದ್ದರಿಂದ, கூத்து = ಕೆಲವು ಕೂಗುಗಳನ್ನು, ಶೊಲ್ಲ ... ಎಂಪೆರುಮಾನ್ எம் பெ ... ತಾನ್ தான் = ತಾನು, ಎಂ ... = ವಿಶ್ವಾಸದಿಂದ, ಎಂಪೆರುಮಾನ್ ಎನ್ ಆಹಿ ಒಳಿನ್ದಾನ್ ருமான் = ಸರ್ವೇಶ್ವರನು, ಅವನ್ அவன் = ಅವನು, ವಾನೇ வானே = ನ்... ஆகி ஒழிந்தான் = ನನಗೆ ಒಡಗಿ ಬಂದಿದ್ದಾನೆ, ವಾನೇ ... = ವಿಶಾಲವಾದ ಭೂಲೋಕ ಮೇಲಣ ಲೋಕಗಳೇ, ಮಾ ನಿಲಮೇ மாநிலமே = ಎಲ್ಲಾ ವಸ್ತುಗ ಳೇ, ಮತ್ತು மற்று = ಮತ್ತು, ಮುತ್ತ್ರುಮ್ முற்றும் = ಅಂತರಂಗದವೇ ಆಗಿವೆ ಳು, ಎನ್ ಎನ் = ನನ್ನ, ಉಳ್ಳನವೇ உள்ளனவே = ಅಂತರಂಗದವೇ ಆಗಿವೆ.

ದೊಡ್ಡ ಮತ್ತಿ ಮರಗಳ ನಡುವೆ ನುಸುಳಿದವನೇ, ನನ್ನ ವಿಶುದ್ಧವಾದ ರತ್ನವೇ, ಜೇನಿನಂತೆ ಮಧುರವಾದವನೇ, ಇನಿದಾದ ಅಮೃತವೇ, ಎಂದು ಮುಂತಾಗಿ ಕೆಲವು ಕೂಗುಗಳನ್ನು ಕೂಗಿದ್ದರಿಂದ, ಸರ್ವೇಶ್ವರನಾದ ಅವನು ಸ್ವತಃ ವಿಶ್ವಾಸದಿಂದ ನನಗೆ ಒಡಗಿ ಬಂದಿದ್ದಾನೆ. ಮೇಲಣ ಲೋಕಗಳು, ವಿಶಾಲವಾದ ಭೂಲೋಕವೂ, ಮತ್ತು (ಅವುಗಳ) ಎಲ್ಲಾ ವಸ್ತುಗಳೂ ನನ್ನ ಒಳಗಡೆಯೇ (ಅಂತರಂಗದಲ್ಲೇ) ಇವೆ. ②

ಈ ಪಾಶುರದಲ್ಲಿ ಭಗವಂತನ ಅಪಾರವಾದ ವಾತ್ಸಲ್ಯವನ್ನು ಸ್ವಾಮಿಗಳವರು ವಿವರಿಸಿದ್ದಾರೆ.

'ಪೋನಾಯ್ ನಡುವೇ — ಇದು ಭಗವಂತನು ಶ್ರೀಕೃಷ್ಣ ನಾಗಿ ನಡೆಸಿದ ಒಂದು ಆಶ್ಚರ್ಯಕರವಾದ ಕೃತ್ಯ. ನಂದಗೋಕುಲದಲ್ಲಿ ಬಾಲ

Garani Srinivasan

ಕೃಷ್ಣನು ಬೆಳೆಯುತ್ತಿದ್ದಾನೆ, ಅವನು ಮನೆಮನೆಯಲ್ಲೂ ಮಾಡಿದ ನಾನಾ ಚೇಷ್ಟೆಗ
ಳನ್ನು ಕುರಿತು ಗೋಪಿಕೆಯರು ಬಂದು ಯಶೋದೆಗೆ ದೂರು ಹೇಳುವರು. ಇದರಿಂದ
ಯಶೋದೆಗೆ ಕಡುಕೋಪ ಬಂತು. ಬಾಲಕೃಷ್ಣನನ್ನು ಮನೆಯ ಮುಂದಿನ ಒಂದು
ಒರಳಿಗೆ ಕಟ್ಟಿಹಾಕಿ ತನ್ನ ಕೆಲಸಕ್ಕೆ ಮನೆಯೊಳಕ್ಕೆ ಹೋದಳು. ಬಾಲಕೃಷ್ಣ
ನು ಆ ಒರಳನ್ನು ಎಳೆದುಕೊಂಡು, ಮೆಲ್ಲಮೆಲ್ಲನೆ ಅಂಬೆಗಾಲಿಡುತ್ತಾ ಎದುರಿಗಿದ್ದ
ಅವಳಿ-ಜವಳಿ ಜೋಡಿ ಮತ್ತೀ ಮರಗಳ ಬಳಿಗೆ ಹೋದನು. ತಾನು ಅವುಗಳ ನಡುವೆ
ಸಂದಿನಲ್ಲಿ ನುಸುಳಿದನು. ಒರಳನ್ನು ತನ್ನ ಕಡೆಗೆ ಎಳೆದುಕೊಳ್ಳುವುದಕ್ಕಾ
ಅದನ್ನು ಜಗ್ಗಿ ಎಳೆದನು. ಕೂಡಲೇ ಆ ಜೋಡಿ ಮತ್ತೀ ಮರಗಳು ಬೇರುಸಹಿತ
ಮುರಿದು ಬಿದ್ದವು. ಆ ಶಬ್ದಕ್ಕೆ ಹೆದರಿ, ನಂದಗೋಕುಲವಾಸಿಗಳು ನೋಡುತ್ತಲೇ — ಏನಾಶ್ಚರ್ಯ ಅದು! ಕಿಲ
ಯಶೋದೆಯೂ ಹೆದರಿಕೊಂಡು ನೋಡುತ್ತಾಳೆ — ಕೂಡಲೇ ಯಶೋದೆ ಅವನನ್ನು
ಕಿಲನೆ ನಗುತ್ತಾ ಕೃಷ್ಣನು ನೋಡುತ್ತಿದ್ದಾನೆ
ಬಾಚಿ, ಎತ್ತಿ ಮುದ್ದಾಡಿದಳು.

"ಆಪನ್ನಂ ಯೋ ಜಾನ್ಯನ್" — ಭಗವಂತನ ಅನಂತವಾದ ಲೀಲೆಗಳ
ವಾತ್ಸಲ್ಯ ಗುಣಗಳನ್ನು ಇದು ಹೇಳುತ್ತದೆ. ಅವನ ಕಲ್ಯಾಣ
ಗುಣಗಳನ್ನು ಉಚ್ಚರಿಸುತ್ತಿದ್ದ ಮಾತ್ರಕ್ಕೇ ನಾವು ಒಲಿದು ಬರುವುದೇ!
ಅಂತರಂಗದಲ್ಲಿ ನೆಲಸುವುದೇ! ಅವನೆಷ್ಟು ಸುಲಭ!

"ಮಾನೇ ... ಉಳ್ಳನವೇ" — ಭಗವಂತನು ಆಳ್ವಾರರ
ಬಳಿ, ಅವರ ಅಂತರಂಗದಲ್ಲಿ ನೆಲೆಸಿದ್ದರ ಪರಿಣಾಮ ಇದು: ಸ್ವಾರ್ಥ
ಮೇಲಣ ಆಸೆಗಳು, ಭೋಗಗಳು, ಅವುಗಳಲ್ಲಿನ ಎಲ್ಲಾ ವಸ್ತುಗಳ
ಈ ಅಂತರಂಗದಲ್ಲಿ ನೆಲೆಸಿದನೆಯೇ ಆಯಿತಲ್ಲ
ಆಳ್ವಾರರು ಹೇಳುತ್ತಾರೆ: ನಾನು ಮಾಡಿದ್ದು ಬಹಳ ಅಲ್ಪವೇ-
ಭಗವಂತನ ಕೆಲವು ನಾಮಗಳನ್ನು ಉಚ್ಚರಿಸಿದ್ದು ಮಾತ್ರವೇ. ಅದಕ್ಕೆ
ಪ್ರತಿಫಲವಾಗಿ ಕಂಡ ಭಗವಂತನ ಔದಾರ್ಯವೆಷ್ಟು! ಅವನೇ ಒಲಿದು
ಬಂದು ನನ್ನಲ್ಲಿ ವಾತ್ಸಲ್ಯ ತೋರುತ್ತಿದ್ದಾನೆ! ಅವನು ನನ್ನ ಅಂತರಂಗದಲ್ಲಿ
ನೆಲೆಸಿದ್ದರಿಂದ, ಅವನ ಇಡೀ ದೃಷ್ಟಿಯೂ ನನ್ನ ಅಂತರಂಗವನ್ನು ತುಂಬಿದೆ
ಯಲ್ಲ!

3. உள்ளனமற்றுளவாப் புறமே சிலமாயம் சொல்லி,
வள்ளல் மணிவண்ணனே! என்றென்றுன்னையும் வஞ்சிக்கும்,
கள்ளமனம் தவிர்ந்தே உன்னைக்கண்டு கொண்டுய்ந்தொழிந்தேன்
வெள்ளத்தணைக்கிடந்தாய்! இனியுன்னை விட்டென்கொள்வனே

Garani Srinivasan

ಉಳ್ಳನ ಮಱ್ಱುಳವಾಪ್ ಪುಱಮೇ ಶಿಲ ಮಾಯಮ್ ಶೊಲ್ಲಿ,
ವಳ್ಳಲ್ ಮಣಿವಣ್ಣನೇ! ಎನ್ಱೆನ್ಱೇ ಉನ್ನೈಯುಮ್ ವಂಜಿಪ್ಪಾರ್,
ಕಳ್ಳಮನಮ್ ತವಿರ್ನ್ದೇ ಉನ್ನೈಕ್ ಕಣ್ಡುಕೊಣ್ಡುಯ್‌ನ್ದೊೞಿನ್ದೇನ್,
ವೆಳ್ಳತ್ತಣೈಕ್ ಕಿಡನ್ದಾಯ್! ಇನಿಯುನ್ನೈ ವಿಟ್ಟೆನ್ ಕೊಳ್ವೇನೇ

ಉಳ್ಳನ உள்ளன ಮನಸ್ಸಿನಲ್ಲಿರುವುದು, ಮಱ್ಱು மற்று = ಇತರ ಎಲ್ಲವೂ ಉಳ ಆ உளஆ ಬೇರೆಯೇ ಇರುವಂತೆಯೇ, ಪುಱಮೇ புறமே = ಹೊರಗೆ (ಕೇಳಿಸುವಾಗ), ಶಿಲ ಮಾಯಮ್ ಶೊಲ್ಲಿ சில மாயம் சொல்லி = ಕೆಲವು ವಂಚನೆಯ (ಕಪಟದ) ಮಾತನ್ನಾಡಿ, ವಳ್ಳಲ್ வள்ளல் = ಉದಾರಿಯೇ, ಮಣಿವಣ್ಣನೇ மணிவண்ணனே = ನೀಲಮಣಿವರ್ಣ ಎನ್ಱು ಎನ್ಱೇ என்று என்றே = ಎಂದು ಹೇಳುತ್ತಲೇ, ಉನ್ನೈಯುಮ್ உன்னையும் = ನಿನ್ನನ್ನೂ, ವಂಜಿಪ್ಪಾರ್ வஞ்சிக்கும் = ವಂಚಿಸುವ (ಮೋಸಗೊಳಿಸುವ), ಕಳ್ಳಮ್ ಮನಮ್ ಕಳ್ಳ ಮನಸ್ಸನ್ನು, ತವಿರ್ನ್ದೇ தவிர்ந்தே = ಬಿಟ್ಟುಬಿಟ್ಟು, (ಮಾಡಿದ ಹಾಗೆಯೇ), ಉನ್ನೈ உன்னை = ನಿನ್ನನ್ನು, ಕಣ್ಡುಕೊಣ್ಡು கண்டுகொண்டு = ಕಂಡುಕೊಂಡು (ಅನುಭವಿಸಿ ಅರಿತುಕೊಂಡು), ಉಯ್‌ನ್ದೊೞಿನ್ದೇನ್ உய்ந்தொழிந்தேன் = ಉಜ್ಜೀವನಗೊಂಡಿದ್ದೇನೆ, ವೆಳ್ಳತ್ತು வெள்ளத்து = ಹಾಲ್ಗಡಲಲ್ಲಿ, ಅಣೈ அணை = (ಶೇಷನ) ಹಾಸಿಗೆಯಲ್ಲಿ, ಕಿಡನ್ದಾಯ್ கிடந்தாய் = ಪವಡಿಸಿರುವವನೇ, ಇನಿ இனி = ಇನ್ನು, ಉನ್ನೈ உன்னை = ನಿನ್ನನ್ನು, ವಿಟ್ಟು விட்டு = ಬಿಟ್ಟು, ಎನ್ ಕೊಳ್ವೇನ் கொள்வனே = ಏನನ್ನು ಕೈಗೊಳ್ಳಬಲ್ಲೆನು?

ಮನಸ್ಸಿನಲ್ಲಿರುವುದು ಇತರ ಎಲ್ಲವೂ ಬೇರೆಯೇ ಇರುವಂತೆಯೇ, ಹೊರಗೆ ಕೆಲವು ಕಪಟದ ಮಾತುಗಳನ್ನಾಡಿ, ಉದಾರಿಯೇ, ಮಣಿವರ್ಣ ಎಂದು ಹೇಳುತ್ತಲೇ ನಿನ್ನನ್ನು ಮೋಸಗೊಳಿಸುವ ಕಳ್ಳಮನಸ್ಸನ್ನು ದಾಟಿ, ನಿನ್ನನ್ನು ಕಂಡುಕೊಂಡು (ಅನುಭವಿಸಿ ಅರಿತುಕೊಂಡು) ಉಜ್ಜೀವನಗೊಂಡಿದ್ದೇನೆ. ಹಾಲ್ಗಡಲಲ್ಲಿ ಶೇಷನ ಹಾಸಿಗೆಯಲ್ಲಿ ಪವಡಿಸಿರುವವನೇ, ಇನ್ನು ನಿನ್ನನ್ನು ಬಿಟ್ಟು ಏನನ್ನು ಕೈಗೊಳ್ಳಬಲ್ಲೆ? (3)

ಈ ಪಾಶುರದಲ್ಲಿ ಭಗವಂತನಲ್ಲಿ ಭಕ್ತಿ ಮಾಡುವ ಬಗೆಯನ್ನು ಹೇಳಲಾಗುತ್ತದೆ.

Garani Srinivasan

ಮನಸ್ಸು ಶುದ್ಧಗೊಳ್ಳದಿದ್ದರೂ ಚಿಂತೆಯಿಲ್ಲ. ವಿಷಯ ವಾಸನೆ ಅದರಲ್ಲಿ ತುಂಬಿದ್ದರೂ ಚಿಂತೆ ಬೇಡ, ಹೇಗಾದರೂ ಭಗವನ್ನಾಮ ಸ್ಮರಣೆ ಮಾಡುತ್ತ ಬರುವುದರಿಂದ ಬರಬರುತ್ತಾ ಅದು ಅಭ್ಯಾಸವಾಗುತ್ತದೆ. ಆ ಅಭ್ಯಾಸ ಭಕ್ತಿಯನ್ನು ಮೂಡಿಸುತ್ತದೆ. ಭಗವಂತನನ್ನು ಅರಿತುಕೊಳ್ಳುವ ಆಸಕ್ತಿಯನ್ನು ತರುತ್ತದೆ. ಮತ್ತು, ಕಾಲಕ್ರಮದಲ್ಲಿ ಅವನನ್ನು ಕುರಿತು ಅನುಭವವುಂಟಾಗುತ್ತದೆ. ಭಕ್ತಿ ದೃಢವಾಗುತ್ತದೆ ಅವನಲ್ಲದೆ ತನಗೆ ಯಾವುದೂ ಬೇಕಿಲ್ಲವೆಂದು ಮನವರಿಕೆಯನ್ನುಂಟು ಮಾಡುತ್ತದೆ. ಹೀಗೆ ಉಜ್ಜೀವನ ಮಾರ್ಗವಿದೆ ಎನ್ನಲಾಗುತ್ತದೆ

ಆಳ್ವಾರರು ಹೇಳುತ್ತಾರೆ ಭಗವಂತ, ನನ್ನ ಮನದಲ್ಲಿ ತುಂಬಿ, ತುಳುಕಾಡುತ್ತಿರುವ ಭಾವನೆಗಳೇ ಬೇರೆ ಅವೆಲ್ಲ ವಿಷಯವಾಸನೆಯಿಂದ ಕೂಡಿದವು. ನಿನ್ನನ್ನು ಕುರಿತು [illegible] ಭಾವನೆಯಿಲ್ಲ ಆದರೂ, ಹೊರಗೆ, ತೋರಿಕೆಗಾಗಿ, ~~ಭಗವಂತ~~ ನಿನ್ನ ನಾನಾ ಸ್ವಭಾವಗಳನ್ನು ಸಂಪೂರ್ಣವಾಗಿ ಅನುಭವಿಸಿ ಅರಿತುಕೊಂಡವನಂತೆ ಉದಾರನೇ, ಮಾಯಾವನೇ' ಎಂದು ಮುಂತಾಗಿ ನಿನ್ನನ್ನು ಕುರಿತು ಹೇಳುತ್ತಲೇ ಇದ್ದೇನೆ. ನಿನ್ನನ್ನು [illegible] ಬಿಡುವಂತೆ ನನ್ನ ಕಳ್ಳಮನಸ್ಸನ್ನು ಬಿಡಗೊತ್ತಿದ್ದೇನೆ. ಈ ದಾರಿಯಿಂದಲೇ ನಿನ್ನನ್ನು ಅನುಭವಿಸಿ ಕಂಡುಕೊಂಡಿದ್ದೇನೆ. ಮತ್ತು ಸಂಪೂರ್ಣವಾಗಿ ಉಜ್ಜೀವನ ಹೊಂದಿದ್ದೇನೆ. ಶೇಷಶಯನನಾದ ಭಗವಂತ, ನಿನ್ನ ಹೊರತು ನಾನೇನೂ ಮಾಡಲಾರೆನಲ್ಲ! ನಿನ್ನ ಕೃಪಾಶ್ರಯವೇ ನನಗೆ ಮುಖ್ಯ

4\. என் கொள்வனுன்னை விட்டென்னும் வாசகங்கள் சொல்லியும்,
வன்கள்வனேன் மனத்தை வலித்துக் கண்ணநீர் கரந்து,
நின்கண் நெருங்கவைத்தே எனதாவியை நீக்ககில்லேன்,
என்கண் மலினமறுத்து என்னைக் கூவியருளாய் கண்ணனே!

ಎನ್‌ಕೊಳ್ವನುನ್ನೈ ವಿಟ್ಟೆನ್ನುಮ್ ವಾಶಗಙ್ಗಳ್ ಶೊಲ್ಲಿಯುಮ್,
ವನ್‌ಕಳ್ವನೇನ್ ಮನತ್ತೈ ವಲಿತ್ತುಕ್ಕಣ್ಣನೀರ್ ಕರನ್ದು,
ನಿನ್‌ಕಣ್ ನೆರುಙ್ಗವೈತ್ತೇ ಎನದಾವಿಯೈ ನೀಕ್ಕಗಿಲ್ಲೇನ್,
ಎನ್‌ಕಣ್ ಮಲಿನಮರುತ್ತು ಎನ್ನೈಕ್ಕೂವಿಯರುಳಾಯ್ ಕಣ್ಣನೇ!

ಎನ್ ಕೊಳ್ವನ್ என் கொள்வன் = ಏನನ್ನು ಕೈಗೊಳ್ಳಲಿ, ಉನ್ನೈ ವಿಟ್ಟು உன்னை விட்டு ನಿನ್ನನ್ನು ಬಿಟ್ಟು, ಎನ್ನುಮ್ என்னும் ಎನ್ನುವ, ವಾಸಗಂಗಳ್ வாசகங்கள் = ಮಾತುಗಳನ್ನು, ಸೊಲ್ಲಿಯುಮ್ சொல்லியும் ಆಡಿಯೂ ಸಹ ವನ್ ಕಳ್ವನೇನ್ வன் கள்வனேன் ಬಲು ಕೆಟ್ಟ ಕಳ್ಳನಾನು (ಕಪಟಿ ನಾನು), ಮನತ್ತೈ மனத்தை = ಮನಸ್ಸನ್ನು, ವಲಿತ್ತು வலித்து ಬಲಗೊಳಿಸಿ, ಕಣ್ಣನೀರ್ ಕರಂದು கண்ணநீர் கரந்து = ಕಣ್ಣೀರು ನುಂಗಿ, ನಿನ್ ಕಣ್ நின்கண் = ನಿನ್ನಲ್ಲಿ, ನೆರುಂಗ நெருங்க = ದೃಢವಾಗಿ, ವೈತ್ತೇ வைத்தே = ಇಟ್ಟರೂ, ಎನದು ಆವಿಯೈ தாவியை ஆவியை = ನನ್ನ ಆತ್ಮವನ್ನು (ಪ್ರಾಣವನ್ನು), ನೀಕ್ಕಗಿಲ್ಲೇನ್ நீக்ககில்லேன் = ನೀಗಲಾರೆ, ಎನ್ ಕಣ್ என்கண் = ನನ್ನಲ್ಲಿನ, ಮಲಿನಮ್ மலினம் = ಕೊಳೆಯನ್ನು, ಅರುತ್ತು அறுத்து = ನೀಗಿಸಿ (ಕಡಿದು ಹಾಕಿ), ಎನ್ನೈ என்னை = ನನ್ನನ್ನು, ಕೂವಿ கூவி = ಕೂಗಿ ಕರೆದು, ಅರುಳಾಯ್ அருளாய் = ಕೃಪೆಮಾಡು, ಕಣ್ಣನೇ கண்ணனே = ಆಶ್ಚರ್ಯಕರನೇ.

'ನಿನ್ನನ್ನು ಬಿಟ್ಟು ಏನನ್ನು ಕೈಗೊಳ್ಳಬಲ್ಲೆ' ಎಂಬ ಮಾತುಗಳನ್ನು ಆಡಿಯೂ ಸಹ, ಬಲು ಕೆಟ್ಟ ಕಪಟಿ ನಾನು. ಮನಸ್ಸನ್ನು ಬಲಗೊಳಿಸಿ, ಕಣ್ಣೀರು ನುಂಗಿ, ನಿನ್ನಲ್ಲಿ ದೃಢವಾಗಿ ಇಟ್ಟರೂ ನನ್ನ ಪ್ರಾಣವನ್ನು ನೀಗಲಾರೆ. ನನ್ನಲ್ಲಿನ ಕೊಳೆಯನ್ನು ಕಡಿದು ಹಾಕಿ, ನನ್ನನ್ನು ಕೂಗಿ ಕರೆದು ಕೃಪೆಮಾಡು ಆಶ್ಚರ್ಯಕರನೇ. (4)

'ನಿನ್ನನ್ನು ಬಿಟ್ಟು ನಾನೇನನ್ನೂ ಮಾಡಲಾರೆ' ಎಂದು ಹಿಂದಿನ ಪಾಶುರದಲ್ಲಿ ಆಳ್ವಾರರು ಹೇಳಿಕೊಂಡರಷ್ಟೆ. ಅದೇ ವಿಷಯವನ್ನು ಇನ್ನಷ್ಟು ವಿವರವಾಗಿ ಇಲ್ಲಿ ಹೇಳುತ್ತಿದ್ದಾರೆ.

'ವನ್ ಕಳ್ವನೇನ್.' — 'ಭಗವಂತ, ನಾನು ನಡೆಸುವ ಎಲ್ಲ ಕರ್ಮಗಳಲ್ಲಿಯೂ ನಿನ್ನ ಒತ್ತಾಸೆ ಇಲ್ಲದೆ ನಾನೇನೂ ಮಾಡಲಾರೆ. ಎಲ್ಲ ವಿಧದಲ್ಲೂ ನನಗೆ ನಿನ್ನ ಬೆಂಬಲ ಬೇಕೇ ಬೇಕು' — ಎಂದು ನಾನಾಡಿದ ಮಾತುಗಳಲ್ಲಿ ಸತ್ಯತೆ ಇಲ್ಲವಾಗಿದೆ. ಅದಕ್ಕೆ ನನ್ನ ಕೆಟ್ಟ ಮನಸ್ಸೇ ಕಾರಣ. ಪ್ರಪಂಚ ಸಂಬಂಧವಾದ ವಿಷಯಗಳ ಕಡೆಗೆ ಅದು ನನ್ನನ್ನು ಸೆಳೆದೊಯ್ಯುತ್ತದೆ. ಆ ಪ್ರಪಂಚ ಬಂಧನದಿಂದ ಬಿಡಿಸಿಕೊಳ್ಳುವುದು ನನ್ನಿಂದ ಆಗದೆ ಹೋಗಿದೆ. ಅಷ್ಟು ಹೆಚ್ಚಾಗಿ ನನ್ನ ಮನಸ್ಸು ವಿಷಯಾಧೀನವಾಗಿದೆ. ನಾನೇನು ಬಗೆದರೂ, ~~ನಾನು~~ ಹೇಗೆ ನಡೆದುಕೊಳ್ಳಬೇಕೆಂದರೂ ಅದು ಅದನ್ನು ಹುಳ್ಳುಮಾಡುತ್ತದೆ. ನನ್ನ ಮನಸ್ಸು ಕಪಟ ತುಂಬಿದ್ದು. ಅದನ್ನು ಬಲಗೊಳಿಸಲು ನನಗೆ ಶಕ್ತಿ ಸಾಲದು.

Garani Srinivasan

ಮನತ್ತೈ ವಲಿತ್ತು, ಕಣ್ಣ ನೀರ್ ಕರನ್ದು, ನಿನಕ್ಕಣ್ ನೆಗಿಳ್ವಿತ್ತು, ಎನದಾವಿ ಉಯ್ಯ ನೀಕ್ಕಕಿಲ್ಲೇನ್"— ಈಗಿನ ನನ್ನ ಸ್ಥಿತಿಯಲ್ಲಿ, ನನ್ನ ಮನಸ್ಸು ಬಲಹೀನವಾಗಿದೆ. ಅದನ್ನು ಬಲಗೊಳಿಸುವುದಕ್ಕೆ ನೀನಲ್ಲ, ನಿನ್ನನ್ನು ಸೇರಲೇ ಬೇಕೆಂದು ಕಣ್ಣೀರು ಸುರಿಸುವುದಕ್ಕೆ, ನಿನ್ನಲ್ಲಿ ದೃಢವಾದ ಭಕ್ತಿಯಿಂದ ಪ್ರಾಣವನ್ನು ತ್ಯಜಿಸುವುದಕ್ಕೆ ನನಗೆ ಸಾಧ್ಯವಿಲ್ಲ. ಇದಕ್ಕೆಲ್ಲ ನನ್ನ ಮನಸ್ಸಿನಲ್ಲಿ ತುಂಬಿಕೊಂಡಿರುವ ಕಲ್ಮಷವೇ ಕಾರಣ.

"ಎನ್ ಕಣ್ ಮಲಿನಮ್ ಅರುತ್ತು — ಪ್ರಕೃತಿ ಸಂಬಂಧವಾದ ದೋಷಗಳು ನನ್ನ ಮನದಲ್ಲಿ ತುಂಬಿಕೊಂಡಿದೆ. ಇವೇ ನಿನ್ನ ಕಡೆಯ ಗಮನಕ್ಕೆ ಅಡ್ಡಿ. ಆದ್ದರಿಂದ ಈ ಮಲಿನವನ್ನು (ಕೊಳೆಯನ್ನು) ಕಳೆದುಹಾಕಲು ನಾ ಅಶಕ್ತನು. ನಿನ್ನನ್ನು ಒಮ್ಮನದಿಂದ ಆಶ್ರಯಿಸುವಂತೆ ಮಾಡು ಮನಸ್ಸನ್ನು ವಿಶುದ್ಧಗೊಳಿಸು.

ಆಳ್ವಾರರು ಹೇಳುತ್ತಾರೆ: ಭಗವಂತ, ನಾನಾಡುವ ಮಾತುಗಳು ಬಳ್ಳಿಯದಾಗಿ ಕಂಡುಬಂದರೂ, ನಾನು ಕಪಟಿಯೇ. ನನ್ನ ಮನಸ್ಸು ವಿಷಯ ವಾಸನೆಯಿಂದ ತುಂಬಿದೆ. ನಿನ್ನನ್ನು ಭಕ್ತಿ ಮಾಡುವುದಕ್ಕೆ ಅದು ಶುದ್ಧವಾಗಿದೆ ಆಗದು. ಅಂಥ ನನ್ನ ಪ್ರಯತ್ನದಿಂದಲೇ ನಿನ್ನ ಬಳಿ ಭಕ್ತಿ ಮಾಡಿ ಬರುವುದಕ್ಕೆ ಆಗದು. ಅಂಥ ಶಕ್ತಿಯನ್ನು ನಾನು ಕಳೆದುಕೊಂಡಿದ್ದೇನೆ. ಬಲಹೀನದವನಾಗಿದ್ದೇನೆ. ಈ ಕಾರಣದಿಂದ ನನ್ನ ಮನಸ್ಸನ್ನು ನೀನೇ ಶುದ್ಧಗೊಳಿಸಿ, ನನ್ನನ್ನು ನಿನ್ನಬಳಿಗೆ ಸೇರಿಸಿಕೊಳ್ಳುವ ನನಗೆ ಅಷ್ಟನ್ನು ಕೈಗೊಂಡು ಮಾಡು. ಆಕಿಂಚನ್ಯನಾಗಿ ನೀನು ನನಗೆ ಅಷ್ಟನ್ನು ಕರುಣಿಸು.

5\. கண்ணபிரானை விண்ணோர் கருமாணிக்கத்தை அமுதை,
நண்ணியும் நண்ணகில்லேன் நடுவே ஓருடம்பிலிட்டு,
திண்ண மழுந்தக் கட்டிப் பலசெய்வினை வன்கயிற்றால்,
புண்ணை மறையவரிந்து எனைப் போரவைத்தாய் புறமே.

ಕಣ್ಣಪಿರಾನೈ ವಿಣ್ಣೋರ್ ಕರುಮಾಣಿಕ್ಕತ್ತೈ ಅಮುದೈ,
ನಣ್ಣಿಯುಮ್ ನಣ್ಣಕಿಲ್ಲೇನ್ ನಡುವೇ ಓರುಡಂಬಿಲಿಟ್ಟು,
ತಿಣ್ಣಮಳುಂದಕ್ಕಟ್ಟಿಪ್ಪಲ ಶೆಯ್ವಿನೈ ವನ್‌ಕಯಿಟ್ರಾಲ್,
ಪುಣ್ಣೈ ಮರೈಯವರಿಂದು ಎನ್ನೈಪ್ಪೋರವೈತ್ತಾಯ್ ಪುರಮೇ.

ಕಣ್ಣಪಿರಾನೈ கண்ணபிரானை = ಶ್ರೀಕೃಷ್ಣನಾಗಿ ಅವತರಿಸಿದ ಸರ್ವೇಶ್ವರನನ್ನು,
ವಿಣ್ಣೋರ್ விண்ணோர் = ನಿತ್ಯಸೂರಿಗಳ ಮತ್ತು ದೇವತೆಗಳ, ಕರುಮಾಣಿಕ್ಕತ್ತೈ
கருமாணிக்கத்தை = ಮಾಣಿಕ್ಯದಂತೆ ಅನರ್ಘ ಅಂತರಂಗ ವಸ್ತುವನ್ನು,

ಅಮುದ್ದೆ ಅಗ್ರಾಕ್ಕೈ = (ಅಮೃತವನ್ನು, ನಣ್ಣೋಯುಮಾ ಗ್ರಾಣಣಿಗುಯ್ಮ =
ಸಮೀಪಿಸಿಯೂ, ನಣ್ಣಾಬಿಲ್ಲೇನ್ ಗ್ರಾಣಾ ಕಾಸಲಿಲನ್ = ಆಶ್ರಯಿಸಲಾರ
ದವನಾದ್ದೇನೆ, ನಡುವೇ ಗ್ರಾಡಿಲಿಬ = ನಡುವಲ್ಲಿ ಶಿರಬ್ಬಾಗ = ಬಂದು, ಬಡಬ್ಬ
ಲ್ ಇಣ್ಣ ಉಟಂಬಿಗ್ ಇಟ್ಟು = ದೇಹದಲ್ಲಿ (ನನ್ನನ್ನು) ಬೀಲಿಸಿ, ಕಣ್ಣಾಮಾ ಶ್ರೀಣ
ಣಾಮ = ಬಲವಾದ (ದೃಢವಾದ), ಅಯುದ್ದ ಅಗ್ರಾಕ್ಕೈ = ಮುಟ್ಟದುವಂತೆ (ಅದ್ದುವಂತೆ), ಕೆಯ್ ವಿಟ್ಟ ಕಯಿಮಿಡಾ
ಕಟ್ಟಿ ಕಟಿಳ = ಕಟ್ಟಿದಾಗ, ಪಲ ಪಲ = ಅನೇಕ, ಕೆಯ್ ವಿಟ್ಟ ... ಕಯಿರ್ರುಗಳ್ = ಬಲವಾದ ಹಗ್ಗ
= ಕರ್ಮಗಳಿಂದ, ವಲ್ ಕಯಿಟ್ರಾಲ್ ಬಲ್ ಕಯಿರ್ರುಗಳ್ = ಬಲವಾದ ಹಗ್ಗ
ದಿಂದ, ಪೃಟ್ಟೈ ಪ್ಪಣ್ಣಿಣಾ = ಅದರಿಂದ ಪುಟ್ಟೈ ಕ್ಕನ್ನು, ಮುಟ್ಟಿಯಾ ಮಿಾಗ್ಗಾ (ಮರೆಮಾಡಿ)
= ಮರೆಯಾಗಿರುವಂತೆ (ಕಾಣದೆ ಇರುವಂತೆ), ಮಣ್ಣು ಬಾಗ್ರಿಕ್ಕು = ಕಟ್ಟಿ,
ಎಣ್ಣಿ ಣಾಣಿಣಾ = ನನ್ನನ್ನು, ಪ್ಪೋರವೃತ್ತಿಯ ಬೋಗ ಬಾಯಿಕ್ಕುಾಯ = ಪೋ
ಎಣ್ಣಿ ಣಾಣಿಣಾ = ನನ್ನನ್ನು, ಪ್ಪುರಮೇ ಪ್ಪೋಗೆ = ಹೊರಗಿನ ವಿಷಯಗಳಲ್ಲಿಯೇ
ರಾಡುವಂತೆ ಮಾಡಿದ್ದೀ. ಪ್ಪುರಮೇ ಪ್ಪೋಗೆ = ಹೊರಗಿನ ವಿಷಯಗಳಲ್ಲಿಯೇ

ಶ್ರೀಕೃಷ್ಣಾವತಾರದಿಂದ ದೇವೇಶ್ವರನನ್ನು, ನಿತ್ಯಸೂರಿಗಳ ಮಣ್ಣು ದೇವ
ಶೇಕಳ ಮಾನೋಕ್ಷ್ಯದಂತೆ ಶ್ರೀಯ್ಯ ಅಂತರಂಗ (ವಿದ್ಯ) ವನ್ನು, ದಿವ್ಯಾಮೃತವನ್ನು, ಸಮೀಪಿಸಿ
ಯೂ ಆಶ್ರಯಿಸಲಾರದವನಾದ್ದೇನೆ. ನಡುವೆ ಬಂದು ದೇಹದಲ್ಲಿ ನನ್ನನ್ನಿಟ್ಟು,
ದೃಢವಾಗಿ ಅದ್ದುವಂತೆ (ಮುಟ್ಟದುವಂತೆ) ಕಟ್ಟಿದಾಗ, ಅನೇಕ ಬಗೆಯ ಕರ್ಮಗಳಿಂದ ಬಲವಾದ ಹಗ್ಗದಿಂ
ದ ಅದರ ಪುಟ್ಟೈನ್ನು, ಕಾಣದೆ ಇರುವಂತೆ, ಕಟ್ಟಿ (ಮರೆಮಾಡಿ), ನನ್ನನ್ನು ಹೊರಗಿನ (5)
ವಿಷಯಗಳಲ್ಲಿ ಹೋರಾಡುವಂತೆ ಮಾಡಿದ್ದೀ.

(ಬಂದಿನ ವಾಕ್ಯದಲ್ಲಿ) "ನನ್ನ ಮನದಲ್ಲಿನ ಕತ್ತಲ ಮಲಿನವನ್ನು ಕಳೆದುದಾಗ" - ಎಂದು
ಮುಂಚಿನ ಹೇಳಲಾಯಿತಷ್ಟೆ. ಆ 'ಮಲಿನ' ವೆಂಬುದೇನೆಂದರೆ, ಅದರಿಂದ
ಬಂದಿರುವ ಕೇಡಿನೇನು ಎಂಬುದನ್ನು ಇಲ್ಲಿ ಬಿಡಿಸಿ ಹೇಳಲಾಗುತ್ತದೆ.

"ಕಣ್ಣ ಪಿರಾನ್ನೈ" - ಭಗವಂತನು ಕೃಷ್ಣಾವತಾರದಿಂದ ನಾವಾನ್ನನೇ
ವೆಳರ ನಡುವೆ ಬೆಳೆದವನ ಕನ್ನ ಬಂಧುಯನ್ನು ಅನೇಕ ಬಾರಿ ತೋರಿಸಿದ್ದನೆ.
ತನ್ನ ಆಶ್ಚರ್ಯಕೃತ ಕಾರ್ಯಗಳಿಂದಲೂ, ಅತ್ಯಾಶ್ಚರ್ಯವಾದ ಗುಣ ಸ್ವಭಾ
ವಗಳಿಂದಲೂ ಎಲ್ಲ ಬಗೆಯ ಜನರನ್ನು ಆಕರ್ಷಿಸಿ, ಅವರಿಗೆ ಎಲ್ಲ ಬಗೆಯ ಮಾ
ನಸಿಕಗಳನ್ನೂ ಮಾಡಿದನು.

"ವಿಣ್ಣೋರ್ ಕರುಮಾಣಿಕ್ಕತ್ತೈ" - ಅಮರಾವತಿಯ ದಿವ್ಯಾನೋಕ್ಷ
ವನ್ನುಳ್ಳವನ ಭದ್ರವಾಗಿ ರಕ್ಷಿಸುವ ದಾನಿಯೂ, ಮೇಲಣಲೋಕದವರು
ಭಗವಂತನನ್ನು ಕಣ್ಣ ಅಂತರಂಗದಲ್ಲಿ, ಅಲ್ಲಿನ ಸ್ವಾಮಿಯ ಜಾರಿ ಹೋದ
ದಂತೆ ಆದರದಿಂದ ಭದ್ರವಾಗಿ ಕಾಪಿಟ್ಟಿದ್ದಾರೆ

'ನಣ್ಣೋಯುಮಾ ನಣ್ಣಾಬಿಲ್ಲೇನ್' - ನಾನು ಭಗವಂತನನ್ನು ಕೂಡು

Garani Srinivasan

ಜ್ಞಾನವನ್ನು ಪಡೆದುಕೊಂಡಿದ್ದೇನೆ. ಅದನ್ನು ನನ್ನ ಅಂತರಂಗದಲ್ಲೂ ಇಟ್ಟುಕೊಂಡಿರುವುದ
ಕ್ಕೆ ಕಾರಣವೇನೆಂದರೆ ಹೀಗಿದ್ದರೂ, ಸ್ವಾಮಿಯನ್ನು ಸೇರುವುದನ್ನೂ, ಆ ಶ್ರಮವು
ವುದನ್ನೂ, ಬಿಟ್ಟುಕೊಳ್ಳುವುದನ್ನೂ ಸಾಧ್ಯವಿಲ್ಲದೆ ಹೋಗಿದೆ ಅಡ್ಡಿಪಡಿಸುವ
ಈ ದೇಹ, ಇಂದ್ರಿಯಗಳು ವಿಷಯ ಸಂಬಂಧವಾಗಿ ಆಕರ್ಷಿತವಾಗಿರುವವುಗಳು

"ಪ್ರಕೃತಿ ಮರ್ತ್ಯಯ ಮರದು — ದೇಹಸಂಬಂಧವಾದ ಬಂಧನದಲ್ಲಿ,
ಬಗೆಬಗೆಯ ಕರ್ಮಗಳೆಂಬ ಬಲವಾದ ಹಗ್ಗದಿಂದ ಬಿಗಿದು ನನ್ನನ್ನು ಕಟ್ಟಿ
ಹಾಕಿರುವುದರಿಂದ ಬಲವಾದ ಹುಣ್ಣಾಗಿದೆ. ಅದು ಕೊಳೆಯುತ್ತಿರುವುದರಿಂದ, ವಿಷಯ
ಸುಖ ಎಂಬುದರಿಂದ ಅದನ್ನು ಮುಚ್ಚಿ ಮರೆಮಾಡಲಾಗದೆ

ಆಳ್ವಾರರು ಹೇಳುತ್ತಾರೆ: ಭಗವಂತ, ನಿನ್ನನ್ನು ದೃಢವಾಗಿ ಆಶ್ರಯಿ
ಸಿ, ಉದ್ಧಾರಗೊಳ್ಳಬೇಕೆಂಬ ಜ್ಞಾನವನ್ನು ನಾನು ಪಡೆದುಕೊಂಡೆ. ನಿನ್ನ ಆಶ್ರಯವನ್ನು
ಪಡೆದುಕೊಳ್ಳಲು ಆತುರನಾದೆ. ಅದು ಸಾಧ್ಯವಾಗದೆ ಇರಲೆಂದು ನೀನು 'ದೇಹ'
ಬಲವಾದ ಅಡ್ಡಿಯೊಂದನ್ನು ಕಟ್ಟಿದ್ದೀ. ನಾನಾ ನಾನಾ ಬಗೆಯ ಈ ದೇಹದ ಮೂಲಕ
ಪ್ರೇಮದನ್ನು ಕಟ್ಟಿದ್ದೀ ಬಗೆಬಗೆಯ ಕರ್ಮಗಳನ್ನು ಕರ್ಮಗಳಿಂದ
ನನ್ನಿಂದ ಮಾಡಿಸುತ್ತೀ ನನ್ನನ್ನು ದೇಹದಲ್ಲಿ ಬಂಧಿಸಿದ್ದೀ. ಅದು ಕೀವು ಸೋರಲೆಂದು
ಆಗಿರುವುದು ಕ್ರೂರವಾದ ಮಾಗದೆ ಇರುವ ಹುಣ್ಣು ಮರೆಮಾಡಿದ್ದೀ. ಆದ್ದರಿಂದ
ವಿಷಯಸುಖ ಎಂಬುದರಿಂದ ಅದನ್ನು ಮುಚ್ಚಿ
ನಿನ್ನನ್ನು ನಾನು ಕೂಡಿಕೊಳ್ಳುವುದಾದರೂ ಹೇಗೆ?

6. புறமறக் கட்டிக்கொண்டு இருவல்வினையார் குமைக்கும்,
முறைமுறையாக்கை புகலொழியக் கண்டுகொண்டொழிந்தேன்,
நிறமுடை நால்தடந்தோள் செய்யவாய் தாமரைக்கண்,
அறமுயலாழியங்கைக் கருமேனியம்மான் தன்னையே.

ಪುರಮರಕ್ಕಟ್ಟಿಕ್ಕೊಣ್ಡು ಇರುವಲ್ವಿನೈಯಾರ್ ಕುಮೈಕ್ಕುಮ್,
ಮುರೈಮುರೈಯಾಕ್ಕೈ ಪುಗಲೊೞಿಯಕ್ ಕಣ್ಡುಕೊಣ್ಡೊೞಿನ್ದೇನ್,
ನಿರಮುಡೈ ನಾಲ್ತಡನ್ದೋಳ್ ಶೆಯ್ಯವಾಯ್ ತಾಮರೈಕ್ಕಣ್,
ಅರಮುಯಲಾೞಿಯಙ್ಗೈಕ್ ಕರುಮೇನಿಯಮ್ಮಾನ್ ತನ್ನೈಯೇ.

ಪುರಮ್ = ಹೊರಗಡೆ (~~ಕಾಲುಮುಚ್ಚುವಿಕ್ಕಾಗಲು~~ ಎಲ್ಲಾ ಕಡೆಯಲ್ಲೂ), ಅರ = ಪೂರ್ತಿ
ಯಾಗಿ, ಕಟ್ಟಿಕೊಣ್ಡು = கட்டிக்கொண்டு ಹೊದಿಕೊಂಡು (ಆವರಿಸಿಕೊಂಡ
ಇರು = இரு ಎರಡು, ವಲ್ವಿನೈಯಾರ್ = வல்வினையார்: ಬಲವಾದ

ಕರ್ಮಗಳು, ಕುಮೈಕ್ಕುಮ್ குமைக்கும் = ನಲುಗಿಸುವಂಥ (ಬಂಧಿಸುವಂಥ),
ಮುಱೈ ಮುಱೈ முறை முறை = ಮತ್ತೆ ಮತ್ತೆ, (ಕ್ರಮಾನುಸಾರವಾಗಿ) ಬರುವ ಆಕ್ಕೈ
ஆக்கை = ದೇಹವನ್ನು, ಪುಗಲ್ ಒಳಿಯ புகலொழிய = ಹೊಗುವುದ
ನ್ನು ತಪ್ಪಿಸಿಕೊಳ್ಳುವುದಕ್ಕಾಗಿ, ಕಣ್ಡು ಕೊಣ್ಡು கண்டு கொண்டு = ಕಂಡು
ಕೊಂಡು, ಒಳಿನ್ದೇನ್ ஒழிந்தேன் = ಮುಗಿಸಿದೆ, ನಿಱಮುಂ ಉಡೈ நிற
ம் உடை = ಸೌಂದರ್ಯವುಳ್ಳ ನಾಲ್ ತಡ ತೋಳ್ நால் தடதோள் =
ನಾಲ್ಕು ಉದ್ದನಾದ ತೋಳುಗಳ, ಶೆಯ್ಯ செய்ய = ಕೆಂಪನೆಯ, ವಾಯುಂ வா
ய் = ಬಾಯಿ (ತುಟಿಗಳು), ತಾಮರೈ ಕಣ್ தாமரை கண் = ತಾವರೆಯಂತೆ
(ವಿಶಾಲವೂ ಆಕರ್ಷಕವೂ ಆದ) ಕಣ್ಣುಗಳ, ಅಗಲಮ್ அகலம் = ದೃವಕ್ಷಕ್ಕೆ,
ಮುಯಂಗ್ முயங்கும் = ಉತ್ಸಾಹಗೊಳ್ಳುವ, ಆಳಿ ஆழி = ಚಕ್ರಾಯುಧವು
ಳ್ಳ, ಅಮ್ ಕೈ அம் கை = ಸುಂದರವಾದ ಕೈಯು, ಕರುಮೇನಿ கரு
மேனி = ಕರಿಯ (ನೀಲಿಬಣ್ಣದ) ದೇಹದ, ಅಮ್ಮಾನ್ ತನ್ನೈಯೆ அம்மான்
தன்னையே = ದೇವೇಶ್ವರನನ್ನೇ.

ಹೀಗಾಗಿ ಎಲ್ಲಾ ಕಡೆಯಲ್ಲೂ ಪೂರ್ತಿಯಾಗಿ ಹೆಣೆದುಕೊಂಡು, ಎರಡು ಬಲವಾದ ಕರ್ಮಗಳು ನಲುಗಿಸುವಂಥ, ಮತ್ತೆ ಮತ್ತೆ ಬರುವ ದೇಹವನ್ನು ಹೊಗುವುದನ್ನು ತಪ್ಪಿಸಿಕೊಳ್ಳುವುದಕ್ಕಾಗಿಯೇ ಸುಂದರವಾದ ನಾಲ್ಕು ಉದ್ದನಾದ ತೋಳುಗಳ, ಕೆಂದುಟಿಯ, ಕೆಂದಾವರೆಯಂತೆ ವಿಶಾಲವೂ ಆಕರ್ಷಕವೂ ಆದ ಕಣ್ಣುಗಳ, ದೃವಕ್ಷಕ್ಕೆ ಉತ್ಸಾಹಗೊಳ್ಳುವ ಚಕ್ರಾಯುಧವುಳ್ಳ ಸುಂದರವಾದ ಕೈಯ, (ನೀಲಿಬಣ್ಣದ) ಕರಿಯ ದೇಹದ ದೇವೇಶ್ವರನನ್ನೇ ಕಂಡುಕೊಂಡುಬಿಟ್ಟೆ. (6)

“ನನ್ನ ಮತ್ತು ನಿನ್ನ ನಡುವೆ ಈ ದೇಹವನ್ನು ಕಂಬಳಿ, ಇದನ್ನು ಪಾಪ ಪುಣ್ಯ ಕರ್ಮಗಳಿಂದ ಬಿಗಿದು, ಅದರಿಂದಾದ ಹುಣ್ಣನ್ನು ವಿಷಯಸುಖದಿಂದ ಮುಚ್ಚಿ ಮರೆಮಾಡಿ, ನನ್ನನ್ನು ವಂಚಿಸುತ್ತಿದ್ದೀ” – ಎಂಬುದು ಬಂದಿನ ಸಾರ. ಆ ದೇಹವನ್ನು ಕಳೆದುಕೊಳ್ಳುವುದಕ್ಕಾಗಿ ಮಾಡುವುದೇನು ಎಂಬುದನ್ನು ಕುರಿತು ಇಲ್ಲಿ ಹೇಳಲಾಗುತ್ತಿದೆ.

ಪಾಶುರದ ಮೊದಲ ಎರಡು ಪಾದಗಳಲ್ಲಿ ಈ ದೇಹದಿಂದ ಆಗುವ ತೊಂದರೆಯೇನು ಎಂದು ಹೇಳಲಾಗುತ್ತದೆ: ದೇಹದಿಂದ ಕರ್ಮ ನಡೆಯುತ್ತದೆ ಅದು ಪಾಪಪುಣ್ಯಗಳೆಂದು ಎರಡು ಬಗೆಯಾಗಿ ಬೇರ್ಪಡುತ್ತದೆ. ಎರಡೂ ಒಂದಕ್ಕೊಂದು ಬಲವಾಗಿ ಹೆಣೆದುಕೊಂಡು, ಬಿಡಿಸಿಕೊಳ್ಳಲಾರದ ಬಂಧನವಾಗುತ್ತದೆ. ಇದೇ ಮನುಷ್ಯನು ಮತ್ತೆ ಮತ್ತೆ ಹುಟ್ಟುವಂತೆ ಮಾಡುತ್ತದೆ. ಪ್ರತಿ ಹುಟ್ಟಿನಲ್ಲೂ ಕರ್ಮಬಂಧನ ಬಲಗೊಳ್ಳುತ್ತಲೇ ಇರುತ್ತದೆ. ಮತ್ತು

Garani Srinivasan

ಜನ್ಮಗಳೂ ಲೆಕ್ಕವಿಲ್ಲದಷ್ಟಾಯಿತ್ತವೆ. ಇದಕ್ಕೆ ಕೊನೆ ಎಂಬುದುಂಟೇ?

ಪಾಶುರದ ಕಡೆಯ ಎರಡು ಪಾದಗಳಲ್ಲಿ ಭಗವಂತನ ಸೌಲಭ್ಯದಿಂದರ ಪಾದ ವರ್ಣನೆ ಇದೆ. ರೂಪವುಳ್ಳ ದೇವನ ಆಕರ್ಷಕವಾದ ಕಿರೀಟವುಳ್ಳದ್ದು ತುಟಿಗಳು ಕೆಂಪವೆ. ಕಣ್ಣುಗಳು ಕೆಂದಾವರೆಯಂತೆ ವಿಶಾಲವೂ ಆಕರ್ಷಕವೂ. ತೋಳುಗಳು ದೀರ್ಘವಾದ ನಾಲ್ಕು. ಧರ್ಮರಕ್ಷಣೆಗಾಗಿಯೇ ತನ್ನ ಸುಂದರವಾ ಕೈಯಲ್ಲಿ ಹೊಳೆಯುವ ಚಕ್ರಾಯುಧ ಬಲಗೆ ಹಿಡಿದಿರುವ ಸರ್ವೇಶ್ವರ

ಆಳ್ವಾರರು ಹೇಳುತ್ತಾರೆ: ಪಾಪಪುಣ್ಯಗಳಿಂದ ಬಲವಾದ ಬಂಧನದಿಂದ ಮೇಲಿಂದ ಮೇಲೆ ಹುಟ್ಟುವ ಬಾಧೆಯಿಂದ ಬಿಡಿಸಿಕೊಳ್ಳುವುದಕ್ಕಾಗಿಯೇ, ನಾನು ಅತ್ಯಸುಂದರನಾದ ಸರ್ವೇಶ್ವರನನ್ನು ಭಜಿಸಿ, ಪೂಜಿಸಿ, ಅನುಭವಿಸಿ, ಕಂಡುಕೊಂಡಿದ್ದೇನೆ

7. அம்மானாழிப்பிரான் அவனெவ்விடத்தான் யானார்,
எம்மா பாவியர்க்கும் விதிவாய்க்கின்று வாய்க்கும் கண்டீர்,
கைம்மாதுன்பொழித்தாயென்று கைதலை பூசலிட்டே,
மெய்ம்மாலாயொழிந்தேன் எம்பிரானுமென் மேலானே.

ಅಮ್ಮಾನಾೞಿಪ್ಪಿರಾನ್ ಅವನೆವ್ವಿಡತ್ತಾನ್ ಯಾನಾರ್
ಎಮ್ಮಾ ಪಾವಿಯರ್ಕ್ಕುಮ್ ವಿದಿವಾಯ್ಕ್ಕಿನ್ಱು ವಾಯ್ಕ್ಕುಮ್ ಕಣ್ಡೀರ್,
ಕೈಮ್ಮಾದುನ್ಪೊೞಿತ್ತಾಯೆನ್ಱು ಕೈತ್ತಲೈ ಪೂಶಲಿಟ್ಟೇ,
ಮೆಯ್ಮ್ಮಾಲಾಯೊೞಿನ್ದೇನ್ ಎಮ್ಬಿರಾನುಮೆನ್ ಮೇಲಾನೇ.

ಅಮ್ಮಾನ್ அம்மான் = ಸರ್ವೇಶ್ವರನು, ಆೞಿಪ್ಪಿರಾನ್ ~~[struck through]~~ ஆழிப்பிரான் ~~[struck through]~~ = ಚಕ್ರಾಯುಧವನ್ನು ಹಿಡಿದವನು, ಅವನ್ அவன் = ಅವನು, ಎವ್ವಿಡತ್ತಾನ್ எவ்விடத்தான் = ಎಂಥ ಉನ್ನತ ಸ್ಥಾನದಲ್ಲಿರುವವನು, ಯಾನ್ யான் = ನಾನು, ಆರ್ ஆர் ಯಾರು, ಎಮ್ಮಾ எம்மா ಎಂಥವರ, ಪಾವಿಯರ್ಕ್ಕುಮ್ பாவியர்க்கும் = ಪಾಪಿಗಳಿಗೂ, ವಿದಿ விதி = ದೈವವು (ಅನುಗ್ರಹವುದು), ವಾಯ್ಕ್ಕಿನ್ಱು வாய்க்கின்று = ಅನುಗ್ರಹಿಸುವ, ವಾಯ್ಕ್ಕುಮ್ வாய்க்கும் = ಕೃಪೆಯನ್ನು (ಫಲಿಸಿಯೇ ತೀರುವುದು), ಕಣ್ಡೀರ್ கண்டீர் = ಕಂಡಿರಾ, ಕೈಮ್ಮಾ கைம்மா ಆನೆಯ, ತುನ್ಬು துன்பு ಕಷ್ಟವನ್ನು (ಸಂಕಟವನ್ನು), ಒೞಿತ್ತಾಯ್ ஒழித்தாய் = ನೀಗಿಸಿದವನೇ, ಎನ್ಱು என்று ಎಂದು, ಕೈತ್ತಲೈ ಪೂಶಲ್ ಇಟ್ಟೇ கைதலை பூசல் இட்டே = ತಲೆಯ ಮೇಲ

(13)

ತ್ರೈಲೋಕ್ಯವಿಸ್ಮಯಃ, ಮೇಯ ರಾಮ ವಾತ್ಸಲ್ಯವಾದ, ಮೇಲ್ ಅಂಗ ಮಾಗ ಆತ್ಮೀ: (ಪ್ರೇಮ), ಆಯ ವ್ಯಾಮೋಹ ಬಿಲುಸ್ತದೇನ್ ಆಗಬೇಕ್ಕಾದೇನೆ, ಎಷ್ಟರ ನಮಗೆ ಗಾಂಭೀರ್ಯಂ = ಭಗವಂತನು, ಎನ್ ಮೇಲಾನೇ ಗಣ ಮೇಲಾ ... = ನನ್ನಲ್ಲಿ ಪ್ರೀತಿಯುಳ್ಳವನೇ

ಅವನು ಎಂಥ ಸ್ಥಾನದಲ್ಲಿರುವವನು! ಅವನು ಸರ್ವೇಶ್ವರ. ಚಕ್ರಾಯುಧವನ್ನು ಹಿಡಿದವನು. ನಾನು ಯಾರು! ಎಂಥ ಮಹಾ ಪಾಪಗಳನ್ನು ಮಾಡಿದವನು. ಆದರೂ ತಪ್ಪು (ದೋಷಗಳನ್ನು) ಸಹಿಸುವ ಶೀಲಗುಣವುಳ್ಳವನು, ಗಂಭೀರ! ಆದರೂ ತಪ್ಪು (ದೋಷಗಳನ್ನು) ವಾತ್ಸಲ್ಯವಾದ ಪ್ರೇಮಯುಳ್ಳವನೇ ಎಂದು ಕರೆಯುವ ಮೇಲ್ ತ್ರೈಲೋಕ್ಯ ವಾತ್ಸಲ್ಯವಾದ ಪ್ರೇಮಯುಳ್ಳವನೇ. ಭಗವಂತನು ನನ್ನಲ್ಲಿ ಪ್ರೀತಿಯುಳ್ಳವನೇ. (7)

ಭಗವಂತನಿಗೂ ತಮಗೂ ಇರುವ ಅಂತರವನ್ನು ತಮ್ಮ ಮೇಲೆ ಭಗವಂತನಿರುವ ಕೃಪೆ, ಔದಾರ್ಯ, ವಿಶ್ವಾಸವನ್ನು ಇಲ್ಲಿ ಆಳ್ವಾರರು ತಿಳಿಸುತ್ತಾರೆ.

"ಅವನೆಪ್ಪತ್ತನ್ ಯಾನಾರ್" — ಭಗವಂತನಿಗೂ ನಮಗೂ ಇರುವ ಅಂತರ ಎಷ್ಟು? ನಾಲ್ಕು ದಿಕ್ಕಿನಲ್ಲಿ ಶ್ರೇಷ್ಠರಾದ ಸೂರಿಗಳು ಸೇವಿಸುವ ಸರ್ವೇಶ್ವರ ಚಕ್ರಾಯುಧಧಾರಿ! ಅಲ್ಪನಾದ ನಾನು. ಮಹಾಪಾಪಿ. ಸರ್ವಗುಣಸಂಪನ್ನನಾದ ಚಕ್ರಾಯುಧಧಾರಿ! ಅನುಭವಿಸಲು ಶಕ್ಯನಲ್ಲವೇ? (ಈ ನನ್ನ ದೋಷಗಳನ್ನು ನೋಡಲಿಲ್ಲವೇ? ನಾನೇ ಅನುಭವಿಸಬೇಕಲ್ಲವೇ? ನನ್ನ ದೋಷಗಳನ್ನೇ ನೋಡಿದರೆ, ಭಗವಂತನ ಬಗ್ಗೆ ಇರುವ ಬಗೆಯ ಭಾವನೆಗಳು ನನ್ನಲ್ಲಿ ಮೂಡಿಬಂದರೂ, ಭಗವಂತನ ಬಗ್ಗೆ ಇರುವ ಬಗೆಯ ಭಾವನೆಗಳು ನನ್ನಲ್ಲಿ ಮೂಡಿಬಂದರೂ ಕಡಿಮೆಯಾಗುವುದೇ?)
ನನ್ನ ವ್ಯಾಮೋಹ ಎಂದಿಗಾದರೂ ಕಡಿಮೆಯಾಗುವುದೇ?)

'ಎಮ್ಮಾ ಪಾಪಿಯರ್ಕ್ಕುಮ್ ವಿದಿ ವಾಂಗಿ ತ್ತನ್ನೊಡು ವಾಯ್‌ಕ್ಕುಮ್ ಅನುಗ್ರಹಂ ಶೆಯ್ದೋನ್" — ಎಂಥ ಕಡುಪಾಪಿಗೂ ಭಗವಂತನು ಖಂಡಿತವಾಗಿ ಅನುಗ್ರಹಿಸುವವನು. ಅದು ಶೀಲಗುಣ ಕರುಣೆಯಿಂದ. ಏಕೆಂದರೆ, ಭಗವಂತನು ವಿನಯಶೀಲನು. ಅದು ಶೀಲಗುಣ ತೋರುವುದು. ಏಕೆಂದರೆ, ಭಗವಂತನು ತನ್ನ ಭಕ್ತರು, ಉದಾ. ತನ್ನ ಸೃಷ್ಟಿಯ ಬಗ್ಗೆ ಅವನಿಗೆ ತುಂಬ ಅನುಕಂಪ. ತನ್ನ ಭಕ್ತರು ತಪ್ಪಿದುದನ್ನೂ (ಸಹಿಸುವುದನ್ನೂ) ಸೃಷ್ಟಿಗೆ ಬರುವ ದೋಷಗಳನ್ನು ತಪ್ಪಿಸುವುದನ್ನೂ (ಸಹಿಸುವುದನ್ನೂ) ಅವನಿಗೆ ಸದಾ ಆಸಕ್ತಿ

"ತ್ವಮ್ಮಾ ಶರಣ್ಯಮ್ ಉಲ್ಲಾರ್ತಾಯ್" — ಇಲ್ಲಿ ಗಜೇಂದ್ರಮೋಕ್ಷದ ಪ್ರಸಂಗ ಬರುತ್ತದೆ. ಆನೆಯಂಥ ಪ್ರಾಣಿಯ ವಿಷಯದಲ್ಲೂ ಭಗವಂತನ ಕರುಣೆ ಬರುತ್ತದೆ. ಆನೆಯಂಥ ಪ್ರಾಣಿಯ ವಿಷಯದಲ್ಲೂ ಭಗವಂತನ ಸೌಶೀಲ್ಯ ಗುಣ. ಕಾಡಿನ ಸರೋವರದಲ್ಲಿ ಮೊಸಳೆಯ ಬಾಯಿಗೆ ಸಿಕ್ಕಿ ತನ್ನನ್ನು ಬಿಡಿಸಿಕೊಳ್ಳಲು ಸಾಧ್ಯವಿಲ್ಲದೆ, 'ಆದಿಮೂಲ ಸಿಕ್ಕಿಬಿದ್ದ ಗಜೇಂದ್ರನು ಆರಂಭ ಬಿಡಿಸಿಕೊಳ್ಳಲು ಸಾಧ್ಯವಿಲ್ಲದೆ, 'ಆದಿಮೂಲಾ, ಶರಣಾಗತಿ' ಎಂದು ಭಗವಂತನಲ್ಲಿ ಮೊರೆಯಿಟ್ಟಾಗ, ಸ್ವಾಮಿಯು ಚಕ್ರಾಯುಧಧಾರಿಯಾಗಿ ಅದರ ಬಳಿಗೆ ಧಾವಿಸಿ ಬಂದು, ಅದನ್ನು ದೋಷದಿಂದ ಪಾರುಮಾಡಿದನಲ್ಲ!

ಆಳ್ವಾರರು ತಮ್ಮನ್ನು ಸಂಸಾರಕ್ಲೇಶದಿಂದ ಬಿಡುಗಡೆ ಮಾಡು

Garani Srinivasan

ಗಜೇಂದ್ರನ ದಾಸಿಯೂ, ಕಲಿಯ ಮೇಲೆ ಕೈಜೋಡಿಸಿ, ಅಂಗಲಾಚುತ್ತಿದ್ದರೆ.

ಆಳ್ವಾರರು ಹೇಳುತ್ತಾರೆ: ಯಾರಿಗೂ ನಿಲುಕದ ಅತ್ಯುನ್ನತ, ಅತಿದೂರದ ಸ್ಥಳದಲ್ಲಿರುವ ಅವನು ದೇವದೇವಮೂರ್ತಿ. ಚಕ್ರಾಯುಧನಾಥ. ಕಡುಪಾಪಿಯಾದ ನಾನು ಯಾರು ಎಂದು ಅವನೆಂದೂ ನಿರ್ಲಕ್ಷಿಸುವುದಿಲ್ಲ. ಎಂಥ ಪಾಪಿನಾದರೂ ದೈವಾನುಗ್ರಹ ಹೊಂದಿದರಾಗ ಉಂಟಾಗುವುದು ಈ ನಂಬಿಕೆ ನನಗೆ ದೃಢವಾಗಿದೆ. ಗಜೇಂದ್ರನ ಸಂಕಟವನ್ನು ಅವನು ಆ ಕಾಲದಲ್ಲಿ ಪರಿಹರಿಸಲಿಲ್ಲವೇ? ನಾನೂ ದಾಸಿಯೂ ಕಲಿಯಮೇಲೆ ಕೈಜೋಡಿಸಿ, ಅವನ ಮೊರೆ ಹೊಕ್ಕಿದ್ದೇನೆ. ಅವನಲ್ಲಿ ನಿಜವಾದ ವ್ಯಾಕುಲದಿಂದಿದ್ದೇನೆ. ಅವನಿಗೆ ಅವನ ಭಕ್ತರಲ್ಲಿ, ನನ್ನಲ್ಲಿ, ಅತೀವ ವಾತ್ಸಲ್ಯವಿದೆ.

8 மேலாத் தேவர்களும் நிலத் தேவரும் மேவித் தொழும்,
மாலார் வந்தினநாள் அடியேன் மனத்தே மன்னினார்,
சேலேய் கண்ணியரும் பெருஞ்செல்வமும் நன்மக்களும்,
மேலாத் தாய் தந்தையும் அவரே இனியாவாரே

ಮೇಲಾತ್ತೇವರ್‌ಗಳುಮ್ ನಿಲತ್ತೇವರುಮ್ ಮೇವಿತ್ತೊಳುಮ್,
ಮಾಲಾರ್ ವನ್ದಿನನಾಳ್ ಅಡಿಯೇನ್ ಮನತ್ತೇ ಮನ್ನಿನಾರ್,
ಶೇಲೇಯ್ ಕಣ್ಣಿಯರುಮ್ ಪೆರುಞ್ಜೆಲ್ವಮುಮ್ ನನ್‌ಮಕ್ಕಳುಮ್,
ಮೇಲಾತ್ತಾಯ್ ತನ್ದೈಯುಮ್ ಅವರೇ ಇನಿಯಾವಾರೇ

ಮೇಲ್ ಆಮ್ ತೇವರ್‌ಗಳುಮ್ மேல் ஆம் தேவர்களும்: ಮೇಲಲೋಕದ ದೇವತೆಗಳೂ, ನಿಲಮ್ ತೇವರ್‌ಗಳುಮ್ நிலம் தேவர்களும் ಭೂಲೋಕದ ದೇವರುಗಳೂ, ಮೇವಿ மேவி = ಆದರದಿಂದ ತೊಳುಮ್ தொழும் ಎರಗುವ, ಮಾಲಾರ್ மாலார்: ಭಗವಂತನು, ವನ್ದು வந்து = ನನ್ನಬಳಿಗೆ ಬಂದು, ಇನನಾಳ್ இனநாள் = ಈಗ, ಅಡಿಯೇನ್ அடியேன் = ದಾಸನಾದ ನನ್ನ, ಮನತ್ತೇ மனத்தே = ಮನಸ್ಸಿನಲ್ಲಿ (ಅಂತರಂಗದಲ್ಲಿ), ಮನ್ನಿನಾರ್ மன்னினார் = ನೆಲಸಿದ್ದಾನೆ, ಶೇಲ್ ಏಯ್ சேல் ஏய்: ಮೀನನ್ನು ಹೋಲುವ, ಕಣ್ಣಿಯರುಮ್ கண்ணியரும் = ಕಣ್ಣುಳ್ಳವರೂ, ಪೆರು ಶೆಲ್ವಮುಮ್ பெருசெல்வமும் = ಮಹದೈಶ್ವರ್ಯವೂ, ನಲ್ ಮಕ್ಕಳುಮ್ நல் மக்களும் = ಒಳ್ಳೆಯ (ಗುಣವಂತರಾದ) ಮಕ್ಕಳೂ, ಮೇಲ್ ಆಮ್ ತಾಯ್ ತನ್ದೈಯುಮ್ மேல் ஆம் தாய் தந்தையும் = ಒಳ್ಳೆಯ (ಗುಣವಂತರಾದ) ತಾಯಿತಂದೆಗಳೂ, ಅವರೇ அவரே = ಅವನೇಯು, ಇನಿ இனி = ಇನ್ನು, ಆವಾರೇ ஆவாரே: [illegible]

©Garani Srinivasan

ಮೇಲಿನ ಲೋಕದ ದೇವತೆಗಳೂ, ಭೂಲೋಕದ ದೇವತೆಗಳೂ ಆದರದಿಂದ ಎರಗುವ ಭಗವಂತನು ಬಂದು ಈಗ ದಾಸನಾದನನ್ನು ಅಂತರಂಗದಲ್ಲಿ ನೆಲಸಿದ್ದಾನೆ. ಮೀನಿನಂತೆ ಕಣ್ಣುಳ್ಳವರೂ ಮದದೃಷ್ಟಿಯುಳ್ಳ ಒಳ್ಳೆಯ ಗುಣವಂತರಾದ ಮಕ್ಕಳೂ (8)
ಒಳ್ಳೆಯ (ಮೇಲಾದ) ತಾಯಿ ತಂದೆಗಳೂ ಇನ್ನು ಆ ಭಗವಂತನೇ ಆಗುತ್ತಾನೆ.

'ಭಗವಂತನೆಲ್ಲಿ, ನಾನೆಲ್ಲಿ? ಕಡುಪಾಪಿಯಾದ ನನ್ನ ಬಳಿ ಭಗವಂತನು ಬರಬೇಕೆಂದು ನಾನು ಅಪೇಕ್ಷಿಸಿದ್ದುದು ಉಚಿತವೇ' - ಎಂದು ಹಿಂದಿನ ಪಾಶುರ ಹೇಳಿತು. ಈ ಪಾಶುರದಲ್ಲಿ ಭಗವಂತನ ಅಪಾರ ಕಾರುಣ್ಯವನ್ನು ಹೇಳಲಾಗುತ್ತದೆ.

'ಮೇಲಾತ್ತೇವರ್ಗಳ್' - ಮೇಲಿನ ಲೋಕದ ದೇವತೆಗಳು - ಬ್ರಹ್ಮಾದಿ ದೇವತೆಗಳು, ಪರಮ ಭಕ್ತರಾದ ಮಹರ್ಷಿಗಳು, ನಿತ್ಯಸೂರಿಗಳು ಇತ್ಯಾದಿ ದೇವತೆಗಳು ಮೇಲಿನ ಲೋಕಗಳಲ್ಲಿರುವವರು.

'ನಿಲತ್ತೇವರ್ಗಳ್' - ಭೂಲೋಕದಲ್ಲಿ ವಾಸಿಸುವ ದೇವತೆಗಳು - ಭಗವಂತನನ್ನು ಪಟ್ಟಾಗಿ ಆಶ್ರಯಿಸಿ, ದೃಢಭಕ್ತಿಯಿಂದ ಭಜಿಸಿ ಪೂಜಿಸುವ ಪರಮ ಸಾತ್ವಿಕರಾದ ದಿವ್ಯಸ್ತ್ರರು

ಆಳ್ವಾರರು ಹೇಳುತ್ತಾರೆ: ಬ್ರಹ್ಮಾದಿ ದೇವತೆಗಳೂ, ಭೂಲೋಕದ ದಿವ್ಯಸ್ತ್ರರೂ ಬಿಡದೆ ಭಜಿಸುವ ಸರ್ವೇಶ್ವರನೇ ಬಂದು, ನನ್ನ ಅಂತರಂಗದಲ್ಲಿ ನೆಲಸಿದ್ದಾನೆ. ಇನ್ನು ಮೇಲೆ ನನಗೆ ಸುಂದರ ಸ್ತ್ರೀಯರಾಗಲಿ, ಅಪಾರ ಸಂಪತ್ತಾಗಲಿ, ಗುಣವಂತರಾದ ಮಕ್ಕಳಾಗಲಿ, ಒಳ್ಳೆಯ ತಾಯಿ ತಂದೆಯರಾಗಲಿ - ಎಲ್ಲರೂ ಆ ಭಗವಂತನೇ.

ಭಗವಂತನು ಒಲಿದನೆಂದರೆ, ಭಕ್ತನಿಗೆ ತಾಯಿ-ತಂದೆ, ಬಂಧುಬಳಗ, ಮಕ್ಕಳು-ಮರಿ, ಆಳು-ಕಾಳು, ಭೋಗ-ಭಾಗ್ಯಗಳೆಂಬ ಸಾಂಸಾರಿಕವಾದ ವ್ಯಾಮೋಹವು ಅಳಿಯುತ್ತದೆ. ಅವನಿಗೆ ಭಗವಂತನೇ ಎಲ್ಲ ಸಂಪತ್ತೂ ಎಂದಂತೆ.

9. ஆவாரார் துணையென்று அலைநீர்க் கடலுள் அழுந்தும்
நாவாய்போல், பிறவிக் கடலுள் நின்று நான் துளங்க,
தேவார் கோலத்தொடும் திருச்சக்கரம் சங்கினொடும்,
ஆவாவென்றருள் செய்து அடியேனொடு மானானே.

ಆವಾರಾರ್ ತುಣೈಯೆನ್ರು ಅಲೈನೀರ್ಕ್ಕಡಲುಳ್ ಅಳುನ್ದುಮ್
ನಾವಾಯ್ ಪೋಲ್, ಪಿಱವಿಕ್ಕಡಲುಳ್ ನಿನ್ರು ನಾನ್ ತುಳಙ್ಗ,
ತೇವಾರ್ ಕೋಲತ್ತೊಡುಮ್ ತಿರುಚ್ಚಕ್ಕರಮ್ ಶಙ್ಗಿನೊಡುಮ್,
ಆವಾವೆನ್ರರುಳ್ ಶೆಯ್ದು ಅಡಿಯೇನೊಡು ಮಾನಾನೇ.

ಆವಾರ್ ಆರ್ ஆவார் ஆர் : ಆಗುವವರು ಯಾರು, ತುಣೈ துணை =
ಸಹಾಯಕರು, ಎನ್ಱು என்று = ಎಂದು, ಅಲೈ ನೀರ್ ಕಡಲುಳ್ ಅೞು
நீர் கடலுள் = ಅಲೆಗಳು ಬಲವಾದ ಕಡಲಲ್ಲಿ ಅಯುನ್ನುವ அழுந்
தும் = ಮುಳುಗುವ ನಾವಾಯ್ ಪೋಲ್ நாவாய் போல் = ನಾವೆಯಂತೆ,
(ಹಡಗಿನಂತೆ), ಪಿಱವಿ ಕಡಲುಳ್ பிறவி கடலுள் = ಹುಟ್ಟೆಂಬ ಕಡ
ಲಲ್ಲಿ, ನಿನ್ಱು நின்று = ಇರುತ್ತ, ನಾನ್ நான் = ನಾನು, ತುಳಂಗ துளங்க =
ನಡುನಡುಗುತ್ತಿರಲು, ತೇವ ಆರ್ தேவ ஆர் = ದಿವ್ಯಕಾಂತಿಯುಳ್ಳ (ದಿವ್ಯವಾ
ದ), ಕೋಲತ್ತೊಡುಮ್ கோலத்தொடும் = ಸೌಂದರ್ಯದೊಂದಿಗೆ,
ತಿರು திரு = ಪವಿತ್ರವಾದ, ಚಕ್ಕರಮ್ சக்கரம் = ಚಕ್ರಾಯುಧದೊಡನೆ
ಯೂ, ಶಂಖಿನೊಡುಮ್ சங்கினொடும் = ಶಂಖದೊಡನೆಯೂ,
ಆ ಆ ಎನ್ಱು ஆஆ என்று = ಅಯ್ಯೋ ಅಯ್ಯೋ ಎಂದು, ಅರುಳ್ ಶೆಯ್ದು
அருள் செய்து = ಕೃಪೆಮಾಡಿ, ಅಡಿಯೇನೊಡುಮ್ அடியேனொடும்
= ಈ ದಾಸ ಸೇವಕನೊಡನೆ, ಆನಾನೇ ஆனானே = ಜೊತೆಯಾದನಲ್ಲ (ಜತೆಗೆ
ಬಂದನಲ್ಲ).

'ಬಡಾ ಬರುವವರು ಯಾರು' ಎಂದು ಅಲೆಗಳು ತುಂಬಿದ ಕಡಲಲ್ಲಿ
ಮುಳುಗುವ ಹಡಗಿನಂತೆ, ಹುಟ್ಟೆಂಬ ಕಡಲಲ್ಲಿರುತ್ತ ನಾನು ನಡುನಡುಗು
ತ್ತಿರಲು, ದಿವ್ಯವಾದ ಕಾಂತಿ ಸೌಂದರ್ಯದೊಂದಿಗೆ, ಶ್ರೀಚಕ್ರಾಯುಧ ಶಂಖ
ಗಳೊಡನೆಯೂ ಅಯ್ಯೋ ಅಯ್ಯೋ ಎಂದು ಕೃಪೆಮಾಡಿ ಈ ದಾಸ ಸೇವಕನೊ (9)
ಡನೆ ಜತೆಗೆ ಬಂದನಲ್ಲ! (ಜೊತೆಯಾದನಲ್ಲ!)

ಭಗವಂತನ ಕಾರುಣ್ಯವನ್ನು ಕುರಿತು ಇಲ್ಲಿ ಹೇಳಲಾಗುತ್ತಿದೆ. ಈ ಸಂದರ್ಭ
ದಲ್ಲಿ ಸುಂದರವಾದ ಒಂದಂಶವನ್ನು ಬಳಸಿಕೊಳ್ಳಲಾಗಿದೆ.

ಅಲೆಗಳು ತುಂಬಿದ ಕಡಲಲ್ಲಿ ಹಡಗೊಂದು ಸಿಕ್ಕಿಬಿದ್ದಿದೆ. ಅದನ್ನು ಆ ಸಂಕಟದಿಂ
ದ ಬಿಡಿಸುವವರು ಯಾರಾದರೂ ಬೇಕು. ಅದಕ್ಕಾಗಿ ಕಾತರ. ಹಾಗೆಯೇ, ಸಂಸಾರವೆಂಬುದೇ
ಒಂದು ಭಯಂಕರವಾದ ಕಡಲು. ಅದರಲ್ಲಿ ಸಿಕ್ಕಿಬಿದ್ದಿರುವವನು ಜೀವನು. ಅವನನ್ನು
ಆ ಸಂಕಟದಿಂದ ಬಿಡಿಸುವವರು ಯಾರಾದರೂ ಬೇಕಲ್ಲ? ಅದಕ್ಕಾಗಿ (ಆ ಸಹಾಯಕ್ಕಾಗಿ ಕಾತ
ರ).— ಕಾತರದ ವಿಷಯ ಹೀಗಿದೆ.

" ಆವಾರ್. ನಾವಾಯ್ ಪೋಲ್ :- ಅಲೆಗಳು ಬಲ
ವಾಗಿ ಏಳುತ್ತಿರುವ ಕಡಲಲ್ಲಿ, ಅಲೆಗಳ ಹೊಡೆತಕ್ಕೆ ಹಡಗೊಂದು ಸಿಕ್ಕಿಬಿದ್ದಿದೆ.
ತಪ್ಪಿಸಿಕೊಂಡು ಪಾರಾಗಲಾರದೆ ಅದು ಮುಳುಗುವ ಸ್ಥಿತಿಯಲ್ಲಿದೆ. ಅದರಲ್ಲಿರುವ
ವರು ಇನ್ನೇನು ನಡೆ? ನಮಗೆ ಈಗ ಸಹಾಯಕ್ಕೆ ಬರುವವರು ಯಾರು? ನಾವು
ಈ ಕಷ್ಟದಿಂದ ಪಾರಾಗುವುದಾದರೂ ಹೇಗೆ? ಎಂದು ಪ್ರಾಣಭಯದಿಂದ
ಕೂಗಾಡುವ ಪರಿಸ್ಥಿತಿ ಇದು ಒಂದು ಬಗೆಯ ಭಾವ.

ಪಿಳ್ಳಾನ್ ಕುಟ್ಟ್ಗ — 'ಫುಬ್ಬು' ಎಂಬುದೇ ಒಂದು ಕಥೆ.

ಫುಬ್ಬುನೊಡನೆ ಬರುವುದು ಹೇಗೆ, ಮುಟ್ಟಿ ನಾವುಗಳು ಮುಕ್ತಿ ಮರುಫುಬ್ಬು [illegible] ಶಬ್ದಬದ್ಧಯಲ್ಲದಂತೆ ಫುಬ್ಬು ಬಂದರೆ ಬಂದೆ ಒಂದು ಬರುತ್ತಲೇ ಇರುತ್ತದೆ. ಇವೇ ಕಥೆಲ ಅಲೆಗಳು ಅದರಂತೆ ಶಷ್ಟಿಪ ಕೇಳ್ಪುವುದೇ ಅದನ್ನು ಅನುಭವಿಸುತ್ತಾ ಅದರಲ್ಲಿಯೇ ಬದ್ಧ ಮುಳುಗುತ್ತಾ ತೇಲುತ್ತಾ [illegible] ಬವನ್ನು ಅನುಭವಿಸುತ್ತಿರಬೇಕಾಗುವುದು. [illegible] ದೇ? ಅದು ಹೇನೆನಾಗುವುದೇ? ಅದಕ್ಕೆಯಾಗದಲಾ ನಿದಾಯಿತ್ತೆ ಬರುವರೇ? ಅಂದ್ರವರಬ್ಬಾರೆಯೇ?' — ಇದು ಕೇಶರ. ಇದುವಾ ನರದ ಎರಡನೆಯ ಭಾಗ [illegible]

ಒಟ್ಟಿನಲ್ಲಿ, ಫುಬ್ಬು - ನಾವುಗಳ ವಿಟ್ಟಿನೆ ಸಿಕ್ಕಿಬಿದ್ದು ನರಳುತ್ತಿರುವ ಜೀವನನ ಬದುಕಿಗೆ ಏನಾದರೂ ಅವಕಾಶವುಂಟೇ? ಯಾರಾದರೂ ನಿದಾ ಯಾರು ಒದಗಿ ಬರುತ್ತಾರೆಯೇ? ಎಂದರೆ

ಆಳ್ವಾರರು ಹೇಳುತ್ತಾರೆ: ಬಲವಾದ ಅಲೆಗಳಿಂದ ಕಲಂಕಿದ [illegible] ಕಥಲಲ್ಲಿ ಸಿಕ್ಕಿಬಿದ್ದು ಮುಳುಗುವ ಸ್ಥಿತಿಯಲ್ಲಿರುವ [illegible] ಕಥಲಲ್ಲಿ ಸಿಕ್ಕಿಬಿದ್ದು ಮುಳುಗುವ ಸ್ಥಿತಿಯಲ್ಲಿದ್ದೇನೆ. 'ಫುಬ್ಬು' ಎಂಬ ಕಥಲಲ್ಲಿ ನಾನು ಸಿಕ್ಕಿಬಿದ್ದು ಮುಳುಗುವ ಸ್ಥಿತಿಯಲ್ಲಿದ್ದೇನೆ. [illegible] ಭಯದಿಂದ ಕತ್ತರಿಸುತ್ತಿದ್ದೇನೆ. ನನ್ನೀ ಸ್ಥಿತಿಯನ್ನು ಕಂಡು [illegible] ಅಯ್ಯೋ ಅಯ್ಯೋ ಎನ್ನುತ್ತಿರುವ [illegible] ಮುಕ್ತಿಯಾಗಿ ನನ್ನ ನಿದಾಯಿತ್ತಿಬಂದನಲ್ಲ! ನನಗೆ [illegible] ಯಾದನಲ್ಲ!

10\. ஆனானாளுடையானென்று அஃதேகொண்டுகந்து வந்து,
தானேயின்னருள் செய்து என்னைமுற்றவும் தானானான்,
மீனாயாமையுமாய் நரசிங்கமுமாய்க் குறளாய்,
கானாரேனமுமாய்க் கற்கியாமின்னங்கார் வண்ணனே.

ಆನಾನಾಳುಡೈಯಾನೆನ್ರು ಅಃದೇ ಕೊಂಡುಗಂದು ವಂದು,
ತಾನೇ ಇನ್ನರುಳ್ ಶೆಯ್ದು ಎನ್ನೈ ಮುಟ್ರವುಮ್ ತಾನಾನಾನ್,
ಮೀನಾಯಾಮೈಯುಮಾಯ್ ನರಶಿಙ್ಗಮುಮಾಯ್ ಕ್ಕುರಳಾಯ್,
ಕಾನಾರೇನಮುಮಾಯ್ ಕ್ಕಲ್ಕಿಯಾಮಿನ್ನಙ್ಗಾರ್ವಣ್ಣನೇ

ಆನಾನ್ ஆனான் = ಆಗಿದ್ದಾನೆ (ಒದಗಿ ಬಂದಿದ್ದಾನೆ), ಆಳುಡೈಯಾನ್
ஆளுடையான் = ನನ್ನನ್ನು ಆಳುವವನು, ಎನ್ರು என்று = ಎಂದು,
ಅಃದೇ அஃதே = ಅದನ್ನೇ, ಕೊಂಡು கொண்டு = ಹಿಡಿದು,

ಉವನ್ದು உகந்து ಆಶೆಯಿಂದ (ಉತ್ಸಾಹದಿಂದ), ವನ್ದು வந்து = ಬಂದು,
ತಾನೇ தானே = ತಾನಾಗಿಯೇ, ಇನ್ இன் ಇನಿದಾದ, ಅರುಳ್ ಶೆಯ್ದು
அருள் செய்து: ಕೃಪೆಮಾಡಿ, ಎನ್ನೈ என்னை = ನನ್ನ, ಮುಟ್ರುಮ್ முற்
றவும் = ಪೂರ್ತಿಯಾಗಿ ತಾನ್ ಆನಾನ್ தான் ஆனான் = ತಾನೇ ಆಗಿದ್ದಾ
ನೆ, ಮೀನ್ ಆಯ್ மீன் ஆய் = ಮೀನನಾಗಿ, ಆಮೈಯುಮ್ ಆಯ್ ஆ
மையும் ஆய்: ಆಮೆಯೂ ಆಗಿ, ನರಶಿಙ್ಗಮುಮ್ ಆಯ್ நரசிங்
கமும் ஆய் = ನರಸಿಂಹನೂ ಆಗಿ, ಕುಱಳ್ ಆಯ್ குறள் ஆய் =
(ವಾಮನನಾಗಿ), ಕುಳ್ಳ ಬ್ರಹ್ಮಚಾರಿ ಆಗಿ, ಕಾನ್ ಆರ್ கான் ஆர் = ಕಾಡಿನಲ್ಲಿ ಸಂಚರಿಸು
ವ, ಏನಮುಮ್ ಆಯ್ ஏனமும் ஆய் = ಮಹಾವರಾಹನೂ ಆಗಿ, ಕಱ್
ಕಿ ಆಮ್ கற்கி ஆம் = ಕಲ್ಕಿಯೂ ಆಗುತ್ತಾನೆ ಇನ್ನಮ್ இன்ன
ம் = ಇನ್ನು (ಇವಕ್ಕೆ ಮೇಲೆ), ಕಾರ್ ವಣ್ಣನೇ கார்வண்ணனே =
ಕಾರ್ಮುಗಿಲ ಬಣ್ಣದವನೇ.

ನನ್ನನ್ನುಳ್ಳವನಾಗಿದ್ದಾನೆ ಎಂದು, ಅದನ್ನೇ ಸ್ವೀಕರಿಸಿ, ಆಶೆ ಉತ್ಸಾಹದಿಂದ ಬಂದು ತಾನಾಗಿಯೇ ಇನಿದಾದ ಕೃಪೆಮಾಡಿ, ನನ್ನ ಪೂರ್ತಿಯಾಗಿ ತಾನೇ ಆಗಿದ್ದಾನೆ. ಮೀನನಾಗಿ, ಆಮೆಯಾಗಿ, ನರಸಿಂಹನಾಗಿ, ವಾಮನನಾಗಿ, ಕಾಡಿನಲ್ಲಿ ಸಂಚರಿಸುತ್ತಿರುವ ಮಹಾವರಾಹನೂ ಆಗಿ, ಇನ್ನು ಮೇಲೆ, (10)
ಕಲ್ಕಿಯೂ ಆಗುತ್ತಾನೆ, ಕಾರ್ಮುಗಿಲ ಬಣ್ಣದವನೇ

ಆನಾನ್ ಅಭಿಪ್ರಾಯ

ಇನ್ನರುಳ್ ಶೆಯ್ದು - ಸಂಸಾರಸಾಗರದಲ್ಲಿ ಬಿದ್ದು ಹೊರಳಾಡುತ್ತಿದ್ದ ಕಡುಸಂಕಟಸಮಯದಲ್ಲಿ ಭಗವಂತನು ನನ್ನಲ್ಲಿ ಕರುಣೆತೋರಿ ನನ್ನನ್ನು ಕಾಪಾಡಿದನಲ್ಲ, ನನಗೆ ತಾನಾಗಿಯೇ ಇದಿರು ಬಂದನಲ್ಲ ಎಂದು ನನಗೆ ಅವನಲ್ಲಿ ಕೃತಜ್ಞತೆ ಉಕ್ಕಿ ಬರುತ್ತದೆ. ನಾನು ಆಗ ಏನೇನು ಆಗಿದ್ದೆನೋ ಆದುದನ್ನೇ ಸ್ವೀಕರಿಸಿದನು ಭಗವಂತ. ಅಕ್ಕರೆಯಿಂದ ನನ್ನ ಬಳಿಗೆ ತಾನಾಗಿಯೇ ಬಂದ! ನನ್ನ ಒಳಗೂ ಹೊರಗೂ ಸಂಪೂರ್ಣವಾಗಿ ತುಂಬಿಕೊಂಡು, ನನ್ನನ್ನು ಉದ್ಧಾರ ಮಾಡಿದ್ದಾನಲ್ಲ!

ಆಳ್ವಾರರು ಹೇಳುತ್ತಾರೆ: ಸರ್ವೇಶ್ವರನು ನನ್ನ ವಿಷಯದಲ್ಲಿ ಎಷ್ಟು ಅಪಾರ ಕೃಪೆ ತೋರಿದ್ದಾನೆ! ನನ್ನನ್ನು ಉದ್ಧರಿಸುವುದಕ್ಕಾಗಿಯೇ ತಾನಾಗಿಯೇ ನನ್ನ ಅಂತರಂಗದಲ್ಲಿ ಬಂದು ಸೇರಿಕೊಂಡು, ನನಗೆ ಎಡೆಬಿಡದ ಸಂಗಾತಿಯಾಗಿದ್ದಾನೆ. ಹಿಂದೆ ನಾನು ಹೇಳಿಕೊಂಡದ್ದುಂಟು. ಆದರೆ, ಭಗವಂತನು, ನನಗೆ ತಿಳಿಯದಂತೆಯೇ, ನನ್ನನ್ನೆಳೆದು ಬಿಡದಿದ್ದಾನೆ. ಹಿಂದಿನಿಂದ ನಾನು ಯಾವ ಯಾವ ಜನ್ಮವನ್ನು ಕಳೆದೆನೋ, ಮೀನೇ ಆದೆನೋ, ಮೃಗವೇ ಆದೆನೋ,

ನರಮೃಗವೇ ಆದೆನೋ, ಮಾನವನೇ ಆದೆನೋ ಅದೆಲ್ಲವೂ ಆಗಿ, ಆಯಾ ನನ್ನ ಜನ್ಮಕ್ಕೆ ತಕ್ಕ ರೂಪವನ್ನೆತ್ತಿದ್ದು, ಅಂದಿನಿಂದಲೂ ನನ್ನನ್ನು ಬಿಡದೆ ಬರುತ್ತಲೇ ಬಂದಿದ್ದಾನೆ. ಆ ಅವನ [illegible] ಅವತಾರಗಳು [illegible] - ಎಂದರೆ, ಮೀನನಾಗಿ, ಆಮೆಯಾಗಿ, ವರಾಹರೂಪನಾಗಿ, ನರಸಿಂಹನಾಗಿ, ವಾಮನವಟುವಾಗಿ, ಇತರ ಮಾನವರೂಪಿಯಾಗಿ, ನನ್ನನ್ನು ಬಿಡದೆ ಬರುತ್ತಲೇ ಬಂದಿದ್ದಾನೆ. ಇನ್ನು ಮುಂದೆ, ಅವನು ಕಲ್ಕಿಸ್ವರೂಪಿಯೂ ಆಗುತ್ತಾನೆ. ಕಾಮುಗಿಲವರ್ಣನಾದ ಭಗವಂತನೇ ನನ್ನ ಬಳಿ [illegible] ರನಾಗಿ ತಾನೇ [illegible] ತುಂಬಿಕೊಂಡಿದ್ದಾನೆ!

ಎಲ್ಲರಿಗೂ ಭಗವಂತ ಸರ್ವರಕ್ಷಕನಲ್ಲವೇ? ತನ್ನ ಸೃಷ್ಟಿಯ ವಿಷಯದಲ್ಲಿ ಅವನಿಗೆ ಕನಿಕರವಿದೆಯಲ್ಲವೇ? ಆದ್ದರಿಂದಲೇ ಅಲ್ಲವೇ ಅವನು ಎಲ್ಲರ ಕಷ್ಟಗಳನ್ನು ನೀಗಿಸಲು ಕಾತರನಾಗಿರುವುದು?

11. கார்வண்ணன் கண்ணபிரான் கமலத்தடங்கண்ணன் தன்னை,
ஏர்வளவொண் கழனிக் குருகூர்ச் சடகோபன் சொன்ன,
சீர்வண்ண வொண்தமிழ்கள் இவையாயிரத்துள் இப்பத்தும்,
ஆர்வண்ணத் தாலுரைப்பார் அடிக்கீழ்ப் புகுவார் பொலிந்தே.

ಕಾರ್‌ವಣ್ಣನ್ ಕಣ್ಣಪಿರಾನ್ ಕಮಲತ್ತಡಙ್ಗಣ್ಣನ್ ತನ್ನೈ,
ಏರ್‌ವಳವೊಣ್ ಕಳನಿಕ್ಕುರುಗೂರ್‌ಚ್ಚಡಗೋಪನ್ ಶೊನ್ನ,
ಶೀರ್‌ವಣ್ಣವೊಣ್ ತಮಿೞ್ಗಳ್ ಇವೈಯಾಯಿರತ್ತುಳ್ ಇಪ್ಪತ್ತುಮ್,
ಆರ್‌ವಣ್ಣತ್ತಾಲುರೈಪ್ಪಾರ್ ಅಡಿಕ್ಕೀೞ್‌ಪ್ಪುಗುವಾರ್ ಪೊಲಿನ್ದೇ.

ಕಾರ್‌ವಣ್ಣನ್ கார்வண்ணன் = ಕಾಮುಗಿಲ ಬಣ್ಣದವನು, ಕಣ್ಣನ್ கண்ணன் = ಶ್ರೀಕೃಷ್ಣಾವತಾರಿಯು, ಪಿರಾನ್ பிரான் = ಉಪಕಾರಕನು, ಕಮಲತ್ತಡಙ್ಗಣ್ಣನ್ ತನ್ನೈ கமலம் தட கண்ணன் தன்னை = ಕಮಲದಂತೆ ವಿಶಾಲವಾದ ಕಣ್ಣುಳ್ಳವನನ್ನು, ಏರ್ ஏர் = ನೇಗಿಲುಗಳು, ವಳಮ್ வளம் = ವಿಸ್ತಾರವಾದ, ಒಣ್ ஒண் = ಸುಂದರವಾದ, ಕಳನಿ கழனி = ಗದ್ದೆಗಳ, ಕುರುಗೂರ್ குருகூர் = ತಿರುಕ್ಕುರುಗೂರಿನ, ಶಡಗೋಪನ್ சடகோபன் = ಶಠಕೋಪನು (ನಮ್ಮಾಳ್ವಾರರು), ಶೊನ್ನ சொன்ன = ಹೇಳಿದ, ಶೀರ್ சீர் = ಶ್ರೇಷ್ಠವಾದ, ವಣ್ಣಮ್ வண்ணம் = ಗುಣವುಳ್ಳ, ಒಣ್ ஒண் = ಸುಂದರವಾದ, ತಮಿೞ್ಗಳ್ தமிழ்கள் = ತಮಿಳಿನ [illegible] ರಚನೆಯಾದ, ಇವೈ ಆಯಿರತ್ತುಳ್ இவை ஆயிரத்துள் = ಈ ಸಾವಿರದಲ್ಲಿ (ಪಾಶುರಗಳಲ್ಲಿ), ಇಪ್ಪತ್ತುಮ್ இப்பத்தும் = ಈ ಹತ್ತನ್ನು, ಆರ್ ஆர் = ಪೂರ್ಣವಾದ, ವಣ್ಣತ್ತಾಲ್ வண்ணத்தால் = [illegible] ರೀತಿಯಲ್ಲಿ,

Garani Srinivasan

ಉತ್ಪಾರ್ ಉಣಾರಪ್ಪಾರ್ = ಸಂತೃಪ್ತರು (ಕುಡಿದವರು), ಅಡಿಕ್ಕೀಳ್ ಅಳಿಕ್ಕ
ಕೊಳ್ಳ: (ಭಗವಂತನ) ತಿರುವಡಿಗಳ ಬಳಿಯಲ್ಲಿ ಪುಗುವಾರ್ ಪುಕ್ಕುವಾರ್ = ಹೋಗುವವರು,
(ಪ್ರವೇಶಿಸುವರು), ಪೊಲಿಂದೇ ಪೊಲಿಗಿನ್ರತ್ತೇ = ಬೆಳಗುವ ಜೀವನದಿಂದಲೇ. (ಸಮೃ
ದ್ಧಿಯಾದ ಜೀವನದಿಂದಲೇ).

ಕಾಯಾಂಬೂಗಳ ಬಣ್ಣದವನು, ಶ್ರೇಷ್ಠವಾದಂಥ (ಅರ್ಥಪೂರ್ಣವಾಗಿ),
ಸರ್ವೇಶ್ವರನು, ಅದ ಕೋಮಲದಂತೆ ವಿಶಾಲವಾದ ಕಣ್ಣುಗಳನ್ನು ಹೊಂದಿರುವ, ನೀಲ ಬಣ್ಣದ
ವಿಸ್ತಾರವಾದ ಸೌಭಾಗ್ಯದ ನದಿಗಳ ತಿರುಕ್ಕುರುಕೂರಿನ ಶಠಕೋಪನು (ನಮ್ಮಾ
ಳ್ವಾರರು) ಹೇಳಿದ ಶ್ರೇಷ್ಠವಾದ ನಾನಾವೃತ್ತ ಸುಂದರವಾದ ತಮಿಳಿನ ಪಾದ ಈ
ಸಾವಿರ ಪಾಶುರಗಳಲ್ಲಿ ಈ ಹತ್ತನ್ನು ಶ್ರೇಷ್ಠವಾದ ಆಸಕ್ತಿಯಲ್ಲಿ ಓದುವವರು, ಭಗ
ವಂತನ ತಿರುವಡಿಗಳ ಬಳಿ ~~ಸಮೃ~~ ಸಮೃದ್ಧಿಯಾದ ಜೀವನದಿಂದಲೇ ಪ್ರವೇಶಿಸು 11
ವರು

ಈ ತಿರುವಾಯ್ಮೊಳಿಯ ಕಡೆಯ ಪಾಶುರ ಇದು. ಸಂಸಾರದಲ್ಲಿ
ಸಿಕ್ಕಿಬಿದ್ದು ಕೊಳ್ಳುತ್ತಿರುವ ಚೇತನನ ಉಜ್ಜೀವನಕ್ಕೆ ಇದರಲ್ಲಿ ದಾರಿ ಸುಂದರವಾ
ದಲಿ ~~ಬಿಡು ಇದರಲ್ಲಿ~~ ಬರುತ್ತದೆ. ಚೇತನನು ಯಾರೇ ಆಗಲಿ ಯಾವ ಮಾರ್ಗದಲ್ಲೇ
ಇರಲಿ. ಭಗವದ್ವಿಷಯವಾದ ಜ್ಞಾನ, ಭಕ್ತಿಗಳು ಅವನಿಗೆ ಇಲ್ಲದಿದ್ದರೂ ಚಿಂತೆಯಿ
ಲ್ಲ. ಕೇಳಿಕೆಯಾಗಿಯೂ, ನಟನೆಯಾಗಿಯೂ, ಇತರರನ್ನು ವಿಡಂಬಿಸುವುದಕ್ಕಾ
ಯಾಗಲಿ ಭಗವನ್ನಾಮವನ್ನು ಹೇಳುತ್ತ ಇದ್ದರೆ ಸಾಕು. ಅದೇ ಅವನಿಗೆ ಬರಬ
ರುತ್ತ ಬೆಳೆದು ಅಭ್ಯಾಸವಾಗುತ್ತದೆ. ಪ್ರಾರಂಭದಲ್ಲಿ ಅವನಲ್ಲಿ ದೃಢವಾದ
ಭಕ್ತಿಯನ್ನು ತರುತ್ತದೆ. ಕ್ರಮೇಣ ಅವನು ಪಕ್ವನಾಗಿ ಭಗವಂತನ ಅಡಿದಾವರೆ
ಗಳನ್ನು ಸೇರುವುದರಲ್ಲಿ ಸಂದೇಹವೇ ಇಲ್ಲ.

ಭಗವಂತನಿಗೆ ಚೇತನರ ವಿಷಯದಲ್ಲಿ ಯಾವ ಬಗೆಯ ಕಾರುಣ್ಯವು
ಇಲ್ಲ. ತನ್ನ ಇಚ್ಛೆಯ ಪ್ರಾಪ್ತಿಯ ಪ್ರಯತ್ನವನ್ನು ಅವನು ಎಡೆಬಿಡದೆ ಚಿಂತಿಸುತ್ತಾ
ನೆ. ಅಪಾರ ಕಾರುಣ್ಯಮಯ ಕರ್ತನು ಅವನು. 'ಕೃಷ್ಣ' ಎಂಬ ಪೋಷಕ ಸಂಸಾ
ರವೆಂಬ ಕಡಲಲ್ಲಿ ಸಿಕ್ಕಿಕೊಂಡು ಕೊಳ್ಳುತ್ತಿರುವ ಪ್ರತಿ ಚೇತನನ ಸಂಕಟವನ್ನು
ಕಂಡು ಮರುಗುತ್ತಾನೆ. ಅದನ್ನು ನೀಗಿಸಲು ಸದಾ ಸಿದ್ಧನಾಗಿರುತ್ತಾನೆ. ಚೇತನ
ನಿಂದ ~~ಒಂದು~~ ದೀನವಾದ ಪ್ರಾರ್ಥನೆಯೊಂದು ಬಂದರೆ ಸಾಕು. ಆಗಲೇ ಅವನ
ಸಹಾಯಕ್ಕೆ ಸಿದ್ಧನಾಗಿ ಬೇಗ ಬರುತ್ತಾನೆ. ಅವನನ್ನು ಉದ್ಧರಿಸುತ್ತಾನೆ

ಆದ್ದರಿಂದ, ಚೇತನನು ಭಗವಂತನನ್ನು ನಂಬಿ ಆಶ್ರಯಿಸಿ, ಉದ್ಧಾರ
ಗೊಳ್ಳಲೇ ಬೇಕು. ಈ ವಿಷಯವನ್ನು ಕುರಿತು ತಿರುಕ್ಕುರುಕೂರಿನ ಸ್ವಾಮಿ
ಯಾದ ಶಠಕೋಪನು (ನಮ್ಮಾಳ್ವಾರರು) ರಚಿಸಿ ಹಾಡಿರುವ ಸರಳವಾದ
ತಮಿಳಿನ ಒಂದು ಸಾವಿರ ಪಾಶುರಗಳಲ್ಲಿ ಈ ಹತ್ತನ್ನು ಮಾತ್ರವೇ ಯಾರು

Garani Srinivasan

ಚೆನ್ನಾಗಿ ಓದಿ ಅರಿತುಕೊಳ್ಳುತ್ತಾರೆ, ಅವರಿಗೆ ಭಗವಂತನಲ್ಲಿ ಭಕ್ತಿ ಜ್ಞಾನಗಳು
ದೃಢವಾಗಿ ಅವರು ನಿವೃತ್ತಿಯೆಡೆ ಸಾಗುತ್ತಾರೆ. ಕಷ್ಟವಾಗಿ, ಅವರು ಭಗವತ್ಕೃಪೆ
ಯಿಂದ ಇದೇ ಜೀವನದಲ್ಲಿ ನಿಮ್ಮಾತ್ಮವನ್ನು ಅನುಭವಿಸಿ, ಅನಂತರ,
ಅಮೃತತ್ವವನ್ನು ಪಡೆದು, ಭಗವಂತನ ಶ್ರೀಪಾದಗಳನ್ನು ಸೇರುತ್ತಾನೆ. ~~[illegible]~~

16.9.84

ಬೆಂಗಳೂರು [illegible]

— o —

16.9.84

ತಿರುವಾಯ್ಮೊಳಿ - ಐದನೆಯ ಪತ್ತು - ಎರಡನೆಯ ತಿರುವಾಯ್ಮೊಳಿ

திருவாய்மொழி - ஐந்தாம் பத்து இரண்டாந்திருவாய்மொழி

ಪೊಲಿಗ ಪೊಲಿಗ ಪೊಲಿಗ - பொலிக பொலிக பொலிக

1. பொலிக பொலிக பொலிக போயிற்று வல்லுயிர்ச்சாபம்,
நலியும் நரகமும் நைந்த நமனுக்கிங்கு யாதொன்றுமில்லை,
கலியும் கெடும் கண்டுகொண்மின் கடல்வண்ணன் பூதங்கள் மண்மேல்,
மலியப்புகுந்திசைபாடி ஆடியுழிதரக்கண்டோம்

ಪೊಲಿಗ ಪೊಲಿಗ ಪೊಲಿಗ ಪೋಯಿಱ್ಱು ವಲ್ಲುಯಿರ್ಚ್ಚಾಪಮ್,
ನಲಿಯುಮ್ ನರಕಮುಮ್ ನೈನ್ದ ನಮನುಕ್ಕಿಙ್ಗು ಯಾದೊನ್ಱುಮಿಲ್ಲೈ,
ಕಲಿಯುಮ್ ಕೆಡುಮ್ ಕಣ್ಡುಕೊಣ್ಮಿನ್ ಕಡಲ್ವಣ್ಣನ್ ಭೂದಙ್ಗಳ್ ಮಣ್ಮೇಲ್,
ಮಲಿಯಪ್ಪುಗುನ್ದಿಸೈಪಾಡಿ ಆಡಿಯುಳಿದರಕ್ಕಣ್ಡೋಮ್.

ಪೊಲಿಗ, ಪೊಲಿಗ, ಪೊಲಿಗ பொலிக, பொலிக, பொலிக = ಬಾಳಿ, ~~[illegible]~~ ಶಾಂತಿವರ್ಧಿಸಲಿ, ಅಭಿವೃದ್ಧಿಯಾಗಲಿ, ಪೋಯಿಱ್ಱು போயிற்று = ಹೋಯಿತು, ವಲ್ வல் = ಬಲಿಷ್ಠವಾದ, ಉಯಿರ್ உயிர் = ಜೀವನ ಮೇಲಿನ, ಶಾಪಮ್ சாபம் = ಶಾಪವು (ಜೀವನು ಮಾಡಿದ ಪಾಪಗಳು), ನಲಿಯುಮ್ நலியும் = ಹಿಂಸಿಸುವ, ನರಕಮ್ நரகம் = ನರಕವು, ನೈನ್ದ நைந்த = ನಾಶಹೊಂದಿರುವ, ನಮನುಕ್ಕು நமனுக்கு = ಯಮನಿಗೆ, ಇಙ್ಗು இங்கு = ಇಲ್ಲಿ, ಯಾದು ಒನ್ಱುಮ್ ಇಲ್ಲೈ யாதொன்றுமில்லை = ಏನೊಂದೂ (ಕೆಲಸ) ಇಲ್ಲ, ಕಲಿಯುಮ್ கலியும் = ಕಲಿಪುರುಷನೂ, ಕೆಡುಮ್ கெடும் = ತೊಲಗಿಹೋಗುವನು, ಕಣ್ಡುಕೊಣ್ಮಿನ್ கண்டுகொண்மின் = ನೋಡಿಕೊಳ್ಳಿ, ಕಡಲ್ ವಣ್ಣನ್ கடல் வண்ணன் = ಕಡಲಿನ ಬಣ್ಣದವನ, ಭೂದಙ್ಗಳ್ பூதங்கள் = ಭಕ್ತರು, ಮಣ್ ಮೇಲ್ மண் மேல் = ಭೂಮಿಯ ಮೇಲೆ, ಮಲಿಯ மலிய = ತುಂಬುವಂತೆ, ಪುಗುನ್ದು புகுந்து = ಪ್ರವೇಶಿಸಿ (ಹೊಕ್ಕೊಂಡು), ಇಶೈಪಾಡಿ இசை பாடி = ಹಾಡುಗಳನ್ನು ಹಾಡುತ್ತ, ಆಡಿ ஆடி = ಕುಣಿದಾಡಿ, ಉಳಿದರ உழிதர = (ಎಲ್ಲೆಲ್ಲೂ) ಸಂಚರಿಸುವುದನ್ನು ಕಣ್ಡೋಮ್ கண்டோம் = ಕಂಡೆವು.

GaraniSrinivasan

ಬಾಳಿಗೆ, ಶಾಂತಿ ಪಡೆಯಿತು, ಅಭಿವೃದ್ಧಿಗೊಳ್ಳು. ಜೀವನ ಮೌಲ್ಯ ಬಲಾದ ಶಾಪ ಹೋಯಿತು. ಹಿಂಸಿಸುವ ನರಕವು ನಾಶವಾಯಿತು. ಯಮನಿಗೆ ಇಲ್ಲಿ ಯಾವ ಕೆಲಸವೂ ಇಲ್ಲದಾಯಿತು. ಕಲಿಪುರುಷನು ಸೋಲನುಭವಿಸಿದನು. ಕಂಡು ಕೊಳ್ಳು ಕಡಿಯುವವನಾದ ಭಕ್ತರು ಭಗವಂತನ ಮೇಲೆ ತುಂಬಿಕೊಂಡಿರುವಂತೆ ಪ್ರೀತಿ ತಪ್ಪಿ, (ದಾಸರುಗಳನ್ನು) ಹಾಡುತ್ತಾ ಕುಣಿದಾಡುತ್ತಾ (ಎಲ್ಲೆಲ್ಲೂ) ಸಂಚರಿಸುತ್ತಿದ್ದನ್ನು (1) ಕಂಡೆವು.

ಈ ಕಾಲದಲ್ಲಿ ಆಲ್ವಾರರ ದಿವ್ಯೋದ್ಧಾರವನ್ನು ಕಾಣಬಹುದು. ಭಗವಂತ ಮೌಲ್ಯ ಜೀವರಾಶಿಯಲ್ಲ ಹಿಟ್ಟಿಗೆ ಉಜ್ಜೀವನ ಹೊಳ್ಳುವ ಕಾಲ ಬಂತಲ್ಲ ಎಂದು ಅವರಿಗೆ ಅಷ್ಟು ಸಂತೋಷ

ಜೀವನು ಉದ್ಧಾರಗೊಳ್ಳುವುದಕ್ಕೆ ಬೇಕಾದದ್ದು ಅವನಿಗೆ ಅಂಟುವ 'ಪುಣ್ಯ-ಪಾಪ'ಗಳ ಪುನರಾವರ್ತನೆ ಇಲ್ಲದಿರುವುದು, ನರಕಬಾಧೆ ಇಲ್ಲದಿರುವುದು, ಕಲಿಯ ಪ್ರಾಬಲ್ಯ ಅವರ ಮೇಲೆ ನಡೆಯದಂತಾಗುವುದು. ಇಂಥ ಒಳ್ಳೆಯ ಕಾಲ ಬಂದಿದ್ದಾರಲ್ಲ ಹೇಗೆ? ಏಕೆಂದರೆ? ಇವೆಲ್ಲ ಸಾಧನೆಯ ಕಾಲದಲ್ಲಿದೆ

"ಪೊಲಿಗ, ಪೊಲಿಗ, ಪೊಲಿಗ" – 'ಶಾಶ್ವತವಾದ ಆನಂದದ ಬಾಳ್ವೆಯನ್ನು ಅನುಭವಿಸುವವರಾಗಿ' ಎಂಬ ಸಂತೋಷದ ವಿಷಯವನ್ನು, ಒಂದೇ ಬಾರಿ ಮೂರು ಬಾರಿ ಬಳಸುತ್ತಾ ಒತ್ತಿ ಒತ್ತಿ ಹೇಳುವ ರೀತಿ ಇದು.

"ಪೊಲಿ" – ಎಂಬುದಕ್ಕೆ 'ಬಾಳು', 'ಅಭಿವೃದ್ಧಿಗೊಳ್ಳು', 'ಶೋಭಿಸು', 'ವಿಜೃಂಭಿಸು', 'ಸಮೃದ್ಧಿ ಪಡೆ', 'ಮಂಗಳವಾಗು', 'ಶಾಂತಿ ಪಡೆ', ಎಂದು ಮುಂತಾಗ ಅರ್ಥವಾದ ಒಳ್ಳೆಯ ಪದ. ಅದರ ಬಹುವಚನ ಕ್ರಿಯಾರೂಪ "ಪೊಲಿಗ".

"ಪೊಯಿತ್ತು ವಲ್ ಉಯಿರ್ ಶಾಬಮ್" – ಜೀವನಿಗೆ ತಗುಲಿದ್ದ ಬಿಡಿಸಿಕೊಳ್ಳಲಾರದ ಬಲವಾದ ಶಾಪವೆಂದರೆ 'ಪುನರ್ಜನ್ಮ'! 'ಅದು ಹೋಯಿತು' (ಕ್ರಮಕ್ಕೆ ಬೇಕಾದ) ಎಂದರೆ, 'ಬಿಡುಗಡೆ ಉಂಟಾಯಿತು'. ಜೀವನು ಶಾಶ್ವತವಾಗಿ ಬೇಕಾದದ್ದು ಅದಾಗಿಯೇ – ಬಿಡುಗಡೆ ಮೋಕ್ಷವಾಗಿಯೇ

"ನಲಿಯುಮ್ ನರಗಮುಮ್ ನೈನ್ದ" – ಪುನರ್ಜನ್ಮದಿಂದ ಜೀವನಿಗೆ ಅವನ ಒಂದೊಂದು ಹುಟ್ಟಿನಲ್ಲೂ ಅವನ ಕರ್ಮಕ್ಕೆ ತಕ್ಕ ಫಲವಾಗಿ, ಅವನಿಗೆ ನರಕವಾಸವೂ ಅಲ್ಲಿಯ ಯಾತನೆಗಳೂ. 'ಹುಟ್ಟು' ಎಂಬುದರಿಂದಲೇ ಬಿಡುಗಡೆಯಾದ ಬಳಿಕ ಅವನಿಗೆ ನರಕವಾಸವೆಲ್ಲಿಯದು?

"ನಮನುಕ್ಕಿಂಗ್ ಯಾದೊನ್ರುಮ್ ಇಲ್ಲೈ" – ಜೀವನು ಮರಣಿಸಿದ ಬಳಿಕ ಅವನು ಯಮಪಟ್ಟಣಕ್ಕೆ ಹೋಗಿ, ಅಲ್ಲಿ ತನ್ನ ಪಾಪಕರ್ಮಗಳಿಗೆ ತಕ್ಕ ದಂಡನೆಯನ್ನು (ಯಮನಿಂದ) ಸ್ವೀಕರಿಸಿ, (ಶಿಕ್ಷೆಯನ್ನು) ಅನುಭವಿಸಬೇಕಾದದ್ದು ಯಮನ ಆಜ್ಞೆಯಂತೆ. 'ಹುಟ್ಟು' ಎಂಬುದೇ ಇಲ್ಲದಾಗ 'ಸಾವು' ಎಲ್ಲಿಂದ ಬಂತು? ಕರ್ಮಗಳಿಗಾಗಿ ಸಾವು

Garani Srinivasan

ಭವವಿಲ್ಲ ಅವಕಾಶವೆಲ್ಲಿ? ಆದ್ದರಿಂದ, ಯಮನಿಗೇನು ಕೆಲಸ?

"ಕಲಿಯುಮ್ ಕೆಡುಮ್" – ಕಲಿಯುಗದಲ್ಲಿ ಕಪಟ, ವಂಚನೆ, ಕಳವು, ಕೊಲೆ – ಮುಂತಾದ ದುಷ್ಕೃತ್ಯಗಳೇ ಹೆಚ್ಚು. ಸಜ್ಜನರಿಗೆ ಅವರ ದುಷ್ಕಾರ್ಯಗಳನ್ನೆ ಎದುರಿಸಲಾಗುತ್ತದೆ! ಭಾಗವತರ ಮೇಲೆ ಕೆಟ್ಟದ್ದು ನಡೆಯುವುದಕ್ಕೆ ಅವಕಾಶವೇ ಇಲ್ಲವಾದ ಮೇಲೆ, ಭಗವನ್ನಾಮ ಸಂಕೀರ್ತನೆ ಎಲ್ಲೆಲ್ಲೂ ಹರಡಿ ಕೊಂಡಿದ್ದ ಮೇಲೆ, ಕಲಿಯ ಪ್ರಾಬಲ್ಯಕ್ಕೆ ಅವಕಾಶವೆಲ್ಲಿ?

"ಕಣ್ಡು ಕೊಣ್ಮಿನ್ - - ಕಣ್ಡೋಮ್" – ಜನರೇ, ಇದಕ್ಕೆಲ್ಲ ಕಾರಣವೇನೆಂಬುದನ್ನು ಕಂಡುಕೊಳ್ಳಿ. ಭಗವಂತನ ಭಕ್ತರು ಎಲ್ಲಾ ತುಂಬಿಕೊಂಡು, ಭಗವಂತನನ್ನು ಕೀರ್ತಿಸಿ ಹಾಡಿ, ಹೊಗಳಿ, ಕುಣಿದಾಡಿ, ಆನಂದಿಸಿ ಎಲ್ಲ ಕಡೆಯೂ ಸಂಚರಿಸುತ್ತಿರುವುದನ್ನು, ಅವರ ಗೋಷ್ಠಿಗಳಲ್ಲಿ ಎಲ್ಲೆಲ್ಲೂ ಹರಡುವುದನ್ನು, ಭಕ್ತರ ಕುಲಗಳು ಎಲ್ಲೆಲ್ಲೂ ಶೋಭಿಸುವುದರ ಕಾರಣ, ಕಂಡಿರಾ! ನೋಡಿ. ಭಗವನ್ನಾಮ ಸಂಕೀರ್ತನೆಯು ಎಲ್ಲೆಲ್ಲೂ

ಆಳ್ವಾರರು ಹೇಳುತ್ತಾರೆ: ಭಾಗವತೋತ್ತಮರುಗಳೇ, ನೀವೆಲ್ಲರೂ ಚಿರಕಾಲ ಆನಂದದಿಂದ ಬಾಳುವ ಕಾಲ ಬಂದಿದೆ! ಭಗವದ್ಭಕ್ತರ ಕೂಟಗಳು ಎಲ್ಲೆಲ್ಲೂ ಭಗವಂತನನ್ನು ಕೀರ್ತಿಸಿ ಹಾಡಿ, ಹೊಗಳಿ, ನಲಿಯುವುದನ್ನು, ಅವರ ಕಂಡಗಳು ದೇಶವೆಲ್ಲ ಸಂಚರಿಸುವುದನ್ನು ನೋಡಿ. ಅವರ ಶುಭ ಘೋಷ ಕಾರ್ಯ ಎಲ್ಲರ ಮೇಲೂ ಪರಿಣಾಮ ಕಾಣಿಸುವುದು! 'ಕೃತ' ಎಂಬ ಭಾವದಿಂ ದ ಜೀವನವು ಮುಕ್ತನಾಗುವನು. ನರಕ ಬಾಧೆ ತಪ್ಪುವುದು. ಯಮನಿಗೆ ಭಾ-ಲೋಕದಲ್ಲಿ ಕೆಲಸವೇ ಇಲ್ಲದೆ ಹೋಗುವುದು. ಕಲಿಯ ದೋಷಗಳಿಗೆ ಅವಕಾಶವಿಲ್ಲವಾಗುವುದು.

2. கண்டோம் கண்டோம் கண்டோம் கண்ணுக்கினியன கண்டோம்,
தொண்டீர்! எல்லீரும் வாரீர் தொழுது தொழுது நின்றார்த்தும்,
வண்டார் தண்ணந்துழாயான் மாதவன் பூதங்கள் மண்மேல்,
பண்டான் பாடிநின்றாடிப் பரந்து திரிகின்றனவே.

ಕಣ್ಡೋಮ್ ಕಣ್ಡೋಮ್ ಕಣ್ಡೋಮ್ ಕಣ್ಣುಕ್ಕಿನಿಯನ ಕಣ್ಡೋಮ್,
ತೊಣ್ಡೀರ್! ಎಲ್ಲೀರುಮ್ ವಾರೀರ್ ತೊಳುದು ತೊಳುದು ನಿನ್ರಾರ್ತ್ತುಮ್,
ವಣ್ಡಾರ್ ತಣ್ಣನ್ದುೞಾಯಾನ್ ಮಾದವನ್ ಭೂದಙ್ಗಳ್ ಮಣ್ಮೇಲ್,
ಪಣ್ಡಾನ್ ಪಾಡಿ ನಿನ್ರಾಡಿ ಪ್ಪರನ್ದು ತಿರಿಗಿನ್ರನವೇ.

Garani Srinivasan

ಕಣ್ಡೋಮ್ ಕಣ್ಡೋಮ್, ಕಣ್ಡೋಮ್ கண்டோம், கண்டோம், கண்டோம் ಕಂಡೆವು, ಕಂಡೆವು, ಕಂಡೆವು, ಕಣ್ಣುಕ್ಕು கண்ணுக்கு = ಕಣ್ಣಿಗೆ, ಇನಿಯನ இனிய = ಪ್ರಿಯವಾದದ್ದನ್ನು, ಕಣ್ಡೋಮ್ கண்டோம் = ಕಂಡೆವು, ತೊಣ್ಡೀರ್ தொண்டீர் = ಭಕ್ತರೇ (ಭಾಗವತರೇ), ಎಲ್ಲೀರುಮ எல்லீரும் = ಎಲ್ಲರೂ, ವಾರೀರ್ வாரீர் = ಬನ್ನಿ, ತೊಳುದು ತೊಳುದು தொழுது தொழுது = ನಮಸ್ಕರಿಸಿ, ಪೂಜಿಸಿ, ನಿನ್ರು நின்று = ನಿಂತು, ಆರ್ತ್ತು ஆர்த்தும் = ಪ್ರಾರ್ಥಿಸೋಣ, ವಣ್ಡು ಆರ್ வண்டு ஆர் = ದುಂಬಿಗಳು ತುಂಬಿರುವ, ತಣ್ ತண் = ತಂಪಾದ, ಅಮ அம் ಸುಂದರವಾದ, ತುಳಾಯಾನ್ துழாயான் = ತುಳಸಿಯ ಹಾರವನ್ನು ಧರಿಸಿದವನಾದ, ಮಾದವನ್ மாதவன் = ಮಾಧವನ, ಪೂದಙ್ಗಳ್ பூதங்கள் = ಭಕ್ತರು, ಮಣ್ ಮೇಲ್ மண் மேல் = ಭೂಮಿಯ ಮೇಲೆ, ಪಣ್ಣಾನ್ பண்டான் = ರಾಗಗಳನ್ನು, ಪಾಡಿ பாடி = ಹಾಡಿ, ನಿನ್ರು நின்று = ನಿಂತು, ಆಡಿ ஆடி = ನಲಿದಾಡಿ, ಪರನ್ದು பரந்து = ಎಲ್ಲೆಲ್ಲೂ ವಿಸ್ತರಿಸಿ, (ಹರಡಿಕೊಂಡು), ತಿರಿಗಿನ್ರನವೇ திரிகின்றனவே = ಸಂಚರಿಸುತ್ತಿದ್ದಾರೆ.

ಕಂಡೆವು ಕಂಡೆವು ಕಂಡೆವು. ಕಣ್ಣಿಗೆ ಪ್ರಿಯವಾದದ್ದನ್ನು ಕಂಡೆವು. ಭಕ್ತರೇ (~~ಭಾಗವತರೇ~~) ಎಲ್ಲರೂ ಬನ್ನಿ ನಮಸ್ಕರಿಸಿ, ಪೂಜಿಸಿ, ನಿಂತು, ಪ್ರಾರ್ಥಿಸೋಣ. ದುಂಬಿಗಳು ತುಂಬಿರುವ ತಂಪಾದ ಸುಂದರವಾದ ತುಳಸಿಯ ಹಾರವನ್ನು ಧರಿಸಿದವನಾದ ಮಾಧವನ ಭಕ್ತರು (ಭಾಗವತರು) ಭೂಮಿಯ ಮೇಲೆ ರಾಗಗಳನ್ನು ಹಾಡಿ, ನಿಂತು, ನಲಿದಾಡಿ, ಎಲ್ಲೆಲ್ಲೂ ಹರಡಿಕೊಂಡು ಸಂಚರಿಸುತ್ತಿದ್ದಾರೆ (2)

ಭಕ್ತರ ಕೂಟಗಳು ಭಗವಂತನನ್ನು ಹೊಗಳಿ, ಹಾಡಿ, ನಲಿದು, ಇತರರನ್ನು ನಲಿಸುತ್ತಾರೆ. ಅವರ ಸಹವಾಸದಿಂದ ಎಲ್ಲರೂ ಭಕ್ತರಾಗಬಹುದು — ಎಂಬುದು ಈ ಪಾಶುರದ ವಿಷಯ

ಆಳ್ವಾರರು ಹೇಳುತ್ತಾರೆ: ಭಕ್ತಜನರೇ, ಆನಂದದ ನೋಟವೊಂದು ಕಂಡುಬರುತ್ತಿದೆ. ಎಲ್ಲೆಲ್ಲೂ ಭಕ್ತಜನರ ಕೂಟಗಳು ತುಂಬಿ, ಹರಡುತ್ತಿವೆ. ದುಂಬಿಗಳು ತುಂಬಿದ ತುಳಸಿಯ ಹಾರವನ್ನು ಧರಿಸಿರುವ ಮಾಧವನಾದ ಸರ್ವೇಶ್ವರನನ್ನು ಕುರಿತು ಕೀರ್ತಿಸಿ, ಹಾಡಿ, ನಲಿದಾಡಿ, ಸಂಚರಿಸುತ್ತಿದ್ದಾರೆ ಭಕ್ತರ ಕೂಟ. ನಾವು ಅಲ್ಲಿಗೆ ಹೋಗೋಣ. ಅವರನ್ನು ಎದುರುಗೊಳ್ಳೋಣ. ಅವರಿಗೆ ಎರಗೋಣ. ಅವರನ್ನು ಪೂಜಿಸೋಣ ಅವರೊಡನೆ ಕೂಡಿಕೊಳ್ಳೋಣ ಭಗವಂತನನ್ನು ಸ್ತುತಿಸಿ, ಪೂಜಿಸಿ, ಆನಂದಿಸೋಣ, ಬನ್ನಿ. ಈ ಸುಸಮಯವನ್ನು ನಾವು ಕಳೆದುಕೊಳ್ಳಬಾರದು.

ಸಜ್ಜನರ ಸಂಗದಿಂದ ಬರುವುದು ಸತ್ಫಲವೇ ಅಲ್ಲವೇ?

3. திரியும் கலியுகம் நீங்கித் தேவர்கள் தாமும் புகுந்து,
பெரிய கிதயுகம் பற்றிப் பேரின்ப வெள்ளம் பெருக,
கரிய முகில் வண்ணன் எம்மான் கடல் வண்ணன்
பூதங்கள் மண்மேல்,
இரியப் புகுந்திசை பாடி எங்குமிடம் கொண்டனவே

ತಿರಿಯುಮ್ ಕಲಿಯುಗಮ್ ನೀಙ್ಗಿ ತ್ತೇವರ್ಗಳ್ ತಾಮುಮ್ ಪುಗುನ್ದು,
ಪೆರಿಯ ಕಿದಯುಗಮ್ ಪಟ್ರಿ ಪ್ಪೇರಿನ್ಬ ವೆಳ್ಳಮ್ ಪೆರುಗ,
ಕರಿಯ ಮುಗಿಲ್ ವಣ್ಣನೆಮ್ಮಾನ್ ಕಡಲ್ ವಣ್ಣನ್ ಭೂದಙ್ಗಳ್ ಮಣ್ಮೇಲ್,
ಇರಿಯ ಪ್ಪುಗುನ್ದಿಶೈ ಪಾಡಿ ಎಙ್ಗುಮಿಡಮ್ ಕೊಣ್ಡನವೇ.

ತಿರಿಯುಮ್ திரியும் = ಮುನ್ನುಗ್ಗಿ ಸಂಚರಿಸುವ, ಕಲಿಯುಗಮ್ கலியுகம் = ಕಲಿಯುಗವು (ಕಲಿಪ್ರಭಾವವು), ನೀಙ್ಗಿ நீங்கி = ಕಳೆದು (ನೀಗಿ), ತ್ತೇವರ್ಗಳ್ ತಾಮುಮ್ தேவர்கள் தாமும் = ದೇವತೆಗಳು (ಸಾತ್ತ್ವಿಕ ಸ್ವಭಾವದ ಜನರು), ಪುಗುನ್ದು புகுந்து = ಭೂಲೋಕವನ್ನು ಸೇರಿ, ಪೆರಿಯ பெரிய = ಮಹತ್ತಾದ, ಕಿದಯುಗಮ್ கிதயுகம் = ಕೃತಯುಗವು, ಪಟ್ರಿ பற்றி = ಬಂದಿತು, ಪೇರಿನ್ಬಮ್ பேரின்பம் = ಆನಂದದ ಹೆಚ್ಚಾದ, ವೆಳ್ಳಮ್ வெள்ளம் = ಪ್ರವಾಹವು, ಪೆರುಗ பெருக = ಹೆಚ್ಚಾಯಿತು, ಕರಿಯ ಮುಗಿಲ್ ವಣ್ಣನ್ கரிய முகில் வண்ணன் = ಕಾರ್ಮುಗಿಲ ಬಣ್ಣದವನೂ, ಎಮ್ಮಾನ್ எம்மான் = ನಮ್ಮ ಸ್ವಾಮಿಯೂ, ಕಡಲ್ ವಣ್ಣನ್ கடல் வண்ணன் = ಕಡಲವರ್ಣನೂ ಆದ ನ, ಭೂದಙ್ಗಳ್ பூதங்கள் = ಭಕ್ತರು, ಮಣ್ಮೇಲ್ மண்மேல் = ಭೂಲೋಕದಲ್ಲಿ, ಇರಿಯ இரிய = ನಿರ್ಭಯವಾಗಿ, ಪುಗುನ್ದು புகுந்து = ಸೇರಿ, ಇಶೈ ಪಾಡಿ இசை பாடி = (ಭಗವದ್ಗುಣ) ಗಾನಮಾಡುತ್ತಾ, ಬಂದು (ಸೇರಿ), ಇಡಮ್ இடம் = ಎಲ್ಲೆಲ್ಲಿಯೂ, ಎಙ್ಗುಮ್ எங்கும் = ಎಲ್ಲೆಲ್ಲೂ, ಕೊಣ್ಡನವೇ கொண்டனவே = ತುಂಬಿಕೊಂಡಿದ್ದಾರಲ್ಲ.

ಮುನ್ನುಗ್ಗಿ ಸಂಚರಿಸುವ ಕಲಿಯುಗವು (ಕಲಿಪ್ರಭಾವವು) ನೀಗಿ, ಮಹತ್ತಾದ ದೇವತೆಗಳು (ಸಾತ್ತ್ವಿಕ ಸ್ವಭಾವದ ಜನರು) ಭೂಲೋಕವನ್ನು ಸೇರಿ, ಮಹತ್ತಾದ ಕೃತಯುಗವು ಬಂದು ಮಹದಾನಂದದ ಹೊಳೆಯು ತುಂಬಿ ಹರಿಯುತ್ತಿದೆ, ಕಾರ್ಮುಗಿಲ ಬಣ್ಣದವನೂ, ಕಡಲವರ್ಣನೂ ಆದ ನಮ್ಮ ಸ್ವಾಮಿಯ ಭಕ್ತರು ಭೂಲೋಕದಲ್ಲಿ ನಿರ್ಭಯವಾಗಿ ಬಂದು ಸೇರಿ, (ಭಗವದ್ಗುಣ) ಗಾನಮಾಡುತ್ತಾ, ಎಲ್ಲೆಲ್ಲೂ ತುಂಬಿಕೊಂಡಿದ್ದಾರಲ್ಲ!

ಭಕ್ತ ಗುಂಪುಗಳು ಭೂಮಿಯ ಮೇಲೆ ತುಂಬಿಕೊಂಡಿರುವುದರ ಪರಿಣಾಮವು ಹೇಗೆಂದು ಇಲ್ಲಿ ಹೇಳಲಾಗುತ್ತದೆ.

'ತಿರಿಯುಂ ಕಲಿಯುಗಂ ನೀಙ್ಗಿ' – ಕಲಿಯುಗ ಮುನ್ನುಗ್ಗಿ ಬರುತ್ತಿರುವುದು ಕಡಿಮೆಯಾಗುತ್ತದೆ. ಕಲಿಯ ಪ್ರಾಬಲ್ಯವೆಂದರೆ, ಧರ್ಮನಷ್ಟವಾಗುತ್ತದೆ. ಆಹಾರ ವ್ಯವಹಾರಗಳಲ್ಲಿ ಎಲ್ಲಾ ಬಗೆಯ ಅನಾಚಾರಗಳು ನಡೆಯುತ್ತವೆ. ವರ್ಣಸಂಕರವಾಗುತ್ತದೆ. ದೇವರು, ಬ್ರಾಹ್ಮಣರು, ಭಕ್ತರು ಮುಂತಾದ ಸಾತ್ವಿಕರಿಗೆ ಎಡೆಯೇ ಇಲ್ಲವಾಗುತ್ತದೆ. ಎಲ್ಲೆಲ್ಲೂ ತಾಮಸ ಗುಣ ತುಂಬಿಕೊಂಡವರಾಗುತ್ತಾರೆ. ಈ ಬಗೆಯ ದಲ್ಲಿ ಎಲ್ಲಾ ಬಗೆಯ ಕೆಟ್ಟ ಪರಿಣಾಮಗಳೂ ತುಂಬಿ ತುಳುಕುತ್ತದೆ. ಸಂಪೂರ್ಣವಾಗಿ ನಾಶವಾಗುವುದು ಭಗವದ್ಭಕ್ತರ ತಂಡಗಳು ನಿರ್ಭಯವಾಗಿ, ಹಾಡುತ್ತ, ನೃತ್ಯ ಮಾಡುತ್ತ ನಲಿದಾಡುವುದರಿಂದಲೇ.

"ದೇವರ್ಗಳುಂ ತಾಮುಂ ಪುಗುನ್ದು" – ಸ್ವರ್ಗದವರು ಭೂಲೋಕದಲ್ಲಿ ಬಂದು ಸೇರಿದರೆ, ಸುರರೂ ಭೂಸುರರೊಡನೆ ಸೇರಿ ಆನಂದಿಸುವಂತಾಗುತ್ತದೆ. ಆಗ ಭೂಲೋಕವು ಸ್ವರ್ಗ ಸಮಾನವೇ ಆಗುತ್ತದೆ.

"ಪೆರಿಯ ಕಿದಯುಗಂ ಪಟ್ರಿ' – ಭಕ್ತರ ಕೂಟಗಳು ಎಲ್ಲೆಲ್ಲೂ ನಿರ್ಭಯವಾಗಿ ಭಗವನ್ನಾಮ ಸಂಕೀರ್ತನೆ ಮಾಡುತ್ತ ಭೂಲೋಕದಲ್ಲಿ ಸಂಚರಿಸುವುದರ ಪರಿಣಾಮವಾಗಿ, ಅಧರ್ಮ, ಕಲಹ, ವಂಚನೆ, ಕ್ರೌರ್ಯ ಮುಂತಾದವಕ್ಕೆ ಸ್ಥಳವಿಲ್ಲದೆ ಹೋಗುತ್ತದೆ. ಮತ್ತೆ, ಧರ್ಮ ನೆಲೆಗೊಳ್ಳುತ್ತದೆ. ದೇವರು, ಗುರು, ಬ್ರಾಹ್ಮಣರು, ಭಕ್ತರು – ಇವರಲ್ಲಿ ಗೌರವ ಹೆಚ್ಚುತ್ತದೆ. ಸಾತ್ವಿಕ ಗುಣಕ್ಕೇ ಪ್ರಾಧಾನ್ಯ ಸಿಕ್ಕುತ್ತದೆ.

ಆಳ್ವಾರರು ಹೇಳುತ್ತಾರೆ: ಭಗವದ್ಭಕ್ತರ ಗುಂಪುಗಳು ಭೂಮಿಯ ಮೇಲೆ ಎಲ್ಲ ಕಡೆಯೂ ತುಂಬಿಕೊಂಡು, ಭಕ್ತಿಯ ಹಾಡುಗಳನ್ನು ಹಾಡಿ ನಲಿಯುವುದರ ಫಲವಾಗಿ, ಕಲಿಯ ಪ್ರಭಾವವೇ ಇಲ್ಲದಂತಾಗುತ್ತದೆ. ಧರ್ಮಕ್ಕೆ ಆಧಾರವಾದ ಸತ್ತ್ವಪ್ರಧಾನವಾದ ಕೃತಯುಗ ಬರುತ್ತದೆ. ಎಲ್ಲೆಲ್ಲೂ ಆನಂದದ ಕಡಲು ಹರಿಯುತ್ತದೆ. ತೃಪ್ತಿಯೂ, ಶಾಂತಿಯೂ ನೆಲೆಗೊಳ್ಳುತ್ತವೆ. (ಭಕ್ತರೇ, ಬನ್ನಿ ನಾವೂ ಅವರೊಡನೆ ಹಾಡಿ, ಆಡಿ, ನಲಿಯೋಣ).

4. இடங்கொள் சமயத்தை யெல்லாம் எடுத்துக் களை
வன போலே,
தடங்கடல் பள்ளிப் பெருமான் தன்னுடைப்
பூதங்களேயாய்,
கிடந்தும் இருந்தும் எழுந்தும் கீதம் பலபல பாடி,
நடந்தும் பறந்தும் குனித்தும் நாடகம் செய்
கின்றனவே.

ಇಡಙ್ಗೊಳ್ ಶಮಯತ್ತೈಯೆಲ್ಲಾಮ್ ಎಡುತ್ತುಕ್ಕಳೈವನಪೋಲೇ,
ತಡಙ್ಗಡಲ್ ಪಳ್ಳಿಪ್ಪೆರುಮಾನ್ ತನ್ನುಡೈಪ್ಪೂದಙ್ಗಳೇಯಾಯ್,
ಕಿಡನ್ದುಮಿರುನ್ದುಮೆಳುನ್ದುಮ್ ಗೀದಮ್ ಪಲಪಲಪಾಡಿ,
ನಡನ್ದುಮ್ ಪರನ್ದುಮ್ ಕುನಿತ್ತುಮ್ ನಾಡಗಮ್ ಶೆಯ್ಗಿನ್ಱನವೇ.

ಇಡಮ್ ಕೊಳ್ இடம் கொள் = ಆಕ್ರಮಿಸಿಕೊಂಡಿರುವ, ಶಮಯತ್ತೈ ಎಲ್ಲಾಮ್ சமயத்தை எல்லாம் = (ಕಾಲವನ್ನೆಲ್ಲಾ) (ಧರ್ಮಗಳನ್ನೆಲ್ಲಾ), ಎಡುತ್ತು எடுத்து = ಕಿತ್ತು, ಕಳೈವನ ಪೋಲೇ களைவன போலே = ನಾಶಮಾಡುವ ಹಾಗೆ, ತಡಕಡಲ್ தடகடல் = ವಿಸ್ತಾರವಾದ ಕಡಲಲ್ಲಿ, ಪಳ್ಳಿ பள்ளி = ಮಲಗಿ ವ (ನಿದ್ರಿಸುವ), ಪೆರುಮಾನ್ பெருமான் = ಸ್ವಾಮಿಯು, ತನ್ನುಡೈ தன்னுடை = ತನ್ನ, ಪೂದಙ್ಗಳೈ ಆಯ್ பூதங்களாய் = ಭಕ್ತರೇ ಆಗಿ, ಕಿಡನ್ದುಮ್ கிடந்தும் = ವಿರಮಿಸಿಯೂ (ಮಲಗಿಯೂ), ಇರುನ್ದುಮ್ இருந்தும் = ಕುಳಿತೂ, ಎಳುನ್ದುಮ್ எழுந்தும் = ನಿಂತೂ, ಗೀದಮ್ கீதம் = ಹಾಡುಗಳನ್ನು, ಪಲಪಲ ಪಾಡಿ பலபல பாடி = ಹಲವಾರು ಹಾಡಿ, ನಡನ್ದುಮ್ நடந்தும் = ನಡೆದಾಡಿಯೂ, ಪರನ್ದುಮ್ பறந்தும் = ಹಾರಾಡಿಯೂ, (ಅರಗೊಂಡು), ಕುನಿತ್ತುಮ್ குனித்தும் = ಬಗ್ಗಿಯೂ, ನಾಡಗಮ್ நாடகம் = ನಾಟಕವನ್ನು, ಶೆಯ್ಗಿನ್ಱನವೇ செய்கின்றனவே = ಮಾಡುತ್ತಿದ್ದಾರಲ್ಲಾ!

(ಕಾಲವನ್ನೆಲ್ಲಾ)
ಆಕ್ರಮಿಸಿಕೊಂಡಿರುವ/ಧರ್ಮಗಳನ್ನೆಲ್ಲಾ ಕಿತ್ತು ನಾಶಮಾಡುವ ಹಾಗೆ ವಿಸ್ತಾರವಾದ ಕಡಲಲ್ಲಿ ನಿದ್ರಿಸುವ ಸ್ವಾಮಿಯು ತನ್ನ ಭಕ್ತರೇ ಆಗಿ, ಮಲಗಿಯೂ, ಕುಳಿತೂ, ನಿಂತೂ, ಅನೇಕಾನೇಕ ಹಾಡುಗಳನ್ನು ಹಾಡಿ, ನಡೆದಾಡಿಯೂ, ಹಾರಾಡಿಯೂ, ಬಗ್ಗಿಯೂ, ನಾಟಕವನ್ನು ಮಾಡುತ್ತಿದ್ದಾರಲ್ಲಾ! (4)

ಭಗವದ್ಭಕ್ತರು ಇಳೆಯಲ್ಲಿ ಮಾಡುವ ದಿವ್ಯವಾದ ಕೆಲಸಗಳನ್ನೂ, ಅವುಗಳಿಂದಾಗುವ ಪ್ರಯೋಜನವನ್ನು ಇಲ್ಲಿ ಹೇಳುತ್ತಿದ್ದಾರೆ.

ಭಕ್ತರು (ಭಾಗವತರು) ಯಾರು? — ಜನಸಾಮಾನ್ಯರನ್ನು ತನ್ನ ಕಡೆಗೆ ಆಕರ್ಷಿಸುವುದಕ್ಕಾಗಿ ಭಗವಂತನೇ ಸದ್ಭಕ್ತರ ರೂಪ ತಳೆದು, ಭೂಮಿಯ ಮೇಲೆ ಎಲ್ಲೆಲ್ಲೂ ಸಂಚರಿಸಿಕೊಂಡು, ಭಕ್ತಿಯ ಹಾಡುಗಳನ್ನು ಹಾಡುತ್ತಾ, ಕುಳಿತು, ನಿಂತು, ಮಲಗಿ, ಎದ್ದು, ಬಗ್ಗಿ, ಆಡಿ, ಕುಣಿದು — ನಾನಾ ಬಗೆಯಲ್ಲಿ ನಾಟಕವನ್ನಾಡುತ್ತಿದ್ದಾನೆ.

ಭಕ್ತರು ಭಗವತ್ಸ್ವರೂಪರೇ ಎಂದೂ, ಭಗವಂತನಿಗೆ ಸಲ್ಲಬೇಕಾದ ಅವರಿಗೆ ಸಲ್ಲಬೇಕೆಂದೂ ಇಲ್ಲಿ ಹೇಳಿದಂತೆ.

Garani Srinivasan

ಆಳ್ವಾರರು ಹೇಳುತ್ತಾರೆ: ಭೂಮಿಯ ಮೇಲೆ ಜನರು ವ್ಯರ್ಥವಾಗಿ ಬೇಡವಾದ ಕಾರ್ಯಗಳಲ್ಲಿ ಆಸಕ್ತರಾಗಿ, ವ್ಯರ್ಥವಾಗಿ ಕಾಲವನ್ನು ಕಳೆಯುವುದನ್ನು ತಪ್ಪಿಸುವುದಕ್ಕಾಗಿ, ಭಗವಂತನೇ ಸ್ವತಃ ಭಕ್ತರ ಗಣದಲ್ಲಿ ಅವತರಿಸುತ್ತಾನೆ. ನೆಲದ ಮೇಲೆ ಕುಳಿತು, ನಿಂತು, ಮಲಗಿ, ನಡೆದು, ಬಗ್ಗಿ, ಎದ್ದು, ನಾನಾ ರೀತಿಯಲ್ಲಿ ನಾಟಕವಾಡುತ್ತಾ (ನಟನೆ ಮಾಡುತ್ತಾ) ಬಗೆಬಗೆಯಾಗಿ ಭಕ್ತಿಯ ಹಾಡುಗಳನ್ನು ಹಾಡುತ್ತಾ ಇದ್ದಾನೆ. ಅವನೇ ಆದ ಭಾಗವತರನ್ನು (ಭಕ್ತರನ್ನು) ಒಂದಾಗಿಸಿ, ಅವರ ಹಾಡುಗಳನ್ನಾಲಿಸಿ, ಆನಂದಿಸಿ, ಉಜ್ಜೀವನಗೊಳಿಸ.

ಪಾಶುರದಲ್ಲಿ 'ಸಮಯಮ' ಎಂಬ ಪದ 'ಕಾಲ' ಎಂದೂ 'ಧರ್ಮ' ಎಂದೂ ಅರ್ಥ ಕೊಡುತ್ತದೆ. ಆಳ್ವಾರರ ಕಾಲದಲ್ಲಿ ವೈದಿಕ ಮತ ಬಲವಾಗಿರ ಅವೈದಿಕ ಮತಗಳು ಎಲ್ಲೆಲ್ಲೂ ಹರಡಿಕೊಂಡಿದ್ದವು. ಈ ವಿಷಯವನ್ನು ಮನಸ್ಸಿನ ಕಂಡು ಕೊಂಡರೆ, ಪಾಶುರವನ್ನು ಈ ಬಗೆಯಲ್ಲಿ ವಿವರಿಸಬಹುದು: "ವೇದಬಾಹ್ಯವಾದ ಮತಗಳನ್ನೆಲ್ಲಾ ಬೇರು ಸಹಿತ ಕಿತ್ತು ಹಾಕುವುದಕ್ಕಾಗಿ ವೇದ ಮತವನ್ನು ಉದ್ಧರಿಸುವುದಕ್ಕಾಗಿ, ಭಗವಂತನು ಭಕ್ತರ ಗಣದಲ್ಲಿ ಭೂಮಿಯ ಮೇಲೆ ಅವತರಿಸಿ, ಭಕ್ತಿ ಭಾವವನ್ನು ಎಲ್ಲೆಲ್ಲೂ ಹರಡುವಂತೆ ಮಾಡಿದ್ದಾನೆ. ಭಗವಂತನ ವಿಚಿತ್ರ ನಾಟಕವೇ ಇದು!"

5. செய்கின்றதென் கண்ணுக்கொன்றே ஒக்கின்றிவ்வுலகத்து,
வைகுந்தன் பூதங்களேயாய் மாயத்தினாலும் மன்னி,
ஐயமொன்றில்லை அரக்கரசுரர் பிறந்தீருள்ளீரேல்,
உய்யும் வகையில்லை தொண்டீர்! ஊழிபெயர்த்திடும் கொன்றே.

ಶೆಯ್‌ಗಿನ್ರದೆನ್ ಕಣ್ಣುಕ್ಕೊನ್ರೇ ಒಕ್ಕಿನ್ರಿವ್ವುಲಗತ್ತು,
ವೈಗುಂದನ್ ಭೂದಙ್ಗಳೇಯಾಯ್ ಮಾಯತ್ತಿನಾಲುಮ್ ಮನ್ನಿ,
ಐಯಮೊನ್ರಿಲ್ಲೈ ಅರಕ್ಕರಶುರರ್ ಪಿರಂದೀರುಳ್ಳೀರೇಲ್,
ಉಯ್ಯುಮ್ ವಗೈಯಿಲ್ಲೈ ತೊಂಡೀರ್! ಊಳಿ ಪೆಯರ್ತ್ತಿಡುಮ್ ಕೊನ್ರೇ.

ಶೆಯ್‌ಗಿನ್ರದು செய்கின்றது = (ಅವರು) ಮಾಡುತ್ತಿರುವುದು. ಎನ್ ಕಣ್ಣುಕ್ಕು என் கண்ணுக்கு = ನನ್ನ ಕಣ್ಣಿಗೆ, ಒನ್ರೇ ஒன்றே = ಒಂದೇ ಆಗಿ, ಒಕ್ಕಿನ್ರದು ஒக்கின்றது = ತೋರುತ್ತದೆ. ಇವ್ವುಲಗತ್ತು இ உலகத்து = ಈ ಲೋಕದಲ್ಲಿ, ವೈಗುಂದನ್ வைகுந்தன் = ಭಗವಂತನು (ವೈಕುಂಠಪತಿಯು), ಭೂದಙ್ಗಳ್ ಆಯ್ பூதங்களே ஆய்

Garani Srinivasan

ಭಕ್ತರೇ ಆಗಿ (ಅವರೂ), ಮಾಯತ್ತಿನಾಲ್ ಮಾಯಕ್ಕೆತ್ತಿರುಂ = ಮಾಯದಿಂದ
ಎಙ್ಙುಮ್ ಶಾಙ್ಗುಕಿಂ = ಎಲ್ಲೆಲ್ಲಿಯೂ, ಮನ್ನಿ ಮಣ್ಣಾರ್ = ತುಂಬಿ, (ಇರುತ್ತಾನೆ),
ಪ್ರಿಯುಮ್ ಒನ್ರು ಇಲ್ಲೈ ಐಯಂ ತ್ತಾಣ್ಣುಶಿನ್ದಿಲ = ಸಂಶಯವು ಸ್ವಲ್ಪ
ವೂ ಇಲ್ಲ. ಅರಕ್ಕರ್ ಅಶುರರ್ அரக்கர் அசுரர் = ರಾಕ್ಷಸರು,
ಅಸುರರು ಪಿರನ್ದೀರ್ பிறந்தீர் ಹುಟ್ಟಿದವರು, ಉಳ್ಳಿರ್ ಉಣ್ಣೀರ್
ಆದ್ದರ (ಉಳ್ಳವರಾದ್ದರೆ), ಉಯ್ಯುಮ್ ಉய்யும் ಉಜ್ಜೀವನಗಳ್ಳು
ವ, ವಳಿ ಇಲ್ಲೈ ಉಣ್ಣಾ ಶಿನ್ದಿಲ = ದಾರಿ ಇಲ್ಲ, ಶೊಲ್ಲುವೆನ್ ...
ರ್ = ಭಕ್ತರೇ, ಊಳಿ ಉಣ್ಣಿ = ಯುಗವು, ಪೆಯರ್ತ್ತು பெயர்
ತ್ತು = ವೃದ್ಧಿಗೊಂಡು, ಇದುಮ್ ಶೊನ್ನೇನ್ இடும் கொண்டு = (ನಿಮ್ಮ
ನ್ನು) ಕೊಂಡೇ ಬಿಡುವುದು

(ಅವರು) ಮಾಡುತ್ತಿರುವುದು ನನ್ನ ಕಣ್ಣಿಗೆ ಒಂದೇ ಆಗಿ ಕಾಣುವುದು. ತನ್ನ ಶಕ್ತಿ. ಈ ಲೋಕದಲ್ಲಿ ವೈಷ್ಣವರೆಲ್ಲರೂ ಭಕ್ತರೇ ಆಗಿ ಅವರೂ, ಮಾಯೆಯಿಂದ ಎಲ್ಲೆಲ್ಲೂ ತುಂಬಿರುತ್ತಾನೆ. ಸಂಶಯ ಸ್ವಲ್ಪವೂ ಇಲ್ಲ. ರಾಕ್ಷಸರು ಅಸುರರು (ಇವರಿಗೆ) ಹುಟ್ಟಿದವರು ಉಳ್ಳವರಾದ್ದರೆ, ಉಜ್ಜೀವನಕ್ಕೆ ಬೇರೆ ದಾರಿಯೇ ಇಲ್ಲ. ಭಕ್ತರೇ, ಯುಗವು ವೃದ್ಧಿಗೊಂಡು ನಿಮ್ಮನ್ನು ಕೊಂಡೇ (5)
ಬಿಡುವುದು.

ಮುಂದಿನ ಪಾಶುರದ ವಿಷಯವಾದ ಭಗವಂತನೇ ಭಕ್ತರಾದಲ್ಲಿ ದರೆ ಆಗದು ಬಂದು ಮಾಡುತ್ತಿರುವ ಕೆಲಸದ ಫಲವೇನೆಂಬುದನ್ನು ಇನ್ನಷ್ಟು ಸ್ಪಷ್ಟಗೊಳಿಸುತ್ತಾರೆ

"ಶೆಯಲನ್ರಾದನ ಶೊಲ್ಲೊಣ್ಣಾನ್ನಲ್ಲೇ ಒಕ್ಕಿನ್ರಾದು" — ಭೂಮಿಯ ಜನರು ಮಾಡುವುದೆಲ್ಲವೂ, ಒಂದೇ ಬಗೆಯದು ಎನಿಸುತ್ತದೆ. ಹುಟ್ಟುವುದು, ಬೆಳೆಯುವುದು, ಬನ್ನಾವುದು, ಮಕ್ಕಳನ್ನು ಪಡೆಯುವುದು, ಜೀವನದಲ್ಲಿ ನಾನಾ ಕ್ಲೇಶಗಳನ್ನು ಅನುಭವಿಸುವುದು. ಬಗೆಬಗೆಯ ಕರ್ಮಗಳನ್ನು ಮಾಡುವುದು, ರೋಗ ಮುಪ್ಪುಗಳನ್ನು ಅನುಭವಿಸುವುದು, ಕಡೆಗೆ ಸಾಯುವುದು. ನರಕವೂ ಸಂಸಾರ ತಾಪತ್ರಯಗಳಲ್ಲಿ ಸಿಕ್ಕಿಬಿದ್ದು ತೊಳಲುತ್ತಲೇ ಇರುವುದು. ಈ ಜನರು ಉದ್ಧಾರಗೊಳ್ಳಬೇಕಲ್ಲವೇ? ಬಿಡುಗಡೆ ಹೊಂದಬೇಕಲ್ಲವೇ? ಆಳ್ವಾರರಿಗೆ ಇದನ್ನೆಲ್ಲಾ ಕಂಡು ಮರುಕ.

"ಇಪ್ಪುಲಗತ್ತು ವೆಪ್ಪುನ್ನ್ ಪೂದಙ್ಗಳ್ಗಳಾಯ್ ಮಾಯತ್ತಿನಾಲ್ ಙ್ಙುಮ್ ಮನ್ನಿ" — ಭಗವಂತನಿಗೆ ಇಂಥ ಅಜ್ಞಾನಿ ಜನರನ್ನು ಕಂಡರೆ

Garani Srinivasan

ಮತ್ತೆ ಅವರನ್ನು ಸನ್ಮಾರ್ಗಕ್ಕೆ ತರಲು ಸಂಕಲ್ಪಿಸುತ್ತಾನೆ. ಅದಕ್ಕಾಗಿ, ಲೋಕದಲ್ಲಿ ಭಾಗವದ್ಭಕ್ತರ ರೂಪದಲ್ಲಿ ಅವತರಿಸಿ ಅವನೇ ಎಲ್ಲೆಲ್ಲೂ ಸಂಚರಿಸಿಕೊಂಡಿದ್ದಾನೆ. ನಾಮ ಸಂಕೀರ್ತನೆಯನ್ನು ನಡೆಸುತ್ತಾನೆ ಅದನ್ನು ಎಲ್ಲರೂ ಸ್ವೀಕರಿಸುವಂತೆ ಮಾಡುತ್ತಾನೆ ಅಂತಹ ಭಗವಂತನ ಮಾಯೆ- ಅವನ ಸಂಕಲ್ಪ

ಅರಕ್ಕರ್ ಅಸುರರ್ ಪಿರನ್ದೀರುಳ್ಳೀರೇಲ್"— ಜನರೇ, ಅಸುರ ರಾಕ್ಷಸ ಸ್ವಭಾವದವರು ನೀವಾಗಿದ್ದರೆ ನಿಮಗೆ ಉದ್ಧಾರವಾಗಲು ಬೇರೆ ಮಾರ್ಗವೇ ಇಲ್ಲ. ಭಗವನ್ನಾಮಸ್ಮರಣೆಯೊಂದೇ ಸರಳ ಮಾರ್ಗ

"ಊಳಿ ಪೆಯರ್ತ್ತಿಡುಮ್ ಕೊನ್ರೇ"— ಕೇವಲ ಮಾರ್ಗವನ್ನು, ಅಸುರ, ರಾಕ್ಷಸ ಪ್ರಕೃತಿಯವರು ನೀವಾಗಿ ಹುಟ್ಟಿದ್ದರೂ ನಿಮಗೆ ನಿಮ್ಮ ಸ್ವಭಾವದವರಲ್ಲಿ ಬದಲ ಉಜ್ಜೀವನ ಸಾಧ್ಯವಿಲ್ಲ. ಕಲಿಪುರುಷನಿಗೆ ನಿಮ್ಮನ್ನು ಮತ್ತೆ ಮತ್ತೆ ಇಷ್ಟ. ಅವನು ಪ್ರಬಲನಾಗುವುದಕ್ಕೆ ಅನುಕೂಲ ನಿಮ್ಮನ್ನು ಮತ್ತೆ ಮತ್ತೆ ಮಾಡುವುದಕ್ಕೂ, ನರಭಾಜನ ಮಾಡುಕೊಳ್ಳುವುದಕ್ಕೂ, ಕಡುಪಾಪಿಗಳನ್ನಾಗಿ ಮಾಡುವುದಕ್ಕೂ ಅವನಿಗೆ ಸದವಕಾಶ.

ಆಳ್ವಾರರು ಹೇಳುತ್ತಾರೆ: ನನ್ನ ಕಣ್ಣಿಗೆ ಲೋಕದ ಜನರೆಲ್ಲ ಮಾಡುವುದು ಒಂದೇ ಕಲಿಯ ಎಂದು ಕಾಣುತ್ತದೆ. ಕಲಿಯು ಪ್ರಬಲನಾಗುವ ಕಾಲ ... ಜನರನ್ನು ತಪ್ಪಿಸುವುದಕ್ಕಾಗಿಯೇ ಸಂಪ್ರಕೃತಿ ವೃದ್ಧಿಯಾಗುವುದು. ಅದರಿಂದ ಜನರನ್ನು ತಪ್ಪಿಸುವುದಕ್ಕಾಗಿಯೇ ಭಗವಂತನು ಭಕ್ತರ (ಭಾಗವತರ) ರೂಪದಲ್ಲಿ ಎಲ್ಲೆಲ್ಲೂ ಸಂಚರಿಸಿಕೊಂಡು, ಭಗವನ್ನಾಮ ಸ್ಮರಣೆ ಮಾಡುವುದು ಅವರ ಉಜ್ಜೀವನಕ್ಕೆ ಸರಳ ಮಾರ್ಗವೆಂದು ತಿಳಿಸುತ್ತಾನೆ

6\. கொன்றுயிருண்ணும் விசாதி பகைபசி தீயன
வெல்லாம்,
நின்றிவ்வுலகில் கடிவான் நேமிப்பிரான் தமர்
போந்தார்,
நின்றிசை பாடியும் துள்ளியாடியும் ஞாலம்
பரந்தார், மய
சென்று தொழுதுய்ம்மின் தொண்டீர்! சிந்தைச்
செந்நிறுத்தியே.

ಕೊನ್ರುಯಿರುಣ್ಣುಮ್ ವಿಶಾದಿ ಪಗೈಪಶಿ ತೀಯನವೆಲ್ಲಾಮ್,
ನಿನ್ರಿವ್ವುಲಗಿಲ್ ಕಡಿವಾನ್ ನೇಮಿಪ್ಪಿರಾನ್ ತಮರ್ ಪೋನ್ದಾರ್,
ನನ್ರಿಶೈ ಪಾಡಿಯುಮ್ ತುಳ್ಳಿಯಾಡಿಯುಮ್ ಞಾಲಮ್ ಪರನ್ದಾರ್,
ಶೆನ್ರು ತೊಳುದುಯ್ಮ್ಮಿನ್ ತೊಣ್ಡೀರ್! ಶಿನ್ದೈಯೈ ಶೆನ್ನಿರುತ್ತಿಯೇ.

Garani Srinivasan

ಪೊನ್ಱು ಕೊಣ್ಱು = ಹೊಂದು, ಉಯಿರ್ ಉಯಿರ್ = ಪ್ರಾಣವನ್ನು,
ಉಣ್ಣುಮ್ ಉಣ್ಣುಮ್ = [redacted] ನಲುಗಿಸುವಂಥ (ಬಾಸಿಸಿ ಪೀಡಿಸುವಂ
ಥ), ಪಿಣಿ ಪಿಣಿ = ವ್ಯಾಧಿ (ರೋಗ), ಪಗೈ ಪಗೈ = ದ್ವೇಷ,
ಪಶಿ ಪಶಿ = ಹಸಿವು, (ಮುಂತಾದ), ಶಿಱಯುನ ಎಲ್ಲಾಮ್ ಕ್ಕೊಯಿಣ ನಾತು
ಲಾಮ್ = ಕಷ್ಟಗಳನ್ನು ನೀಙ್ಗ ಇ ಉಲಗಿಲ್ ನಿಣ್ಱು ಇ ಉಲಗಿಲ್
ಲಾಮ್ = ಕಷ್ಟಗಳನ್ನು ನೀಙ್ಗು ಇ ಉಲಗಿಲ್ ನೀಙ್ಗು' ಎಂದು ಅನ್ವಯ), ಕಡಲ್ ನೀಙ್ಗ
= ಈ ಲೋಕದಿಂದ, ('ಇ ಉಲಗಿಲ್ ನೀಙ್ಗು' ಎಂದು ಅನ್ವಯ), ಕಡಲ್ ನೀಙ್ಗ ನೇಮಿಪ್ಪಿರಾ
ಮಾಣ್ = ತೊಲಗಿಸುವುದಕ್ಕಾಗಿಯೇ, ನೇಮಿಪ್ಪಿರಾನ್ ತಮರ್ ನೇಮಿಪ್ಪಿರಾ
ಣ್ ತಮರ್ = ಚಕ್ರಧಾರಿಯಾದ ಸ್ವಾಮಿಯ ಭಕ್ತರು (ದಾಸರು), ಪೋನ್ದಾರ್ ಪೋ
ನ್ದಾರ್ = ಬಂದಿದ್ದಾರೆ, ನಿನ್ಱು ನಿಣ್ಱು = ನಿಂತು, ಇಶೈಪಾಡಿಯುಮ್
ಇಶೈಪಾಡಿಯುಮ್ = ಗಾನ ಮಾಡಿಯೂ, ತುಳ್ಳಿ ತುಣ್ಣಿ = ಉತ್ಸಾಹದಿಂ
ದ, ಆಡಿಯುಮ್ ಆಡಿಯುಮ್ = ನಲಿದಾಡಿಯೂ (ಕುಣಿದಾಡಿಯೂ), ಞಾಲ
ಮ್ ಞಾಲಮ್ = ಭೂಲೋಕದಲ್ಲೆಲ್ಲಾ, ಪರನ್ದಾರ್ ಪರನ್ದಾರ್ = ಹರಡಿಕೊಂ
ಡಿದ್ದಾರೆ, ಶೆನ್ಱು ಶೆಣ್ಱು = ಹೋಗಿ, ತೊಱುದು ತೊೞುದು = ಎರ
ಗಿ (ಪೂಜಿಸಿ), ಉಯ್ಮ್ಮಿನ್ ಉಯ್ಮ್ಮಿಣ್ = ಉಜ್ಜೀವನ ಹೊಂದಿ, ತೊಣ್ಡೀ
ರ್ ತೊಣ್ಡೀರ್ = ಭಕ್ತರೇ, ಶಿನ್ದೈಯ್ಯೆ ಶಿನ್ದೈಯೈ = ಮನಸ್ಸನ್ನು,
ಶೇಮ ನಿಱುತ್ತಿ ಶೆಮ್ ತಿರುತ್ತಿ = ಚೆನ್ನಾಗಿ (ಶ್ರದ್ಧೆಯಾಗಿ) ಇರಿಸಿ (ನಿಲ್ಲಿಸಿ) ಪ್ರಾಣ

ಹೊಂದು ಪೀಡಿಸುವಂಥ ರೋಗ, ದ್ವೇಷ, ಹಸಿವು ಮುಂತಾದ ಕಷ್ಟಗ
ಳನ್ನು ಈ ಲೋಕದಿಂದ ತೊಲಗಿಸುವುದಕ್ಕಾಗಿಯೇ ಚಕ್ರಧಾರಿಯಾದ
ಸ್ವಾಮಿಯ ಭಕ್ತರು ಬಂದಿದ್ದಾರೆ. ನಿಂತು ಗಾನ ಮಾಡಿಯೂ, ಉತ್ಸಾಹದಿಂದ
ಕುಣಿದಾಡಿಯೂ ಭೂಲೋಕದಲ್ಲೆಲ್ಲಾ ಹರಡಿಕೊಂಡಿದ್ದಾರೆ. ಭಕ್ತರೇ,
ಹೋಗಿ, ಎರಗಿ (ಪೂಜಿಸಿ), ಉಜ್ಜೀವನ ಹೊಂದಿರಿ, ಮನಸ್ಸನ್ನು ಶ್ರದ್ಧಾ (6)
ಇರಿಸಿರಿ.

ಭಗವದ್ಭಕ್ತರಾದ ಭಾಗವತರು ಭೂಲೋಕದಲ್ಲೆಲ್ಲಾ ತುಂಬಿ ಹರಡಿ
ಕೊಂಡಿರುವುದರ ಉದ್ದೇಶವೇನು ಎಂಬುದನ್ನು ಇಲ್ಲಿ ಹೇಳುತ್ತಾರೆ.
'ಪೊನ್ಱುಯಿರುಣ್ಣುಮ್ ... ಎಲ್ಲಾಮ್" — ಮನುಷ್ಯನನ್ನು
ಬಾಧಿಸಿ, ನಲುಗಿಸಿ, ಪೀಡಿಸುವ ಕಷ್ಟವಿಷಯಗಳು ಹಲವಾರು. ಇಲ್ಲಿ
ಮೂರನ್ನು ಮಾತ್ರ ಆರಿಸಿ ಕೊಳ್ಳಲಾಗಿದೆ — ವ್ಯಾಧಿ, ದ್ವೇಷ, ಹಸಿವು ಇಂ
ತಹವು ಇವು ಸಂಬಂಧಿ ಹೊರೆಗಳು ಇನ್ನು ಕೆಲವಿವೆ. 'ವ್ಯಾಧಿ'ಯ ಜೊತೆಗೆ, ಮುಪ್ಪು, ಸಾವು,
ದುಃಖ. 'ದ್ವೇಷ'ದ ಜೊತೆಗೆ ರಾಗ (ಆಶೆ), ಕಾಮ, ಕ್ರೋಧ, ಅಸೂಯೆ.
ಹಸಿವಿನ ಜೊತೆಗೆ ಬಾಯಾರಿಕೆ ಮತ್ತು ಅವುಗಳನ್ನು ಹಿಂಬಾಲಿಸುವ ದಾರಿದ್ರ್ಯ.

ಎಲ್ಲವೂ ಮನುಷ್ಯನನ್ನು ಅವನು ಸಾಯುವವರೆಗೂ ಹಿಂಡಿ ಹಿಪ್ಪೆಮಾಡಿ, ಗೋಳಾಡಿ
ಸುತ್ತವೆ. ಕಡೆಗೆ, ಅವನಿಗೆ ಮರು ಹುಟ್ಟನ್ನು ಉಂಟುಮಾಡುತ್ತವೆ

ಆಳ್ವಾರರು ಹೇಳುತ್ತಾರೆ: ಭಕ್ತರೇ, ಬದುಕಿರುವಷ್ಟು ಕಾಲವೂ
ಮನುಷ್ಯನನ್ನು ನಾನಾ ರೀತಿಯಲ್ಲಿ ಹಿಂಸಿಸುತ್ತಿರುವ ಕ್ಷುದ್ರ ವಿಷಯಗಳನ್ನೆಲ್ಲಾ
ಹೋಗಲಾಡಿಸಿದ ಹಿಂದಿನ ಕಾಲದ ಭಗವದ್ಭಕ್ತರು (ಭಾಗವತರು) ಹೋಲಿಸಿದ
ಲ್ಲಿ ಅರಳುತ್ತಿದ್ದಾರೆ. ಅವರು ಎಲ್ಲೆಲ್ಲೂ ಉದಾಹರಿಸಿಕೊಂಡಿದ್ದಾರೆ. ಅವರು ಅಲ್ಲಿ
ನಂತರ, ಭಗವಂತನನ್ನು ಸೇರಿ ಹಾಡುತ್ತಾರೆ. ಮೃಕಂಡು ಸೂನುವೇ ಸಾಕ್ಷಿಯಾಗಿದ್ದಾರೆ.
ನೀವು ಸಹ ನಿಮ್ಮ ಮನಸ್ಸನ್ನು ಶುದ್ಧಗೊಳಿಸಿಕೊಂಡು, (ಒಳ್ಳೆಯ ಮನಸ್ಸಿನಿಂದ),
ಅವರ ಬಳಿಗೆ ಬನ್ನಿ. ಅವರನ್ನು ಆಶ್ರಯಿಸಿ ಭಗವಂತನ ಕೀರ್ತನೆ ಹಿಂ
ತನಗಳನ್ನು ಹಾಡಿರಿ. ನೀವು ಉಜ್ಜೀವನಗೊಳ್ಳುವ ಬಗೆ ಇದೇ

7 நிறுத்தி நும்முள்ளத்துக் கொள்ளும் தெய்வங்க ளும்மையுய்யக் கொண்டு
மறுத்துமவனோடே கண்டீர் மார்க்கண்டேயனும் கரியே,
கறுத்த மனமொன்றும் வேண்டா கண்ணனல்லால் தெய்வமில்லை,
இறுப்பதெல்லாம் அவன் மூர்த்தியாயவர்க்கே இறுமினே.

ನಿಱುತ್ತಿ ನುಮ್ಮುಳ್ಳತ್ತು ಕೊಳ್ಳುಮ್ ತೆಯ್ವಙ್ಗಳುಮ್ಮೈಯುಯ್ಯಕ್ಕೊಣ್ಡು,
ಮಱುತ್ತುಮವನೋಡೇ ಕಣ್ಡೀರ್ ಮಾರ್ಕಣ್ಡೇಯನುಮ್ ಕರಿಯೇ,
ಕಱುತ್ತ ಮನಮೊನ್ಱುಮ್ ವೇಣ್ಡಾ ಕಣ್ಣನಲ್ಲಾಲ್ ತೆಯ್ವಮಿಲ್ಲೈ,
ಇಱುಪ್ಪದೆಲ್ಲಾಮ್ ಅವನ್ ಮೂರ್ತ್ತಿಯಾಯವರ್ಕ್ಕೇ ಇಱುಮಿನೇ

~~[illegible]~~ ನಿಱುತ್ತಿ நிறுத்தி = ನಿಲ್ಲಿಸಿ (ಒಮ್ಮನಸ್ಸಾಗಿ), ನುಮ್ நும் = ನಿಮ್ಮ, ಉಳ್ಳತ್ತು உள்ளத்து = ಮನಸ್ಸನ್ನು, ಕೊಳ್ಳುಮ್ கொள்ளும் = [illegible]ಪಡಿಸಿಕೊಳ್ಳುವ (ಹಿಂಸಿಸಲ್ಪಡುವ), ತೆಯ್ವಙ್ಗಳ್ தெய்வங்கள் = ದೇವತೆಗಳು, ಉಮ್ಮೈ உம்மை = ನಿಮ್ಮನ್ನು, ಉಯ್ಯಕ್ಕೊಣ್ உய்யக்கொண் = ಉಜ್ಜೀವನ ಪಡಿಸುವುದು, ಮಱುತ್ತುಮ್ மறுத்தும் = ಮತ್ತೆ, ಅವನೋಡೇ அவனோடே = ಆ ಸರ್ವೇಶ್ವರನೊಡನೆ, ಕಣ್ಡೀರ್ கண்டீர் = ಕಂಡಿರಾ, ಮಾರ್ಕಣ್ಡೇಯನುಮ್ மார்க்கண்டேயனும் = ಮಾರ್ಕಂಡೇಯನೂ, ಕರಿಯೇ கரியே = ಸಾಕ್ಷಿಯು, ಕಱುತ್ತ கறுத்த = ಕಪ್ಪಾದ

ಮನಮುಮ್ மாணாம் = ಮನಸ್ಸು ಒಣಗುವುದು ஞானமும் = ಜ್ಞಾನವೂ, ಬೇಡ

வேண்டா = ಬೇಡ, ಕಲ್ಲಾನ್ ಅಲ್ಲಾಲ್ கண்ணாணன் அம்மான் ಶ್ರೀಕೃ

ಷ್ಣನಾದಿಯಾದ ಅಕ್ಕ್ಯೈಶ್ವರ್ಯನು, ದೊರೆ, ಶಂಖವನ್ನು ಇಲ್ಲತ்தையும்

ಷ್ಣನಾದಿಯಾದ ಅವತಾರಗಳು ... ಎಲ್ಲಾ ತಿருப்பது

திலை = (ಬೇರೆ) ದೈವವೇ ಇಲ್ಲ, ಇಷ್ಟೂ ಎಲ್ಲಾ ತಿருப்பது

நாமமாம் = ನಿಲ್ಲದುದೆಲ್ಲವನ್ನು, ಅವನ್ அவன் = ಅವನ, ಮೂರ್ತಿ

ಯಾಯಾ ಅರ್ ಕ்ಕீயாய = ನಾವಿವೇ ಆಗಿರುವ, ಅವರ್ಕ್ಕೇ அவர் க்கே

ಅವನಿ (ಇತರ ದೈವಗಳಿಗೆ) ಇಯುಮನೇ திருமிணை = ನಿಲ್ಲಿಸಿ.
(ಸರ್ವೇಶ್ವರನಿಗೆ)

ನಿಮ್ಮ ಮನಸ್ಸನ್ನು ಸ್ಥಿರಪಡಿಸಿ (ಒಮ್ಮನ ಮಾಡಿ) ಪಡೆದುಕೊಳ್ಳುವ (ಜಂಗಿಸಲ್ಪಡುವ) ದೇವತೆಗಳು ನಿಮ್ಮನ್ನು ಉಜ್ಜೀವನಗೊಳಿಸುವುದನ್ನು ಕಂಡಿರಲ್ಲ! ಮಾರ್ಕಂಡೇಯ ಮತ್ತು ಅವನೊಡನೆ (ಆ ಸರ್ವೇಶ್ವರನೊಡನೆ) ಕಂಡಿರಲ್ಲ! ಮಾರ್ಕಂಡೇಯ ನ ಕಾಪಾಡಿದ. ಕಷ್ಟದಲ್ಲಿಯೂ ಮನಸ್ಸು ದೃಢವೂ ಬೇಡ. ಶ್ರೀಕೃಷ್ಣನಾದಿಯಾದ ಅಕ್ಕ್ಯೈಶ್ವರ್ಯನ್ನು ಬಿಟ್ಟು ಬೇರೆ ದೈವವೇ ಇಲ್ಲ. ನೀವು ನಿಲ್ಲಿಸುವುದೆಲ್ಲವ (ಸರ್ವೇಶ್ವರನಿಗೆ) ನ್ನು ಅವನ ದಾಸನೇ ಆಗಿರುವ ಅವನಿ (ಇತರ ದೈವಗಳಿಗೆ) ನಿಲ್ಲಿಸಿ. (7)

ಭಗವಚ್ಛಾಸ್ತ್ರರು ಭೂಮಿಯ ಮೇಲೆ ಎಲ್ಲಾ ಸಂಚರಿಸಿಕೊಂಡು, ಸರ್ವೇಶ್ವರನನ್ನು ಕೀರ್ತಿಸುತ್ತಿರಲು, ಅವರನ್ನು ಆಶ್ರಯಿಸಿ, ಆ ಮೂಲಕ ಉದ್ಧಾರ ಹೊಂದುವ ಬದಲು ಇದುವರೆಗೆ ದೇವತಾಂತರ ಆ ಜನರಿಗೆ ಇನ್ನೂ ಹೊಳ್ಳುಬೇಕೆಂದು ಇದುವರೆಗೆ ದೇವತಾಯಿತು. ಜನ ಅನ್ಯದೈವಗಳ ಭಕ್ತರಾದರೆ, ಅವರು ದು ನಿಲ ನೋಡಲಾಗುತ್ತದೆ. ಜನ ಅನ್ಯದೈವಗಳ ಭಕ್ತರಾದರೆ, ಅವರು ಮಾಡುವ ತಮ್ಮ ಭಕ್ತಿಯನ್ನು ಕಷ್ಟಪಟ್ಟು ದೃಢಪಡಿಸಿಕೊಂಡವರಾದರೆ, ಅವರು ಮಾಡುವ ಕಾದದ್ದೇನು?

"ಮಾರ್ಕಂಡೇಯನುಮ್ ಕರಿಯೇ" – ಇದಕ್ಕೆ ಮಾರ್ಕಂಡೇಯ ನನ್ನು ಒಂದು ನಿದರ್ಶನವಾಗಿ ಎತ್ತಿಕೊಳ್ಳಲಾಗಿದೆ. ಅವನು ಶಿವಭಕ್ತ ನನ್ನು ಒಂದು ನಿದರ್ಶನವಾಗಿ ಎತ್ತಿಕೊಳ್ಳಲಾಗಿದೆ. ಅವನು ಶಿವಭಕ್ತ ದೇವರಾದವನು. ಎಳೆಯ ವಯಸ್ಸಿನಲ್ಲಿ ಅವನನ್ನು ಯಮನ ಪಾಶ ಬಾಧಿಸಿ ದೇವರಾದವನು. ಎಳೆಯ ವಯಸ್ಸಿನಲ್ಲಿ ಅವನನ್ನು ಯಮನ ಪಾಶ ಬಾಧಿಸಲು ಎಳೆದುಕೊಂಡು ಹೋಗುವ ಸಂದರ್ಭ ಬಂದಾಗ, ತಾನು ಪೂಜಿಸುತ್ತಿದ್ದ ಶಿವಲಿಂಗವನ್ನೇ ಅವನು ಬಾಚಿ ತಬ್ಬಿಕೊಂಡನು. ಯಮನ ಪಾಶ ಬಿಡಲಿಲ್ಲ. ಆ ಲಿಂಗದೊಡನೆಯೇ ಅವನನ್ನು ಸೆಳೆಯತೊಡಗಿತು. ಆಗ ಶಿವನು ಭಕ್ತನ ಆ ಲಿಂಗದೊಡನೆಯೇ ಅವನನ್ನು ಸೆಳೆಯತೊಡಗಿತು. ಆಗ ಶಿವನು ಭಕ್ತನ ಶಿವನು ಸರ್ವೇಶ್ವರನನ್ನು ಪ್ರಾರ್ಥಿಸಿ, ಅವನ ಸಹಾಯದಿಂದ ಕಾಲನನ್ನು ಗೆದ್ದನು ಎಂಬುದು ಇಲ್ಲಿನ ಸಂದರ್ಭ.

"ಕಲಂತ ಮನಮಾನ್ ಉಮ್ ವೇಣ್ಡಾ" — ಅನ್ಯದೇವತಾ ಪೂಜೆ ಯ ಹೇಳುವ ಮಾತಿದು – ನಿಮ್ಮ ಮನಸ್ಸು ಕದಡಿರಲಿ. ಕಲಂಕ ಮಾಡಬೇಡ. ನನ್ನ ಮಾತನ್ನು ಸಮಾಧಾನವಾಗಿ ಕೇಳಿ, ತಿಳಿಯಿರಿ.

ಕಣ್ಣನಲ್ಲಾಲ್ ಕೇಯ್ವಮುಕ್ತಿ — ಸರ್ವೇಶ್ವರನು ಅತ್ಯಾಕರ್ಷಕ ರೂಪದ
ರ. ಶ್ರೀಕೃಷ್ಣಾವತಾರದಲ್ಲಿ ಅವನು ನಡೆಸಿದ ಆಶ್ಚರ್ಯದಾಯಕ ಕಾರ್ಯಗಳ
ನ್ನು ನೀವು ಕೇಳಿದರಾದರೆ ಖಂಡಿತ ನಿಶ್ಚಯವಾಗಿ ತಿಳಿಯುವುದು. ಅವನ
ಆಶ್ರಯಿಸಿ ಭಜಿಸಿದರೆ ಮೋಕ್ಷ ದೊರೆತೀತು

'ಇಱುಪ್ಪಿಡಮ್ ... ಇಲ್ಲೈಯುಮಿನೇ' — ನೀವು ಕೆಟ್ಟ
ದೈವ, ಮನಸ್ಸನ್ನು ದೃಢಗೊಳಿಸಿ (ಅಂತರಂಗದಲ್ಲಿ) ಬಿಡದೆ ಕೊಂಡಿರುವ ದೈವವನ್ನೇ ಭಜಿಸಿ,
ಪೂಜಿಸಿ. ಆದರೆ, ನೀವು ಪೂಜಿಸುವಾಗ ನಿಮ್ಮ ದೈವವನ್ನು ಆ ಸರ್ವೇಶ್ವರನ
ರೂಪವೆಂದು ಭಾವಿಸಿ, ನಿಮ್ಮ ಭಕ್ತಿಯನ್ನು ಅವನಿಗೇ (ಆ ಸರ್ವೇಶ್ವರನಿಗೇ)
ಸಲ್ಲಿಸುತ್ತಿರುವುದಾಗಿ ತಿಳಿಯಿರಿ.

ಆಳ್ವಾರರು ಹೇಳುತ್ತಾರೆ: ಅನ್ಯದೈವಗಳನ್ನು ಪೂಜಿಸುವವರೇ,
ಅತ್ಯಾಕರ್ಷಕನಾದ ಸರ್ವೇಶ್ವರನನ್ನೇ ಇತರ ಎಲ್ಲ ದೇವರುಗಳೂ ಆಶ್ರಯಿಸು
ತ್ತಾರೆ. ನನ್ನ ಹೇಳಿಕೆ ನೀವು ಕೇಳಬೇಕಾಗಿಲ್ಲ. ನೀವು ಶ್ರಮಪಟ್ಟು
ನಿಮ್ಮ ಅಂತರಂಗದಲ್ಲಿ ಕೊಂಡಿರುವ ದೈವವನ್ನೇ ಬಿಡದೆ ಭಕ್ತಿಯಿಂದ
ಪೂಜಿಸುತ್ತಾ ಬನ್ನಿ. ಮತ್ತು, ಆ ದೈವ ಸರ್ವೇಶ್ವರನ ಶರೀರ ರೂಪವೆಂದು ತಿಳಿದು,
ನಿಮ್ಮ ಭಕ್ತಿಯನ್ನು ಸಲ್ಲಿಸಿ, ಉಜ್ಜೀವನಗೊಳ್ಳಿ.

8. இறுக்குமிறையிறுத்துண்ண எவ்வுலகுக்கும் தன் மூர்த்தி,
நிறுத்தினான் தெய்வங்களாக அத்தெய்வ நாயகன் தானே,
மறுத்திருமார்வனவன் தன் பூதங்கள் கீதங்கள் பாடி,
வெறுப்பின்றி ஞாலத்துமிக்கார் மேவித்தொழுதுய்ம்மினீரே.

ಇಱುಕ್ಕುಮಿಱೈಯಿಱುತ್ತುಣ್ಣ ಎವ್ವುಲಗುಕ್ಕುಮ್ ತನ್ ಮೂರ್ತ್ತಿ,
ನಿಱುತ್ತಿನಾನ್ ತೆಯ್ವಙ್ಗಳಾಗ ಅತ್ತೆಯ್ವನಾಯಗನ್ ತಾನೇ,
ಮಱುತ್ತಿರುಮಾರ್ವನವನ್ ತನ್ ಪೂತಙ್ಗಳ್ ಕೀತಙ್ಗಳ್ ಪಾಡಿ,
ವೆಱುಪ್ಪಿನ್ಱಿ ಞಾಲತ್ತುಮಿಕ್ಕಾರ್ ಮೇವಿತ್ತೊೞುದುಯ್ಮ್ಮಿನ್ ನೀರೇ.

ಇಱುಕ್ಕುಮ್ இறுக்கும் = ನೀಡಬೇಕಾದ, ಇಱೈ இறை = ದೇವ-
ತೆಗೆ (ದೇವನಿಗೆ), ಇಱುತ್ತು இறுத்து = (ಕಾಣಿಕೆ) ಸಲ್ಲಿಸಿ, ಉಣ್ಣ உண்ண =
ಅನುಭವಿಸುವುದಕ್ಕಾಗಿ (ಬಾಳುವುದಕ್ಕಾಗಿ), ಎವ್ವುಲಗುಕ್ಕುಮ್ எவ்வுலகுக்கும் =
ಎಲ್ಲಾ ಲೋಕಂಗಳಿಗೂ, ತನ್ ಮೂರ್ತ್ತಿ தன் மூர்த்தி = ತನ್ನ ಮೂರ್ತಿಯನ್ನು,
ನಿಱುತ್ತಿನಾನ್ நிறுத்தினான் = ನಿಲ್ಲಿಸಿದನು, ತೆಯ್ವಙ್ಗಳ್ ಆಗ தெய்வ

ಕಳ್ ಆಗ = (ಆಯಾ ಲೋಕಂಗಳಿಗೆ) ದೈವವಾಗಿ (ಒಡೆಯನಾಗಿ), ಅರಿಯುವವರ ನಾಯಕನ್ ತಾನೇ ಅ தெய்வம் நாயகன் தானே = ಆ ದೈವಗಳ ನಾಯಕನಾದ (ಒಡೆಯನಾದ)ವನೇ, ಮರು மறு = ಮಚ್ಚೆಯನ್ನು ತಿರುಮಾರ್ ಬವನ್ ತನ್ திருமார்பவன் தன் = ಪವಿತ್ರವಾದ ಎದೆಯಲ್ಲಿ ಉಳ್ಳವನು, ಪೂರ ಜಿಳ್ ಪೂತಙ್ಕಳ್ = ಭಕ್ತರು, ಕಲ ಪಾಡಿ கூத்துங்கள் பாடி = ಕಲ ಶಗಳನ್ನು ಹಾಡಿ, ವೆಯುಪ್ಪ ಇನ್ರಿ ஒயப்பு இன்றி = ಬೇಸರವಿಲ್ಲದೆ ಆಲಸ್ಯ ஞாலத்து = ಕಾಲಲೋಕದಲ್ಲಿ, ಮಿಕ್ಕಾರ್ மிக்கார் = ಉತ್ತಮರಾದ ವರಾಗಿದ್ದಾರೆ, ಮೇವಿ மேவி = ಆಶ್ರಯಿಸಿ, ತೊಳುದು தொழுது = ಎರಗಿ (ಪೂಜಿಸಿ), ಉಯ್ಮಿನ್ உய்ம்மின் = ಉಜ್ಜೀವನಗೊಳ್ಳಿರಿ, ನೀರ್ಗಳ್ நீர்கள் = ನೀವುಗಳೇ.

ನೆಲೆಯಾಗಿರುವ ದೇವನಿಗೆ ಕಾಲದಲ್ಲಿ, ಬಾಳುವುದಕ್ಕಾಗಿ ಎಲ್ಲಾ ಲೋಕ ತನಗಳಿಗೆ ತನ್ನ ಮಾರ್ಗೆಯನ್ನು ಆಯಾ ಲೋಕಂಗಳಿಗೆ ಒಡೆಯನಾಗಿ ನಿಲ್ಲಿಸಿದನು, ಆ ದೈವಗಳಿಗೂ ಒಡೆಯನಾದವನೇ. ಮಚ್ಚೆಯನ್ನು ಪವಿತ್ರವಾದ ಎದೆಯಲ್ಲಿ ಉಳ್ಳವನ ಭಕ್ತರು ಬೇಸರವಿಲ್ಲದೆ ಕೀರ್ತನೆಗಳನ್ನು ಹಾಡಿ, ಕಾಲಲೋಕದಲ್ಲಿ ಶ್ರೇಷ್ಠರಾಗಿದ್ದಾರೆ. ನೀವೂ ಸಹ (ಆ ಸ್ವಾಮಿಯನ್ನು) ಆಶ್ರಯಿಸಿ, ಎರಗಿ ಪೂಜಿಸಿ, ಉಜ್ಜೀವನಗೊಳ್ಳಿ. (8)

ಅನ್ಯದೈವಗಳನ್ನು ಪೂಜಿಸುವವರಿಗೆ ಇಲ್ಲಿ ಮತ್ತೆ ಉಪದೇಶ ಮಾಡುವ ಲಾಗಿದೆ

ಆಳ್ವಾರರು ಹೇಳುತ್ತಾರೆ: ಶಾಶ್ವತವಾಗಿರುವ ಸರ್ವೇಶ್ವರನಿಗೆ ಎಲ್ಲಾ ಲೋಕಗಳ ಜನರೂ ನೇರವಾಗಿ ತಮ್ಮ ತಮ್ಮ ಕಾರ್ಯಗಳನ್ನು ಸಲ್ಲಿಸುವುದು ನಾನ್ಯವಾಗುವುದಕ್ಕಾಗಿ, ಸ್ವಾಮಿಯು ಬೇರೆ ಬೇರೆ ಲೋಕಗಳಿಗೆ ಬೇರೆ ಬೇರೆ ಒಡೆಯರನ್ನು ನಿಯಮಿಸಿದ್ದಾನೆ. ಅವರೆಲ್ಲರೂ ಆ ಸರ್ವೇಶ್ವರನ ದಾಸರುಗಳೇ. ಎದೆಯಲ್ಲಿ ಶ್ರೀವತ್ಸವೆಂಬ ಮಚ್ಚೆಯನ್ನುಳ್ಳ ಆ ಸ್ವಾಮಿಯನ್ನು ಕಾಲಲೋಕದ ಭಕ್ತರು ಆಶ್ರಯಿಸಿ, ಅವನ ನಾಮಗಾನವನ್ನು ಬೇಸರವಿಲ್ಲದಂತೆ ಮಾಡಿದ್ದಾರೆ ದಲ್ಲೇ ಮನಸ್ಸಿಟ್ಟುಕೊಂಡಿದ್ದಾರೆ. ಜನರೇ, ನೀವೂ ಸಹ ಆ ಭಗವಂತನ ನ್ನೇ ಆಶ್ರಯಿಸಿ, ಪೂಜಿಸಿ, ಉದ್ಧಾರಗೊಳ್ಳಿ.

9\. மேவித்தொழுதுய்ம்மினீர்கள் வேதப்புனிதவிருக்கை,
நாவில்கொண்டச்சுதன் தன்னை ஞானவிதிபிழை யாமே,
பூவில்புகையும் விளக்கும் சாந்தமும் நீரும்மலிந்து,
மேவித்தொழுமடியாரும் பகவரும் மிக்கதுலகே.

Garani Srinivasan

ಮೇವಿ ತ್ತೊೞುದು ಉಯ್ಮ್ಮಿನೀರ್ಗಳ್ ವೇದಪ್ಪುನಿದ ಇರುಕ್ಕೈ,
ನಾವಿಲ್ ಕೊಂಡು ಅಚ್ಚುದನ್ ತನ್ನೈ ಞಾನವಿದಿ ಪಿೞೈಯಾಮೇ,
ಪೂವಿಲ್ ಪುಹೈಯುಮ್ ವಿಳಕ್ಕುಮ್ ಶಾಂದಮುಮ್ ನೀರುಮ್ ಮಲಿಂದು,
ಮೇವಿ ತ್ತೊೞುಮ್ ಅಡಿಯಾರುಮ್ ಬಗವರುಮ್ ಮಿಕ್ಕದು ಉಲಗೇ

ಮೇವಿ மேவி = ಆಶ್ರಯಿಸಿ, ತೊೞುದು தொழுது = ಪೂಜಿಸಿ, ಉಯ್ಮ್ಮಿನ್ உய்ம்மின் = ಉಜ್ಜೀವನಗೊಳ್ಳಿ ನೀರ್ಗಳ್ நீர்கள் = ನೀವುಗಳು, ವೇದಪ್ಪುನಿದಮ್ ಇರುಕ್ಕೈ வேதம் புனிதம் இருக்கை = ವೇದಗಳಲ್ಲಿರುವ ಪರಮ ಪವಿತ್ರವಾದ ಋಕ್ಕುಗಳನ್ನು (ಪುರುಷ ಸೂಕ್ತವೇ ಮುಂತಾದವುಗಳನ್ನು), ನಾವಿಲ್ ಕೊಂಡು நாவில் கொண்டு = ನಾಲಗೆಯಿಂದ ಉಚ್ಚರಿಸುತ್ತ, ಅಚ್ಚುದನ್ ತನ್ನೈ அச்சுதன் தன்னை = ಅಚ್ಯುತನನ್ನು, ಞಾನಮ್ ஞானம் = ಜ್ಞಾನವನ್ನು, ವಿದಿ விதி = ಕರ್ಮವನ್ನು, ಪಿೞೈಯಾಮೇ பிழையாமே = ತಪ್ಪದಂತೆ, ಪೂವಿಲ್ பூவில் = ಹೂವಿನೊಡನೆ, ಪುಹೈಯುಮ್ புகையும் = ಹೊಗೆಯನ್ನು (ಧೂಪವನ್ನು), ವಿಳಕ್ಕುಮ್ விளக்கும் = ದೀಪವನ್ನು, ಶಾಂದಮುಮ್ சாந்தமும் = ಗಂಧವನ್ನು (ಚಂದನವನ್ನು), ನೀರುಮ್ நீரும் = ನೀರನ್ನು, ಮಲಿಂದು மலிந்து = ಸಮೃದ್ಧಿಯಾಗಿ ಕೈಗೊಂಡು, ಮೇವಿ மேவி = (ಭಗವಂತನನ್ನು) ಆಶ್ರಯಿಸಿ, ತೊೞುಮ್ தொழும் = ಪೂಜಿಸುವ, ಅಡಿಯಾರುಮ್ அடியாரும் = ಭಕ್ತರು, ಬಗವರುಮ್ பகவரும் = ಭಗವದ್ಧ್ಯಾನುಭಾವಿಗಳು (ಬ್ರಾಹ್ಮಣರು), ಮಿಕ್ಕದು ಉಲಗೇ மிக்கது உலகே = ಲೋಕದಲ್ಲಿ ತುಂಬಿರುತ್ತಾರೆ.

ವೇದಗಳಲ್ಲಿರುವ ಪರಮ ಪವಿತ್ರವಾದವುಗಳನ್ನು (ಪುರುಷ ಸೂಕ್ತವೇ ಮುಂತಾದವನ್ನು) ಉಚ್ಚರಿಸುತ್ತಾ ಅಚ್ಯುತನನ್ನು ಜ್ಞಾನವನ್ನು ಕರ್ಮವನ್ನು ತಪ್ಪದಂತೆ ಹೂವು, ಧೂಪ, ದೀಪ, ಗಂಧ, ನೀರು - ಇವುಗಳನ್ನು ಸಮೃದ್ಧಿಯಾಗಿ ಕೈಗೊಂಡು. ಭಗವಂತನನ್ನು ಆಶ್ರಯಿಸಿ ಪೂಜಿಸುವ ಭಕ್ತರು ಭಗವದ್ಧ್ಯಾನುಭಾವಿಗಳು ಲೋಕದಲ್ಲಿ ತುಂಬಿಕೊಂಡಿರುತ್ತಾರೆ. ನೀವುಗಳು ಭಗವಂತನನ್ನು ಆಶ್ರಯಿಸಿ, ಪೂಜಿಸಿ, ಉಜ್ಜೀವನಗೊಳ್ಳಿ (9)

ಈ ಪಾಶುರದಲ್ಲಿ ಭಗವಂತನನ್ನು ಪೂಜಿಸುವ ಕರ್ಮಾನುವಿಧ ವಿಧಿಯನ್ನು ಸೂಚಿಸಲಾಗಿದೆ. ಮತ್ತು, ಭಕ್ತಿ ಜ್ಞಾನ, ಕರ್ಮಯೋಗಗಳ ಸಾಮರಸ್ಯವನ್ನು ತಿಳಿಸಲಾಗಿದೆ

ಭಗವಂತನನ್ನು ಪೂಜಿಸುವುದಕ್ಕೆ ಬೇಕಾಗುವ ಉಪಕರಣಗಳನ್ನು, ಎಂದರೆ, ಹೂವು, ಧೂಪ, ದೀಪ, ಚಂದನ, ಮತ್ತು ಶುದ್ಧವಾದ ನೀರು, ಇವುಗಳನ್ನು, ಸಿದ್ಧಪಡಿಸಿಕೊಳ್ಳಬೇಕು. ಈ ವಸ್ತುಗಳನ್ನು ದೇವ ಪೂಜೆಯಲ್ಲಿ ಬಳಸಿಕೊಳ್ಳಬೇಕೆಂಬುದು ಕರ್ಮಭಾಗ. ವೇದಗಳಲ್ಲಿ ಹೇಳಲಾದ ಪರಮ ಪವಿತ್ರವಾದ ಪುರುಷ

Garani Srinivasan

ಮೂರ್ತಿ ಮುಂಚಿನವುಗಳನ್ನು ಹೇಳುವುದು, ಅದರ ಅರ್ಥವನ್ನು ತಿಳಿಸುವುದು
ವುದು, ಅವುಗಳನ್ನು ಉಪದೇಶಿಸುತ್ತಿರುವಾಗ, ಅದರಲ್ಲಿ ವಿವರಿಸಿರುವ ಭಗವಂತನ
ವರ್ಣನೆಗೆ ಮನಸೋತಿದ್ದು, - ಇವು ಜ್ಞಾನ ಭಾವಕ್ಕೆ ಸೇರಿದವು ಕರ್ಮ ಮತ್ತು
ಜ್ಞಾನಗಳಿಂದ ಕೂಡಿದ ಪೂಜೆಯಲ್ಲಿ ತೊಡಗಿರುವುದು ಭಕ್ತಿ ಭಾವ. ಭಗವಂತ
ನ ನಾನಾ ಸ್ವಭಾವಗಳನ್ನು, ಲೀಲಾ ವಿಶೇಷಗಳನ್ನು ಅರಿತು ಆಸ್ವಾದಿಸತಕ್ಕ
ನಾಯುವವನು ಭಕ್ತ. ಅವನೇ ಭಗವದ್ಧ್ಯಾನಾನುಭಾವಿ

ಭಗವಂತನನ್ನು ಮೂರು ಮಾರ್ಗಗಳಿಂದ ಪೂಜಿಸುತ್ತಾರೆಂದು ಅವು
ಕರ್ಮ, ಜ್ಞಾನ, ಭಕ್ತಿ ಮಾರ್ಗಗಳೆಂದು ಹೇಳಲಾಗುತ್ತದೆ. ಕರ್ಮಮಾರ್ಗ
ವನ್ನು ಆಚರಿಸಿಕೊಂಡವರಿಗೆ, ಜ್ಞಾನ ಭಕ್ತಿಗಳು ಮೊದಲ ಹಂತಗಳು. ಜ್ಞಾನಮಾ
ರ್ಗವನ್ನು ಅವಲಂಬಿಸುವವರಿಗೆ ಕರ್ಮ ಭಕ್ತಿಗಳು ಮೊದಲ ಹಂತಗಳು. ಭಕ್ತಿ
ಮಾರ್ಗದ ಅನುಯಾಯಿಗೆ ಕರ್ಮ ಜ್ಞಾನಗಳು ಮೊದಲ ಹಂತಗಳು. ಹೀಗೆ,
ಯಾವುದೇ ಮಾರ್ಗದಲ್ಲಿ ಪ್ರಯತ್ನಿಸಿದರೂ, ಮುಕ್ತಿಗಾಗಿ ಅಲ್ಲಿ ಭಕ್ತಿಗೆ
ಬರಲೇ ಬೇಕು. ಆಳ್ವಾರರು ಭಕ್ತಿ ಮಾರ್ಗವಾದ್ದರಿಂದ, ಇಲ್ಲಿ ಕರ್ಮ
ಜ್ಞಾನ ಮಾರ್ಗಗಳನ್ನು ಜೊತೆಗೆ ಅಳವಡಿಸಿಕೊಳ್ಳಲಾಗಿದೆ.

ಆಳ್ವಾರರು ಹೇಳುತ್ತಾರೆ: ಭಗವಂತನನ್ನು ವಿಧಿವತ್ತಾಗಿ ಪೂಜಿಸಿಕೊಂಡಿರು
ವವರು ತಮ್ಮ ಪೂಜೆಯಲ್ಲಿ ಕರ್ಮ, ಜ್ಞಾನ, ಭಕ್ತಿಗಳನ್ನು ಕೂಡಿಸಿ ಆಳವಾಗಿ ಮುಳುಗಿರುವ ಭಕ್ತರೂ ಇದ್ದಾ
ರೆ. ಭಗವದ್ಧ್ಯಾನಾನುಭವದಲ್ಲಿ ಅವರ ದಾಸ್ಯೆಯೇ, ಜನಕ, ನೀವು
ಲೋಕದಲ್ಲಿ ಭಕ್ತರು ಬಹು ಮಂದಿ.
ಭಗವಂತನನ್ನು ಆಶ್ರಯಿಸಿ, ಪೂಜಿಸಿ, ಉಜ್ಜೀವನಗೊಳ್ಳಿ.

10 மிக்க வுலகுகள் தோறும் மேவிக் கண்ணன் திரு
மூர்த்தி,
நக்க பிரானோடு அயனு மிந்திரனும் முதலாக,
தொக்க வமரர் குழாங்கள் எங்கும் பரந்தன
தொண்டீர்,
ஒக்கத் தொழுகிற் றிராகில் கலியுக மொன்று
மில்லையே

ಮಿಕ್ಕವುಲಗುಗಳ್ ತೋಱುಮ್ ಮೇವಿಕ್ಕಣ್ಣನ್ ತಿರುಮೂರ್ತ್ತಿ,
ನಕ್ಕಪಿರಾನೋಡು ಅಯನುಮಿನ್ದಿರನುಮ್ ಮುದಲಾಗ,
ತೊಕ್ಕವಮರರ್ ಕುೞಾಙ್ಗಳ್ ಎಙ್ಗುಮ್ ಪರನ್ದನ ತೊಣ್ಡೀರ್,
ಒಕ್ಕತ್ತೊೞುಗಿಱ್ಱಿರಾಗಿಲ್ ಕಲಿಯುಗಮೊನ್ಱುಮಿಲ್ಲೈಯೇ.

Garani Srinivasan

ಎನ್ಕ ಬಲಪ್ಪದಲ್ ಶೋಆಯ ಮಾ மிக்க உலகுகள் தோறும் :
ಶ್ರೇಷ್ಠರಾದ (ಮೇಲಣ) ಲೋಕಗಳಲ್ಲೆಲ್ಲಾ, ಮೇವಿ மேவி = ಆಶ್ರಯಿಸಿ, ಐಶ್ವರ್ಯಶಾಲಿನ ತನ್ನ ತಿರುಮೂರ್ತಿ கண்ணாளன் திருமூர்த்தி = ಐಶ್ವರ್ಯಶಾಲಿ
(ಶ್ರೀಕೃಷ್ಣನೊಬ್ಬ) ದಿವ್ಯಸ್ವರೂಪಿಯನ್ನು, ನಮ್ಮ ಪಿರಾನೋಡು நம்பிரா அயனும் அரனும் = ಅಜನೂ
ನನ್ನ ದೇವರಾ (ಶಿವನೂ), ಇಂದ್ರನೂ, ಮುದಲ್ ಆಗ
(ಬ್ರಹ್ಮನೂ), ಇನ್ದಿರನುಮ் இந்திரனும் = ಇಂದ್ರನೂ, ಮುದಲ್ ಆಗ
ಮುದಲ್ ಆಗ = ಮೊದಲಾದ, ತೊಕ್ಕ ಅಮರರ್ தொக்க அமரர் = ಒಟ್ಟು
ನಾಡಿ, ದೇವತೆಗಳು, ಕುಲಾಂಗಳ್ குழாங்கள் = ಕೂಟಗಳು, ಎಂಗುಮ್
ನಾಂಗುಮ் = ಎಲ್ಲೆಲ್ಲೂ, ಪರನ್ದನ பரந்தன = ಬೆರತುಕೊಂಡಿದ್ದಾರೆ, ಶೋತ್ತ
ದ ರಣ್ಣಾ ಪುರ್ = ಭಕ್ತರೇ, ಒಕ್ಕ ಇಕ್ಕ ಅವರೊಡನೆ (ಅವರ ಜೊತೆಯಲ್ಲಿ),
ಶೋಲು ಅಪ್ಪುರ ಅಲ್ ಆಗಾನ್
(ನೀವೂ) ಪೂಜಿಸುವವರಾದರೆ, ಕಲಿಯುಗಮ್ கலியுகம் =
கிற்றிர் ஆகில் = ಪೂಜಿಸುವವರಾದರೆ, ಇಲ್ಲೆಯಲ್ಲ ಇಲ್ಲೈ
ಕಲಿಯುಗವು, ಒನ್ಱುಮ್ ஒன்றும் = ಸ್ವಲ್ಪವೂ, ಇಲ್ಲೆಯಲ್ಲಿ
ಕಲಿಯುಗವು, ಒನ್ಱುಮ್ ಇಲ್ಲಾ = ಇಲ್ಲವಾಗುತ್ತದೆ.

ಶ್ರೇಷ್ಠವಾದ (ಮೇಲಣ) ಲೋಕಗಳಲ್ಲೆಲ್ಲಾ ಐಶ್ವರ್ಯಶಾಲಿನಾದ ದಿವ್ಯಸ್ವರೂಪಿಯನ್ನು ಆಶ್ರಯಿಸಿ ನನ್ನ ದೇವರಾ, ಅಜನೂ, ಇಂದ್ರನೂ ಮೊದಲಾದ ಒಟ್ಟಾಗ ದೇವತೆಗಳ ಕೂಟಗಳು ಎಲ್ಲೆಲ್ಲೂ ಬೆರತುಕೊಂಡಿದ್ದಾರೆ. ಭಕ್ತರೇ, ಅವರ ಜೊತೆಯಲ್ಲಿ ನೀವೂ ಪೂಜಿಸುವವರಾದರೆ, ಕಲಿಯುಗವು ಸ್ವಲ್ಪವೂ ಇಲ್ಲವಾಗುತ್ತದೆ.

ಇಲ್ಲಿ ಎರಡು ವಿಷಯಗಳನ್ನು ಎತ್ತಿ ಹೇಳಲಾಗಿದೆ: ಮೇಲಣ ಲೋಕಗಳವರು, ಅವರ ಜೊತೆಯಲ್ಲಿ ಭಗವಂತನನ್ನು ಆಶ್ರಯಿಸಿ ಪೂಜಿಸುವಾಗ, ಭೂಲೋಕದವರಾದ ನೀವೂ ಅವರಂತೆಯೇ ನಡೆದುಕೊಳ್ಳಬಾರದೇ? ಎಂಬುದು ಒಂದು ವಿಷಯ. ನೀವು ಭಗವದಾಶ್ರಯ ಪಡೆದುಕೊಳ್ಳುವುದರಿಂದ, ಕಲಿಯ ಭೂಲೋಕದಲ್ಲಿ ಅವರ ಜೊತೆಯಲ್ಲಿ ಇಲ್ಲದಂತಾಗುತ್ತದೆ, ಎಂಬುದು ಇನ್ನೊಂದು.

ಮೇಲಣ ಲೋಕದವರು ಭಗವಂತನನ್ನಾಶ್ರಯಿಸಿ, ತಮ್ಮ ತಮ್ಮ ಸ್ಥಾನಮಾನಗಳನ್ನು ಉಳಿಸಿಕೊಂಡಿದ್ದಾರೆ. ಬ್ರಹ್ಮ, ರುದ್ರ, ಇಂದ್ರ ಮೊದಲಾದವರು ತಮ್ಮ ಪದವಿಗಳನ್ನು ಪಡೆದುಕೊಂಡಿದ್ದಾರೆ. ಇದಲ್ಲ ಭೂಲೋಕದವರಿಗೆ ಒಂದು ಮಾದರಿಯ ನಿದರ್ಶನವಾಗಿದೆ.

ಭೂಲೋಕದವರಾದರೋ ಉಜ್ಜೀವನ ಮಾರ್ಗ ತಿಳಿಯದವರು. ಕಲಿಯ ಪ್ರಾಬಲ್ಯದ ಫಲವಾಗಿ ಅವರು ನಾನಾ ರೀತಿಯಲ್ಲಿ ಕಷ್ಟಪಡುತ್ತಾರೆ. ಇದಲ್ಲ ಅವರನ್ನು ಅಧೋಗತಿಗೆ ತಳ್ಳುವುದು. ಆದ್ದರಿಂದ, ಅವರಿಗೆ ಈ ಉಪದೇಶದ ಅವಶ್ಯಕತೆ ಬಂತು.

ಆಳ್ವಾರರು ಹೇಳುತ್ತಾರೆ : ಜನರೇ, ಬ್ರಹ್ಮ, ರುದ್ರ, ಇಂದ್ರಾದಿ ದೇವತೆಗಳೂ, ಮತ್ತೆ ಎಲ್ಲಾ ದೇವತೆಗಳ ಶರೀರಗಳೂ ಸರ್ವೇಶ್ವರನನ್ನು ಆಶ್ರಯಿಸಿ, ಪೂಜಿಸಿ, ಅವರವರ ಸ್ಥಾನಗಳಲ್ಲಿದ್ದು, ಉಜ್ಜೀವನ ಹೊಂದಲು ಯತ್ನಿಸುತ್ತಾರೆ. ಭಗವಂತನ ಶಾಸ್ತ್ರಗಳೂ, ಕಲಿಯ ಪ್ರಾಬಲ್ಯಕ್ಕೆ ಅವಕಾಶಕೊಡುವುದರಿಂದ, ಎಲ್ಲಾ ಅಧೀನದ ಹೊಂದುತ್ತಾರೆ. ಅದಕ್ಕೆ ಅವಕಾಶಕೊಡದಂತೆ, ದೇವತೆಗಳ ಒಳಗಿರುವ ಭಗವಂತನನ್ನು ಆಶ್ರಯಿಸಿ, ಪೂಜಿಸಿ, ಉಜ್ಜೀವನಗೊಳ್ಳಬೇಕು. ಇದರಿಂದ ಕಲಿಯ ಪ್ರಾಬಲ್ಯವು ಅಳಿದು ಹೋಗುತ್ತದೆ. ನೀವೂ ~~[illegible]~~ ಭಗವಂತನನ್ನು ಪೂಜಿಸಲು ತೊಡಗಿರಿ.

11 கலியுகமொன்றுமின்றிக்கே தன்னடியார்க்கருள் செய்யும்,
மலியும் சுடரொளி மூர்த்தி மாயப்பிரான் கண்ணன் தன்னை,
கலிவயல் தென்னன் குருகூர்க் காரிமாறன் சடகோபன்,
ஒலிபுகழாயிரத்திப்பத்து உள்ளத்தை மாசறுக்குமே.

ಕಲಿಯುಗಮೊನ್ರುಮಿನ್ರಿಕ್ಕೇ ತನ್ನಡಿಯಾರ್ಕ್ಕರುಳ್ ಶೆಯ್ಯುಮ್,
ಮಲಿಯುಮ್ ಶುಡರೊಳಿ ಮೂರ್ತ್ತಿ ಮಾಯಪ್ಪಿರಾನ್ ಕಣ್ಣನ್ ತನ್ನೈ,
ಕಲಿವಯಲ್ ತೆನ್ನನ್ ಕುರುಕೂರ್ ಕ್ಕಾರಿಮಾರನ್ ಶಡಗೋಪನ್,
ಒಲಿಪ್ಪುಗೞಾಯಿರತ್ತಿಪ್ಪತ್ತು ಉಳ್ಳತ್ತೈ ಮಾಶರುಕ್ಕುಮೇ.

ಕಲಿಯುಗಮ್ கலியுகம் = ಕಲಿಯುಗವು, ಒನ್ರುಮ್ ஒன்றும் = ಸ್ವಲ್ಪವೂ, ಇನ್ರಿಕ್ಕೇ இன்றிக்கே = ಇಲ್ಲದಂತೆ ಮಾಡುವುದಕ್ಕಾಗಿ, ತನ್ ಅಡಿಯಾರ್ಕ್ಕು தன் அடியார்க்கு = ತನ್ನ ಪಾದಸೇವಕರಿಗೆ, ಅರುಳ್ ಶೆಯ್ಯುಮ್ அருள் செய்யும் = ಕೃಪೆಮಾಡುವ, ಮಲಿಯುಮ್ மலியும் = ಹೆಚ್ಚಾದ, ಶುಡರ್ ಒಳಿ ಮೂರ್ತ್ತಿ சுடர் ஒளிமூர்த்தி = ತೇಜೋಮಯವಾದ ಮೂರ್ತಿ, ಮಾಯಮ್ ಪಿರಾನ್ மாயம் பிரான் = ಆಶ್ಚರ್ಯಕರವಾದ ಸ್ವಾಮಿಯಾದ, ಕಣ್ಣನ್ ತನ್ನೈ கண்ணன் தன்னை = ಸರ್ವೇಶ್ವರನನ್ನು ಕುರಿತು, ಕಲಿವಯಲ್ கலிவயல் = ಸಮೃದ್ಧಿಯಾದ ಬೆಳೆಯ ಬಯಲುಗಳುಳ್ಳ, ತೆನ್ தென் = ಸುಂದರವಾದ, ~~[illegible]~~ ನಲ್ = ಒಳ್ಳೆಯ, ಕುರುಕೂರ್ குருகூர் = ತಿರುಕ್ಕುರುಕೂರಿನ, ಕಾರಿಮಾರನ್ காரி மாறன் = ಕಾರಿಮಾರನ ಮಗನಾದ, ಶಡಗೋಪನ್ சடகோபன் = ಶಠಕೋಪನು (ನಮ್ಮಾಳ್ವಾರರು), ಒಲಿಪುಗೞ್ ஒலி புகழ் = ಶ್ರವ್ಯಪೂರ್ಣವಾದ, (ಶ್ರವಣೆಯನ್ನು ಪ್ರಾರ್ಥಿಸುವ), ಆಯಿರತ್ತು ஆயிரத்து = ಒಂದು ಸಾವಿರದಲ್ಲಿ, ಇವತ್ತು இ பத்து = ಈ ಹತ್ತು, ಉಳ್ಳತ್ತೈ உள்ளத்தை = ಮನಸ್ಸಿನಲ್ಲಿನ

ಮೂರು ಬಾಣ = ಕರ್ಮಗಳನ್ನು, ಅವುಗಳ ಮೇಲೆ ಅನುಕ್ರಮೇ = ಕಡಿದು
ಹಾಕುವನು.

ತನ್ನ ಪಾದಸೇವಕರಿಗೆ (ಭಕ್ತರಿಗೆ) ಕಲಿಯುಗದ ದುಷ್ಪ್ರಭಾವ ಇಲ್ಲದಂತೆ ಸ್ತೋತ್ರ
ಮಾಡುವ ಸಾಧನವಾದ ಕೀರ್ತನೆ ಮೂರ್ತಿಯಾದ, ಆಶ್ಚರ್ಯಕರ ಸ್ವಾಮಿಯಾದ, ಸರ್ವೇ
ಶ್ವರನನ್ನು ಕುರಿತು ದಿವ್ಯದೃಷ್ಟಿಯಾಗಿ ಬೆಳೆಯುವ ಬಯಲುಗಳುಳ್ಳ ಸುಂದರವಾದ
ಬೆಳೆಯು ತಿರುಕ್ಕುರುಗೂರಿನ ಕಾರಿ ಮಾರನ ಮಗನಾದ ಶಠಗೋಪನು (ನಮ್ಮಾ
ಳ್ವಾರು) ಕೃಪೆಯನ್ನು ಪ್ರಾರ್ಥಿಸುವ ಒಂದು ಸಾವಿರದಲ್ಲಿ ಈ ಹತ್ತು ಮನಸ್ಸಿನಲ್ಲಿ (11)
ನ ಕರ್ಮಗಳನ್ನು ಕಡಿದು ಹಾಕುವುದು

ಈ ತಿರುವಾಯ್ ಮೊಳಿಗೆ ಇದು ಕಡೆಯ ಪಾಶುರ. ತಿರುವಾಯ್ ಮೊಳಿ
ಯು ಉದ್ದಕ್ಕೂ ಹೇಳುವುದು (ಲೋಕದಲ್ಲಿ ಕಲಿಯು ಪ್ರಾಬಲ್ಯವಾದಂತೆ ನೋಡಿಕೊಳ್ಳಬೇ
ಕು ಎಂಬುದು. ಲೋಕದ ಜನರು ಅಸುರ ರಾಕ್ಷಸ ಗಣಗಳು ತುಂಬಿರುವ
ಸಂಸಾರವನ್ನೇ ಸುಖ ಎಂದುಕೊಂಡು
ತಾಮಸ ಪ್ರಕೃತಿಯವರಾಗಿ, ಕಪ್ಪು ಕಟ್ಟಿರುವ ಸಂಸಾರವನ್ನೇ ಅದರಲ್ಲಿ ಇಳಿಯುವವರಾಗಿದ್ದಾರೆ. ಅಂಥ
ಷಗಳ ಆಕರವೆಂದು ಭಾವಿಸುತ್ತಾ ಅದರಲ್ಲಿ ಇಳಿಯುತ್ತಿದ್ದಾರೆ. ಕೃಪಾಸಾಗರನಾದ ಸರ್ವೇಶ್ವರನು ಸ್ವತಃ
ವನ್ನು ಉದ್ಧರಿಸುವುದಕ್ಕಾಗಿಯೇ ಭೂಲೋಕದಲ್ಲಿ ಅವತರಿಸಿ ಬಂದಿದ್ದಾನೆ.
ಭಕ್ತರ (ಭಾಗವತರ) ರೂಪದಲ್ಲಿ ಭೂಲೋಕದಲ್ಲಿ ಎಲ್ಲೆಲ್ಲೂ ಹರಡಿಕೊಂಡಿದ್ದಾರೆ.
ಈ ಭಾಗವತರು ಗುಂಪು ಗುಂಪಾಗಿ ಲೋಕದಲ್ಲಿ ಎಲ್ಲೆಲ್ಲೂ ಆಟ ವಿನೋದಗಳನ್ನು ಅದ್ಭುತ
ಮತ್ತು, ಭಗವಂತನ ನಾನಾ ಸ್ವಭಾವಗಳನ್ನು ಆಟ ವಿನೋದಗಳನ್ನು (ಭಗವಂತನಿಗೆ ಅವನನ್ನು) ಆನಂದದಿಂದ
ಕಾರ್ಯಗಳನ್ನು ಕುರಿತು ಹಾಡುತ್ತಾರೆ, ಎರಗುತ್ತಾರೆ, ಪೂಜಿಸುತ್ತಾರೆ, ಆನಂದದಿಂದ
ನಲಿಯುತ್ತಾರೆ. ಕುಣಿದಾಡುತ್ತಾರೆ. [illegible] ಮಾಡುತ್ತಾರೆ. ಭಗವನ್ನಾಮ
ಸಂಕೀರ್ತನೆಯನ್ನು ಭಕ್ತಿಭಾವವನ್ನು ಎಲ್ಲೆಲ್ಲಿಯೂ ತುಂಬಿ ತುಳುಕುವಂತೆ
ಮಾಡುತ್ತಾರೆ. ಭಕ್ತರು (ಭಾಗವತರು) ಭಗವಂತನಷ್ಟೇ ಪೂಜ್ಯರು! ಇದನ್ನರಿ
ಕು, ಎಲ್ಲ ಜನರೂ ಆ ಭಕ್ತ ಕೆಲಸಗಳೊಡನೆ ಕಲೆಯಬೇಕು. ಅವರ ಕೀರ್ತ
ನೆಗಳಲ್ಲಿ ಪಾಲುಗೊಳ್ಳಬೇಕು. ಮತ್ತು ಜಪ, ಧ್ಯಾನ, ದೀಪಾದಿಗಳಿಂದ ಅವನನ್ನು
ಅರ್ಚಿಸುತ್ತಾ ಇರಬೇಕು. ಇದರಿಂದ ಭಕ್ತಿ ವೃದ್ಧಿಯಾಗುತ್ತದೆ. ಮನಸ್ಸು ನಿರ್ಮಲ
ಗೊಳ್ಳುತ್ತದೆ. ಉಜ್ಜೀವನಕ್ಕೆ ಸುಲಭವಾದ ಮಾರ್ಗ ಇದೇ.

ಸುಂದರವೂ, ವಿಶಾಲವೂ, ಫಲವತ್ತಾದ ಬೆಳೆಯನ್ನು ಕೊಡುವುದೂ
ಆದ ಬಯಲುಗಳುಳ್ಳ ತಿರುಕ್ಕುರುಗೂರಿನ ನಿವಾಸಿಗಳಾದ ಕಾರಿ-ಮಾರ
ದಂಪತಿಗಳ ಮಗನಾದ ಶಠಗೋಪನು ಕೃಪಾಮೂರ್ತಿಯೂ ಆಶ್ಚರ್ಯಕರ
ಯೂ ಆದ ಸರ್ವೇಶ್ವರನನ್ನು ಕುರಿತು ರಚಿಸಿ ಹಾಡಿರುವ ಒಂದು ಸಾವಿರ
ತಮಿಳು ಪಾಶುರಗಳ ಪೈಕಿ ಈ ಹತ್ತು ಪಾಶುರಗಳನ್ನು ಯಾರು ಚೆನ್ನಾಗಿ

Garani Srinivasan

ಓದಿ, ಅಂತಹ ಆಚರಣೆಯನ್ನು ಯತ್ನಿಸುತ್ತಾ ಬರುವುದರಿಂದ, ಅಂಥವರ ಮನಸ್ಸು ಪರಿಶುದ್ಧಗೊಂಡು, ನಿಶ್ಚಲವಾದ ಭಕ್ತಿಯು ಅಲ್ಲಿ ಬೆಳೆಯುತ್ತದೆ. ಅದರ ಮೂಲಕ ಎಲ್ಲರೂ ಉಜ್ಜೀವನಕ್ಕೆ ಬೇಕಾಗಿಬಂದ ಆಳ್ವಾರರ ಮಂಗಳಾಶಯ ಅದೇ ಈ ತಿರುಪ್ಪಾವೈ ಮಾಲಿಕೆಗೆ ಫಲಶ್ರುತಿ

26/9/84.

— o —

20/9/84

- ಶ್ರೀಃ - (43) - ಶ್ರಿಯಃಪತಯೇ ನಮಃ -

ತಿರುವಾಯ್ಮೊೞಿ ಐದನೆಯ ಪತ್ತು - ಮೂರನೆಯ ತಿರುವಾಯ್ಮೊೞಿ

திருவாய்மொழி - ஐந்தாம்பத்து - மூன்றாம் திருவாய்மொழி

ಮಾಶಱು ಶೋದಿ. மாசறு சோதி

1 மாசறு சோதி என் செய்ய வாய் மணிக்குன்றத்தை,
ஆசறு சீலனை ஆதிமூர்த்தியை நாடியே,
பாசறவெய்தி அறிவிழந்தெனை நாளையம்?,
ஏசறுமூரவர் கவ்வை தோழீ! என் செய்யுமே?

ಮಾಶಱು ಶೋದಿ ಎನ್ ಶೆಯ್ಯವಾಯ್ ಮಣಿಕ್ಕುನ್ಱತ್ತೈ,
ಆಶಱು ಶೀಲನೈ ಆದಿಮೂರ್ತ್ತಿಯೈ ನಾಡಿಯೇ,
ಪಾಶಱವೆಯ್ದಿ ಅಱಿವಿೞನ್ದೆನೈ ನಾಳೈಯಮ್?,
ಏಶಱುಮೂರವರ್ ಕವ್ವೈ ತೋೞೀ! ಎನ್ ಶೆಯ್ಯುಮೇ?

ಮಾಶು மாசு = ಕತ್ತಲೆಯನ್ನು (ಎಲ್ಲಾ ಬಗೆಯ ಕಲ್ಮಷವನ್ನು), ಅಱು அறு = ಕತ್ತರಿಸಿ ಹಾಕುವಂಥ, ಶೋದಿ சோதி = ತೇಜಸ್ಸಿನ, ಎನ್ என் = ನನ್ನ, ಶೆಯ್ಯವಾಯ್ செய்ய வாய் = ಕೆಂಪು ತುಟಿಗಳ, ಮಣಿ ಕುನ್ಱತ್ತೈ மணிகுன்றத்தை = ಇಂದ್ರನೀಲಮಣಿಯ (ರತ್ನದ) ಬೆಟ್ಟದಂಥವನನ್ನು (ಬೆಟ್ಟವನ್ನು), ಆಶು ಅಱು ஆசு அறு = ಕಳಂಕವಿಲ್ಲದ, ಶೀಲನ್ಐ சீலனை = ಶೀಲವುಳ್ಳವನನ್ನು (ಪರಿಶುದ್ಧವಾದ ನಡತೆಯುಳ್ಳವನನ್ನು, ಆದಿ ಮೂರ್ತ್ತಿಯೈ ஆதிமூர்த்தியை ಸಕಲದಕ್ಕಾದಿಯನ್ನು, ನಾಡಿಯೇ நாடியே = ಹುಡುಕಿಯೇ, ಪಾಶಱವು ಎಯ್ದಿ பாசறவெய்தி = ವ್ಯಥೆಗೊಂಡು, (ಬಳಲಿಕೊಂಡು), ಅಱಿವು ಇೞನ್ದು அறிவிழந்து = ಅರಿವನ್ನು ಕಳೆದುಕೊಂಡು, ಎನ್ನೈ என்னை = ಎಷ್ಟೋ, ನಾಳೈಯಮ್ நாளையம் = ದಿನಗಳನ್ನು (ಕಾಲವನ್ನು) ಕಳೆಯುವೆವು, ಏಶು ஏசு அறும் = ನಿಂದೆ ಮಾಡುವವರಾದ, ಊರವರ್ ஊரவர் = ಊರಿನವರು, ಕವ್ವೈ கவ்வை = ದೂಷಣೆಯನ್ನು, ತೋೞೀ தோழீ = ಗೆಳತಿ, ಎನ್ ಶೆಯ್ಯುಮೇ என் செய்யுமே = ಏನು ಮಾಡುವುದು?

ಗೆಳತಿ, ಎಲ್ಲಾ ಬಗೆಯ ಕಲ್ಮಷವನ್ನೂ ಕಿತ್ತು ಹಾಕುವಂಥ ದಿವ್ಯತೇಜಸ್ಸಿನ, ಕೆಂಪು ತುಟಿಗಳ, ನನ್ನ ರತ್ನದ ಬೆಟ್ಟವನ್ನು, ಕಳಂಕ ಇಲ್ಲದ ಶೀಲವಂತನನ್ನು, ಆದಿಸ್ವಾಮಿಯನ್ನು (ನಾನು) ಹುಡುಕುತ್ತಲೇ ವ್ಯಥೆಯಿಂದ ಬಳಲಿಕೊಂಡು,

ಅವುಗಳೂ ಸಂದರ್ಭದ ಉಭಯವರ ದಾಷ್ಟ್ಯೆಯ ಮಾತನ್ನು ಕೇಳುತ್ತಾ. ಎಷ್ಟು ಕಾಲ ಕಳೆಯಬೇಕು? ಏನು ಮಾಡುವುದು? (1)

ಇಲ್ಲಿ ಆಳ್ವಾರರು ನಾಯಕಿ ಭಾವದಲ್ಲಿ, ನಾಯಕನ ತನ್ನ ನಲ್ಲನನ್ನು ಕಾಣಬೇಕೆಂದೂ, ಅವನೊಡನೆ ಕಲೆತು ಕೇಳಬೇಕೆಂದೂ ಮಿಡಿದಾಳೆ. ಅವನಿಗಾಗಿ ಕಾದಿರುವುದರಲ್ಲೇ ಕಾಲಕಳೆಯುತ್ತಾ ಕೃಶಳಾಗಿದ್ದಾಳೆ. ಅವನಿಗಾಗಿ ಕೊರಗನಿಂದ ಬಣ್ಣವನ್ನು ಕೆಡಿಸಿಕೊಂಡಿದ್ದಾಳೆ. ಬಳಲಿಕೊಂಡಿದ್ದಾಳೆ. ಇದರ ಮರ್ಮವನ್ನು ಊರಿನ ಜನ ಅರಿಯರು. ಅವಳಿಗೇನಾಗಿದೆ ಎಂದು ಕೇಳುವುದಕ್ಕೂ ಅವರು ಯಾರಿಗೂ ಇತರರನ್ನು, ಅದರಲ್ಲೂ ಎಳೆಯರಿಂದ ದೂರ ಮತ್ತೂ ವಿಷಯದಲ್ಲಿ, ಅವರನ್ನು ದೂಷಿಸುವುದು ಅವರ (ಊರಿನ ಜನರ) ಸ್ವಭಾವ. ತಮ್ಮ ಬಾಯಿ ತೋರದಂತೆ ಮಾತನಾಡುತ್ತಾ, ನಾಯಕಿಯನ್ನು ನಿಂದಿಸುತ್ತಾರೆ. ಪಾಪ, ಮೊದಲೇ ನೊಂದು ವ್ಯಥೆ ಪಡುತ್ತಿರುವ ನಾಯಕಿ ಅವರ ಚುಚ್ಚು ಮಾತುಗಳು ಇನ್ನಷ್ಟು ಕಷ್ಟವಾಗಿ, ಇನ್ನಷ್ಟು ದುಃಖಪಡುತ್ತಾಳೆ. ಅವಳೇನು ಮಾಡಿಯಾಳು? ಹೇಗೆ ತನ್ನ ಸಂಕಟವನ್ನು ಶಮನ ಮಾಡಿಕೊಳ್ಳುವುದು? ಸ್ವಾಭಾವಿಕವಾಗಿ, ಅವಳು ತನ್ನ ಪ್ರಿಯಸಖಿಯಲ್ಲಿ ಅದನ್ನು ಹೇಳಿಕೊಳ್ಳುತ್ತಾಳೆ.

ನಾಯಕಿ ಹೇಳುತ್ತಾಳೆ: ಸಖಿ, ನಾನು ಬಹುಕಾಲದಿಂದ ಅವನಿಗಾಗಿ ಕೇಳಿಸ್ವದಾನಿಯಾದ, ಅರವಿಂದ ಕಣ್ಣುಗಳ, ನನ್ನ ರಕ್ತದ ಬಣ್ಣವನ್ನು, ಆಚಾರವನ್ನು, ಪರಿಶುದ್ಧವಾದ ಕುಲ ವಂಶವನ್ನು ದೂರಮಾಡುತ್ತ, ದೂರವಾಗುತ್ತ, ಆಚರಣೆಯನ್ನು ಬಳಲಿಕೊಂಡಿದ್ದೇನೆ. ದುಷ್ಟ ಸ್ವಭಾವದ ಅವನನ್ನು ಕಾಣದ ವ್ಯಥೆಯಿಂದ, ಬಳಲಿಕೊಂಡಿದ್ದೇನೆ. ದುಷ್ಟಸ್ವಭಾವದ ಅವನನ್ನು ಕಾಣದ ವ್ಯಥೆಯಿಂದ ಮಾತುಗಳನ್ನು ಕೇಳುತ್ತಾ, ಉಭಯವರು ಮಾಡುವ ಪರಿಹಾಸ್ಯದ (ಅಪಹಾಸ್ಯದ) ಮಾತುಗಳನ್ನು ಕೇಳುತ್ತಾ, ಇನ್ನೂ ಎಷ್ಟು ಕಾಲ ಕಳೆಯಬೇಕೋ? ಏನು ಮಾಡಲಿ?

2. என் செய்யுமூரவர் கவ்வை? தோழீ! இனிநமக்கு,
என் செய்ய தாமரைக் கண்ணன் என்னை நிறைகொண்டான்,
முன் செய்ய மாமை இழந்து மேனி மெலிவெய்தி,
என் செய்ய வாயும் கருங் கண்ணும் பயப்பூர்ந்தவே.

ಎನ್ ಶೆಯ್ಯುಮೂರವರ್ ಕವ್ವೈ? ತೋೞೀ! ಇನಿ ನಮಕ್ಕು,
ಎನ್ ಶೆಯ್ಯ ತಾಮರೈಕ್ಕಣ್ಣನ್ ಎನ್ನೈ ನಿಱೈಕೊಂಡಾನ್,
ಮುನ್ ಶೆಯ್ಯ ಮಾಮೈ ಇೞಂದು ಮೇನಿ ಮೆಲಿವೆಯ್ದಿ,
ಎನ್ ಶೆಯ್ಯ ವಾಯುಮ್ ಕರುಂಗಣ್ಣುಮ್ ಪಯಪ್ಪೂರ್ನ್ದವೇ.

ಎನ್ ಕೆಯ್ಯ್ವಾಮ್ நாண் ஒசையும் = ಏನು ಮಾಡುವುದು, ಊರವರ் அல
ரவர் = ಊರವರ, ಕವ್ವೆ கடுமாம = ಹಾಸ್ಯ ಮಾಡುತ್ತಿದ್ದಾರೆ, ಕೇ
ಳೇ தோழீ ಗೆಳತಿ, ಇನಿ இனி = ಇನ್ನು ಮೇಲೆ, ನಮ್ಮ್ರ றமாம =
ನಮ್ಮ ವಿಷಯದಲ್ಲ, ಎನ್ நாண் = ನನ್ನ, ಕೆಯ್ಯ ஒசையுய = ಕೆಂಪನೆಯ,
ತಾಮರ್ತೆ தாமரை = ತಾವರೆಯಂತೆ, ಕಣ್ಣಾನ್ கண்ணாண் = ಕಣ್ಣನ್ನುಳ್ಳ
ವನಾದ ನನ್ನ ಸ್ವಾಮಿಯು), ಎನ್ನೈ நாணின = ನನ್ನನ್ನು, ನಿಱ್ವ்றீனாற = ಆಶಾ
ಪೂರ್ಣನಾಗಿ. ಕೊಣ್ಡಾನ್ ஒகாணாடாண் = ಸ್ವಾಧೀನ ಪಡಿಸಿಕೊಂಡಿದ್ದಾನೆ,
ಮುನ್ (முன் = (ನನ್ನ) ಮುಂಚಿನ, ಕೆಯ್ಯ ஒசையுய = ಸುಂದರವಾದ (ಕೆಂಪಾದ)
ಮಾಮೈ மாமை = ದೇಹ ~~ಕಾಂತಿ~~ ಕಾಂತಿಯು, ಇೞನ್ದು இழந்து = ಅಳಿದು
ಹೋಗಿ, ಮೇನಿ மேனி = ದೇಹವು, ಮೆಲವು ಎಯ್ದು தமனிவு நாயகீ
= ಕೃಶವಾಗಿ, ಎನ್ ಕೆಯ್ಯ ಮಾಯುಮ್ நாண் ஒசையுய வாயும் = ನನ್ನ ಕೆಂದುಟಿಗಳು,
ಕರು ಕಣ್ಣಾಮ್ க(ரு) கண்ணாம் = ಕರಿಯ ಕಣ್ಣುಗಳು, ಪಯಪ್ಪು
ಊರ್ನ್ದವೇ பயப்பு ஊர்ந்தவே = ಬಿಳಿದಾಯಾಗಿವೆ.

ಗೆಳತಿ, ಇನ್ನು ಮೇಲೆ ನಮ್ಮ ವಿಷಯದಲ್ಲಿ ಊರವರ ಹಾಸ್ಯ ಮಾಡುತ್ತಿದ್ದರೆ ಏನು ಮಾಡುವುದು? ನನ್ನ ಕೆಂದಾವರೆಯಂತೆ ಕಣ್ಣುಳ್ಳ ನಾಯಕನು ನನ್ನನ್ನು ಆಶಾಪೂರ್ಣನಾಗಿ ಸ್ವಾಧೀನ ಪಡಿಸಿಕೊಂಡಿದ್ದಾನೆ. ನನ್ನ ಮುಂಚಿನ ಸುಂದರವಾದ ಕೆಂಪನೆಯ ದೇಹ ಕಾಂತಿ ಅಳಿದು ಹೋಗಿ, ದೇಹವು ಕೃಶವಾಗಿ, ನನ್ನ ಚೆಂದುಟಿಗಳು ಕರಿಯ ಕಣ್ಣುಗಳು ಬಿಳಿದಾಯಾಗಿವೆ. (2)

ಈ ಪಾಶುರದಲ್ಲಿ ನಾಯಕಿಯು ಊರವರ ಅಪವಾದದ ಮಾತುಗಳಿಗೆ ತಾನು ಲಕ್ಷ್ಯಕೊಡುವುದಿಲ್ಲ ವೆನ್ನುತ್ತಾಳೆ. ಅದಕ್ಕೆ ಕಾರಣವನ್ನು ನಾಯಕಿ ಸ್ಪಷ್ಟಪಡಿಸು ತ್ತಾಳೆ.

ನಾಯಕಿ ಹೇಳುತ್ತಾಳೆ— ಗೆಳತಿ, ಇದುವರೆಗೆ ಊರವರ ಅಪವಾದವನ್ನು ಕೇಳಿದರೆ ನನಗೆ ಒಂದು ಬಗೆಯ ಅಂಜಿಕೆಯಾಗುತ್ತು. ಸುಂದರಿಯೂ, ಯುವತಿಯೂ ಕನ್ಯೆಯೂ ಆದ ನನ್ನನ್ನು ಕುರಿತು ಜನ ಹಾಗೆಲ್ಲ ಹಳಿದಾಡ ಬಹುದೇ ಎಂಬ ಕೊರಗು ನನ್ನ ಮನಸ್ಸಿನಲ್ಲಿತ್ತು. ಈಗಲಾದರೋ ಕೆಂದಾವರೆಯ ಕಣ್ಣಿನ ನನ್ನ ನಾಯಕನು ನನ್ನನ್ನು ಆಸೆಯಿಂದ ಪೂರ್ಣನಾಗಿ ತನ್ನ ವಶಪಡಿಸಿಕೊಂಡಿದ್ದಾನೆ. ನನ್ನ ಮುಂಚಿನ ದೇಹಕಾಂತಿ ಅಳಿಯಿತು. ನನ್ನ [illegible] ಬಡವಾಯಿತು. ಯಾವುದನ್ನು ಕುರಿತು ಊರವರು ಆಡಿಕೊಳ್ಳುತ್ತಿದ್ದರೋ ಆ ಸೌಂದರ್ಯವೇ ನನ್ನ ಪ್ರಿಯತಮನದಾಗಿ, ಅವನ ಪೂರ್ಣರಕ್ಷಣೆಯಲ್ಲಿ ನಾನಿರುವಾಗ, ನನಗೆ ಇನ್ನೇಕೆ ಭಯ?

ಭಕ್ತಿಯಲ್ಲಿ ಇಳಿಯ ಮಕ್ಕಳು ಕೇಳುವವರಿಗೆ ಯಾರ ಭಯವೂ ಇಲ್ಲವೆಂಬಂತೆ,

Garani Srinivasan

3. ஊர்ந்த சகடம் உதைத்த பாதத்தன், பேய்முலை
சார்ந்து சுவைத்த செவ்வாயன் என்னை நிறை கொண்டான்,
பேர்ந்தும் பெயர்ந்தும் அவனோடன்றியோர் சொல்லிலேன்,
தீர்ந்த என் தோழீ! என் செய்யும் ஊரவர் கவ்வையே.

ಊರ್ನ್ದ ಶಕಡಮ್ ಉದೈತ್ತ ಪಾದತ್ತನ್, ಪೇಯ್ ಮುಲೈ
ಶಾರ್ನ್ದು ಶುವೈತ್ತ ಶೆವ್ವಾಯನ್ ಎನ್ನೈ ನಿಱೈಕೊಣ್ಡಾನ್,
ಪೇರ್ನ್ದುಮ್ ಪೆಯರ್ನ್ದುಮ್ ಅವನೋಡನ್ಱಿಯೋರ್ ಶೊಲ್ಲಿಲೇನ್,
ಶೀರ್ನ್ದ ಎನ್ ತೋೞೀ! ಎನ್ ಶೆಯ್ಯುಮ್ ಊರವರ್ ಕವ್ವೈಯೇ.

ಊರ್ನ್ದ ஊர்ந்த = ನುಗ್ಗಿ ಬಂದ, ಶಕಡಮ್ சகடம் = (ಶಕಟಾಸುರನನ್ನು) ಬಂಡಿಯನ್ನು, ಉದೈತ್ತ உதைத்த = ಒದೆದ, ಪಾದತ್ತನ್ பாதத்தன் = ಪಾದವನ್ನುಳ್ಳವನು, ಪೇಯ್ ಮುಲೈ பேய் முலை = ರಾಕ್ಷಸಿಯ ಮೊಲೆಯನ್ನು, ಶಾರ್ನ್ದು சார்ந்து = ಆಶ್ರಯಿಸಿದ (ತೃಪ್ತಿಕರವಾಗಿ, ಬಲವಾಗಿ), ಶುವೈತ್ತ சுவைத்த = ಉಂಡ, ಶೆವ್ವಾಯನ್ செம்வாயன் = ಕೆಂಪು ತುಟಿಗಳವನು, ಎನ್ನೈ என்னை = ನನ್ನನ್ನು, ನಿಱೈಕೊಣ್ಡಾನ್ நிறை கொண்டான் = ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಂಡಿದ್ದಾನೆ (ಸ್ವೀಕರಿಸಿದ್ದಾನೆ), ಪೇರ್ನ್ದುಮ್ ಪೆಯರ್ನ್ದುಮ್ பேர்ந்தும் பெயர்ந்தும் = ಬೇರಾದರೂ ಮಾಡಿ (ಯಾವುದಾದರೊಂದು ಬಗೆಯಲ್ಲಿ), ಅವನೋಡು ಅನ್ಱಿ அவனோடு அன்றி = ಅವನೊಡನೆ ಸೇರುವುದಲ್ಲದೆ, ಓರ್ ಶೊಲ್ ಇಲೇನ್ ஓர் சொல் இலேன் = ಬೇರೊಂದು ಮಾತನ್ನು ಇಲ್ಲದವಳಾಗಿದ್ದೇನೆ, ಶೀರ್ನ್ದ தீர்ந்த = ಆಪ್ತಳಾದ (ಅನುಭವವುಳ್ಳ), ಎನ್ ತೋೞೀ என் தோழீ = ನನ್ನ ಗೆಳತಿ, ಎನ್ ಶೆಯ್ಯುಮ್ என் செய்யும் = ಏನು ಮಾಡುವುದು, ಊರವರ್ ஊரவர் = ಊರವರ, ಕವ್ವೈಯೇ கவ்வையே = ಅಪವಾದವೇ ಆದರೂ.

ನುಗ್ಗಿ ಬಂದ ಬಂಡಿಯನ್ನು ಒದೆದ ಪಾದವನ್ನುಳ್ಳವನು, ರಾಕ್ಷಸಿಯ ಮೊಲೆಯನ್ನು ಆಶ್ರಯಿಸಿ ತೃಪ್ತಿಕರವಾಗಿ ಉಂಡ ಕೆಂಪು ತುಟಿಗಳವನು ನನ್ನನ್ನು ಸಂಪೂರ್ಣವಾಗಿ ಸ್ವೀಕರಿಸಿದ್ದಾನೆ. ಯಾವುದಾದರೊಂದು ಬಗೆಯಲ್ಲಿ ಅವನೊಡನೆ ಸೇರುವುದಲ್ಲದೆ ಬೇರೊಂದು ಮಾತನ್ನು ಇಲ್ಲದವಳಾಗಿದ್ದೇನೆ. ಅನುಭವವುಳ್ಳ ಆಪ್ತ ಗೆಳತಿ, ಊರವರ ಅಪವಾದವೇ ಆದರೂ ನನ್ನನ್ನೇನು ಮಾಡುವುದು? (3)

ಇಲ್ಲಿ ಭಗವಂತನ ಅದ್ಭುತ ಸಾಮರ್ಥ್ಯವನ್ನು ಎರಡು ನಿದರ್ಶನಗಳಿಂದ ಹೇಳಲಾಗುತ್ತದೆ.

Garani Srinivasan

"ಊರನ್ದ ಬಾದತ್ತನ್" ಮತ್ತು "ವೇಲನ್ ಮುಲ್ಲೈ ಶಿವ್ವಾಯನ್" — ಈ ಎರಡೂ ಭಾಗವತದ ಶ್ರೀಕೃಷ್ಣಾವತಾರದ ಎರಡು ಅದ್ಭುತ ಪ್ರಸಂಗಗಳು. ನಂದಗೋಕುಲದಲ್ಲಿ ಬಾಲಗೋಪಾಲಕೃಷ್ಣನು ನಂದ-ಯಶೋದೆಯರಲ್ಲಿ ಬೆಳೆಯುತ್ತಾ ನಡೆದ ಪ್ರಸಂಗಗಳಿವು. ಕೃಷ್ಣನಿಗೆ ಇನ್ನೂ ಎರಡು ತಿಂಗಳು ತುಂಬಿಲ್ಲ; ಆಗ ಬಂದಳು ಪೂತನಿ ಎಂಬ ರಾಕ್ಷಸಿ ನಂದಗೋಕುಲಕ್ಕೆ. ಕಂಸನಿಂದ ಪ್ರೇರಿತಳಾಗಿ, ಹಸುಗೂಸುಗಳನ್ನೆಲ್ಲಾ ಕೊಲ್ಲುವ ಉದ್ದೇಶದಿಂದ. ನಂದಗೋಕುಲದಲ್ಲಿ ಅವಳು ಯಶೋದೆಯಂತೆ ಮಾರುವೇಷ ಧರಿಸಿದಳು. ತಾಯಿ ಯಶೋದೆ ಇಲ್ಲದ ಸಮಯವನ್ನು ನೋಡಿ, ಮಗುವನ್ನೆತ್ತಿಕೊಂಡು, ಅದಕ್ಕೆ ತನ್ನ ವಿಷದ ಹಾಲನ್ನುಣಿಸಿದಳು. ಕೃಷ್ಣನು ಆ ಹಾಲನ್ನೇ ಆದರದಿಂದ ತೃಪ್ತಿಯಾಗಿ ಕುಡಿದನು. ಅದರೊಂದಿಗೆ ಪೂತನಿಯ ಪ್ರಾಣವನ್ನು ಹೀರಿಬಿಟ್ಟನು.

ಇದಾದ ಕೆಲವೇ ದಿನಗಳಲ್ಲಿ ಶಕಟಾಸುರನು ಕಂಸನಿಂದ ಪ್ರೇರಿತನಾಗಿ ನಂದಗೋಕುಲಕ್ಕೆ ಬಂದನು. ಬಾಲಕೃಷ್ಣನು ಒಂಟಿಯಾಗಿ ಮಲಗಿರುವಾಗ ಬಂಡಿಯಾಗಿ ಅವನ ಮೇಲೆ ನುಗ್ಗಿ ಕೊಲ್ಲುವುದಕ್ಕಾಗಿ ಬಂದನು. ಮಗುವು ತನ್ನ ಪುಟ್ಟ ಕಾಲುಗಳನ್ನು ಝಾಡಿಸಿ ಆಡುವ ಹಾಗೆಯೇ, ತನ್ನ ಮೇಲೆ ನುಗ್ಗಿ ಬರುವ ಬಂಡಿಯನ್ನು ಕೃಷ್ಣನು ಕಾಲಿನಿಂದ ಒದೆದ ಕೂಡಲೇ, ಅದು ಪುಡಿಪುಡಿಯಾಯಿತು. ಶಕಟಸಂಹಾರವಾಯಿತು.

"ಪೇರನ್ನುಮ ಪೆಯರನ್ನುಮ" — ಎಂಬುದಕ್ಕೊಂದು ಭಾಷ್ಯಯಿತ್ತಿದ್ದಾರು ಎರಡು ವಿಧಗಳಾಗಿ ನಾನಾ ಕ್ರಿಯೆಗಳನ್ನು ಹೇಳಿರುವರು: ಮುನ್ನಡೆ, ಅಲೆದಾಟ, ಕಿರುಚಾಟ, ಕೆಲಕೆಲವು, ಕದಲು, ನಿಂತು, ಆಡಿ, ಓಡಾಟ ಇತ್ಯಾದಿ ಕ್ರಿಯೆಗಳು. ಹೇಗಾದರೂ ಸರಿ, ಯಾವರೀತಿಯಲ್ಲಾದರೂ ಎಂಬ ಅರ್ಥದಿಂದ ಅವರಿದಕ್ಕೆ ಅರ್ಥವನ್ನು ಕೊಡಲಾಗಿದೆ.

ನಾಯಕಿ ಹೇಳುತ್ತಾಳೆ: ಅನುಭವಸ್ಥರಾದ ಆಪ್ತರೆಲ್ಲರೂ, ಹಿರಿಯರೂ ನಾಥ ಭಗವಂತನೇ ನನ್ನನ್ನು ಆದರದಿಂದ ಸ್ವೀಕರಿಸಿದ್ದಾನೆ. ಅವನೇ ನನಗೆ ಬಂಧುವಾಗ, ಇನ್ನು ಊರವರು ನನ್ನನ್ನು ಕುರಿತು ಏನಂದರೇನಂತೆ! ನನ್ನ ಪ್ರಿಯತಮನಾದ ಭಗವಂತನನ್ನು ಯಾವ ರೀತಿಯಲ್ಲಾದರೂ ಸೇರಿಕೊಳ್ಳುವುದೊಂದೇ ದೇವನನ್ನ ಸೇರಬೇಕೆನ್ನು, ಬೇರೆಯಾವುದೊಂದು ಮಾತು ಬೇಡ.

ಪ್ರಪಂಚದ ಕಡೆಗೆ ಮನಸ್ಸನ್ನು ಆಕರ್ಷಿಸುತ್ತಿದ್ದರೆ, ಭಗವಂತನಿಂದ ನಾವು ದೂರವಾದಂತೆಯೇ. ಭಗವಂತನಲ್ಲಿ ನಿಜ ಮನಸ್ಸಿದ್ದರೆ, ಪ್ರಪಂಚದ ಜನರ ನಿಂದನೆ ನಮಗೇಕೆ? ನಮ್ಮನ್ನು ಕುರಿತು ಅವರು ಏನೇನು ಆಡಿಕೊಂಡರೂ ಅದು ನಮಗೆ ದಾರಿಯೇ!

4. ஊரவர் கவ்வை எருவிட்டு அன்னை சொல் நீர் படுத்து,
ஈர நெல் வித்தி முளைத்த நெஞ்சப் பெருஞ்செயுள்,

பேரமர் காதல் கடல்புரைய விளைவித்த,
காரமர் மேனி நம் கண்ணன் தோழீ! கடியனே.

ಊರವರ್ ಕವ್ವೆ ಯೆರುವಿಟ್ಟು ಅನ್ನೈಶೊಲ್ ನೀರ್ ಪಡುತ್ತು,
ಈರನೆಲ್ ವಿತ್ತಿ ಮುಳೈತ್ತ ನೆಂಜಪ್ಪೆರುಂಜೆಯುಳ್
ಪೇರಮರ್ ಕಾದಲ್ ಕಡಲ್ ಪುರೈಯ ವಿಳೈವಿತ್ತ,
ಕಾರಮರ್ ಮೇನಿ ನಮ ಕಣ್ಣನ್ ತೋೞೀ! ಕಡಿಯನೇ.

ಊರವರ್ ஊரவர் ಊರವರ, ಕವ್ವೆ கவ்வை ಅಪವಾದವೆಂಬ, ಎರು ಇಟ್ಟು எருவிட்டு = ಗೊಬ್ಬರವನ್ನು (ಎರುವನ್ನು) ಇಟ್ಟು, ಅನ್ನೈ ಶೊಲ್ அன்னை சொல் = ತಾಯಿಯ ಮಾತೆಂಬ (ಹಿತವಚನವೆಂಬ), ನೀರ್ நீர் = ನೀರನ್ನು, ಪಡುತ್ತು படுத்து = ಹಾಯಿಸಿ, ~~ಈರಮ~~ ஈரம் = ಭಕ್ತಿ ಎಂಬ (ಜ್ಞಾನವೆಂಬ), ನೆಲ್ நெல் = ಬತ್ತವನ್ನು, ವಿತ್ತಿ வித்தி = ಬಿತ್ತಿ, ಮುಳೈತ್ತ முளைத்த = ಮೊಳೆಯಿಸಿದ, ನೆಂಜಮ நெஞ்சம் = ಮನಸ್ಸೆಂಬ, ಪೆರು ಶೆಯುಳ್ பெருஞ்செயுள் = ವಿಸ್ತಾರವಾದ (ದೊಡ್ಡ) ಗದ್ದೆಯ ಬಯಲಲ್ಲಿ, ಪೇರ್ ಅಮರ್ பேரமர் = ಬಲವಾಗಿ ಬೇರುಬಿಟ್ಟ, ಕಾದಲ್ காதல் = ಪ್ರೇಮ (ಭಕ್ತಿ) ಎಂಬ ಪೈರನ್ನು, ಕಡಲ್ ಪುರೈಯ கடல்புரைய = ಕಡಲಿನಂತೆ (ವಿಶಾಲವಾಗಿ), ವಿಳೈವಿತ್ತ விளைவித்த = ಬೆಳೆಸಿದ, ಕಾರ್ ಅಮರ್ ಮೇನಿ காரமர் மேனி = ಕಾರ್ಮುಗಿಲನ್ನು ಹೋಲುವ ದೇಹಕಾಂತಿಯನ್ನುಳ್ಳ, ನಮ ಕಣ್ಣನ್ நம் கண்ணன் = ನಮ್ಮ ಆಶ್ರಿತರಕ್ಷಕನು (ನಮ್ಮ ಕಣ್ಣನೆಂಬ ಕೃಷ್ಣನು), ಕಡಿಯನೇ கடியனே = ಕಠಿಣನೇ? ತೋೞೀ தோழீ = ಗೆಳತಿ,

ಊರವರ ಅಪವಾದವೆಂಬ ಎರುವನ್ನಿಟ್ಟು, ತಾಯಿ ಹಿತವಚನವೆಂಬ ನೀರನ್ನು ಹಾಯಿಸಿ, ಪ್ರೇಮ(ಜ್ಞಾನ)ವೆಂಬ (ಬುದ್ಧಿಯ) ಬತ್ತವನ್ನು ಬಿತ್ತಿ, ಮೊಳೆಯಿಸಿದ ಮನಸ್ಸೆಂಬ ವಿಸ್ತಾರವಾದ ಗದ್ದೆ ಬಯಲಲ್ಲಿ ಬಲವಾಗಿ ಬೇರುಬಿಟ್ಟ, ಪ್ರೇಮ (ಭಕ್ತಿ) ಎಂಬ ಪೈರನ್ನು ಕಡಲಿನಂತೆ ವಿಶಾಲವಾಗಿ ಬೆಳೆಯಿಸಿದ ಕಾರ್ಮುಗಿಲನ್ನು ಹೋಲುವ ದೇಹಕಾಂತಿಯನ್ನುಳ್ಳ ನಮ್ಮ ಆಶ್ರಿತರಕ್ಷಕನು (ನಮ್ಮ ಕಣ್ಣನೆಂಬ ಕೃಷ್ಣನು), ಗೆಳತಿ, ಕಠಿಣನೇ? (4)

ಭಗವಂತನ ಸೌಲಭ್ಯಾದಿ (ಎಂದರೆ, ಸೌಲಭ್ಯ, ಕಾರುಣ್ಯ, ಮಾರ್ದವ್ಯ) ಗುಣಗಳನ್ನು ಇಲ್ಲಿ ಉದಾಹರಿಸಲಾಗಿದೆ

ಈ ವಿಷಯವನ್ನು ಪ್ರಣಯದ ರೀತಿಯ ಮೂಲಕ ವಿವರಿಸಲಾಗಿದೆ.

Garani Srinivasan

ಗದ್ದೆಯನ್ನು ಹದಮಾಡಿ ಬಿತ್ತವನ್ನು ಬೆಳೆಯುವ ರೈತನಾಗಿಯೂ, ಮನಸ್ಸನ್ನು ಹದಕ್ಕೆ ತಂದು ಜ್ಞಾನ ಭಕ್ತಿಗಳನ್ನು ದೃಢಗೊಳಿಸುವ ಭಗವಂತನಾಗಿಯೂ ಹೇಳಿದ್ದಾರೆ ಸುಂದರ ರಾಜರು.

ವಿಸ್ತಾರವಾದ ಗದ್ದೆಯ ಬಯಲನ್ನು ಬೇಸಾಯಗಾರನು ಮೊದಲು ಸಿದ್ಧಪಡಿಸಿ ಕೊಳ್ಳುತ್ತಾನೆ. ಅದಕ್ಕೆ ಎರುವನ್ನು ತುಂಬುತ್ತಾನೆ. ಸಮೃದ್ಧಿಯಾಗಿ ನೀರನ್ನು ಹಾಯಿಸುತ್ತಾನೆ. ಹದಮಾಡುತ್ತಾನೆ. ಒಳ್ಳೆ ಮಾದರಿ ಬಿತ್ತವನ್ನು (ಬೀಜವನ್ನು) ಬಿತ್ತುತ್ತಾನೆ. ಅದು ಮೊಳಕೆ, ಬೇರಾಗಿ, ಸೊಂಪಾದ ಪಯಿರಾಗಿ ಬೆಳೆದು ನಿಲ್ಲುತ್ತದೆ. ಹಾಗೆಯೇ, ಸ್ವಾಮಿಯ್ಯನ ಮನಸ್ಸಿಗೆ ಉರವರ ಅಪಾರವೆಂಬ ಗೊಬ್ಬರವನ್ನು ತುಂಬಿಸಿ, ತಾಯಿಯ ಎಡೆಬಿಡದ ಕಟಾಕ್ಷವೆಂಬ ನೀರನ್ನು ಸಮೃದ್ಧಿಯಾಗಿ ಹರಿಸಿ, ಮನಸ್ಸನ್ನು ~~ಹದ~~ ಹದಗೊಳಿಸಿ, ಅದರಲ್ಲಿ ಜ್ಞಾನವೆಂಬ ಬೀಜವನ್ನು ಬಿತ್ತಿ ಮೊಳೆಯಿಸಿ, ಅಲ್ಲಿ ಅದು ಬೇರೂರಿ ನಿಲ್ಲುವಂತೆಯೂ ಸೊಂಪಾಗಿ ಬೆಳೆಯುವಂತೆಯೂ ಮಾಡುವವನು ಭಗವಂತ.

ನಾಯಕಿ ಹೇಳುತ್ತಾಳೆ: ಗೆಳತಿ, ನನ್ನ ಪ್ರಿಯತಮನು ನನ್ನಲ್ಲಿ ಕೃಪೆಮಾಡಿದ್ದಾನೆ. ನನ್ನ ಮನಸ್ಸನ್ನು ಎಲ್ಲಾ ರೀತಿಯಲ್ಲೂ ಹದಗೊಳಿಸಿ, ~~[illegible]~~, ತನ್ನನ್ನು ಕುರಿತ ಜ್ಞಾನವು ಅಲ್ಲಿ ಅಂಕುರಿಸುವಂತೆಯೂ, ಅದು ~~ಅಲ್ಲಿ~~ ಬೇರುಬಿಟ್ಟು ದೃಢವಾಗಿ ನಿಲ್ಲುವಂತೆಯೂ, ಪುಷ್ಕಳವಾಗಿ ಬೆಳೆಯುವಂತೆಯೂ ಮಾಡಿದ್ದಾನೆ. ಅವನಲ್ಲಿ ನನಗೆ ಪ್ರೇಮವು ದೃಢವಾಗಿ ಅವಿಚ್ಛಿನ್ನವಾಗಿ ಸೊಂಪಾಗಿ ಬೆಳೆದು ~~ನಿಂತಿದೆ~~ ನಿಲ್ಲುವಂತೆ ಮಾಡಿದ್ದಾನೆ. ಕಾಮುಗನಂತೆ ಅತ್ಯಂತಾಸಕ್ತಿಯಿಂದ ದೇಹಕಾಂತಿಯುಳ್ಳ ಅವನನ್ನು ಕಠಿಣನನ್ನಾಗಿಯೇ? ಎಂದೆನಾ ಅಲ್ಲ.

ನಮ್ಮ ಮನಸ್ಸು ಸಂಸಾರದಲ್ಲಿಯೇ ಬಿದ್ದು ಕೊಳೆಯುತ್ತಿದ್ದು. ಅಂಥ ನಮ್ಮನ್ನು ಕನಿಕರಿಸಿ, ಅದನ್ನು ಹದಗೊಳಿಸಿ, ತನ್ನ ಬಗೆಗೆ ಜ್ಞಾನವನ್ನು ಬಿತ್ತಿ, ಮೊಳೆಯಿಸಿ, ಅಲ್ಲಿ ದೃಢವಾಗಿ ಬೆಳೆಯುವಂತೆ ಮಾಡುವವನೇ ಭಗವಂತ. ಅವನ ಕೃಪೆಯ ಹೊರತು ನಮಗೆ ಅವನತ್ತ ಜ್ಞಾನ ಭಕ್ತಿಗಳಿಗೆ ಎಡೆಯಿಲ್ಲವೇ ಇಲ್ಲ. ಎಂಥ ಕಾರುಣ್ಯ ಸ್ವಾಮಿ!

5 கடியன் கொடியன் நெடியமால் உலகம் கொண்ட
அடியன், அறிவருமேனி மாயத்தன், ஆகிலும்
கொடியவென்னெஞ்சம் அவனென்றே கிடக்குமெல்லே!
துடிகொளிடைமடத்தோழீ! அன்னையென்செய்யுமே?

ಕಡಿಯನ್ ಕೊಡಿಯನ್ ನೆಡಿಯಮಾಲ್ ಉಲಗಮ್ ಕೊಂಡ
ಅಡಿಯನ್, ಅಱಿವರುಮೇನಿ ಮಾಯತ್ತನ್, ಆಗಿಲುಮ್
ಕೊಡಿಯ ವೆನ್ನೆಂಜಮ್ ಅವನೆನ್ಱೇ ಕಿಡಕ್ಕುಮೆಲ್ಲೇ!;
ತುಡಿಕೊಳ್ ಇಡೈಮಡತ್ತೋೞೀ! ಅನ್ನೈಯೆನ್ ಶೆಯ್ಯುಮೇ?

Garani Srinivasan

ಕಡಿಯನ್ கடியன் = ಕಠಿಣನು, ಕೊಡಿಯನ್ கொடியன் ಕ್ರೂರ(ಕ್ರೋಧಿವನು), ನೆಡಿಯಮಾಲ್ நெடியமால் ಸರ್ವೇಶ್ವರನು, ಉಲಗಮ ಕೊಣ್ಡ ಅಡಿಯನ್ உலகம் கொண்ட அடியன் = ಲೋಕಗಳನ್ನು ಸ್ವಾಧೀನಪಡಿಸಿಕೊಂಡ ಕಿರುವಡಿಗಳುಳ್ಳವನು, ಅಱಿವು ಅರು ~~...~~ அறிவு அரு ~~...~~ = ಜ್ಞಾನಿಗಳಿಗೆ ಅಗೋಚರವಾದ(ಅರಿಯದ), ಮೇನಿ ಮಾಯತ್ತನ್ மேனி மாயத்தன் = ಸರ್ವಜ್ಞರಿಗೂ ಊಹಿಸಲಾಗದ ರೂಪವುಳ್ಳವನು, ಆಗಿಲುಮ್ ஆகிலும் = ಆದಾಗ್ಯೂ, ಕೊಡಿಯ கொடிய = ಕೆಟ್ಟ, ಎನ್ ನೆಂಜಮ என் நெஞ்சம் = ನನ್ನ ಮನಸ್ಸು, ಅವನ್ ಎನ್ರೇ அவன் என்றே = ಅವನು, ಅವನು ಎಂತಲೇ, ಕಿಡಕ್ಕುಮ கிடக்கும் = (ಅವನಲ್ಲೇ) ನೆಲಸಿದೆ, ಎಲ್ಲೇ எல்லே = ಏನಾಶ್ಚರ್ಯ! (ಎಲ ಎಲಾ!), ತುಡಿಕೊಳ್ துடிகொள் = ಡಮರುಗದ (ಬಲುಸಣ್ಣ), ಇಡೈ இடை = ನಡುವನ್ನುಳ್ಳ, ಮಡಮ மடம் = ಮುಗ್ಧಸ್ವಭಾವದ, ತೋೞೀ தோழீ = ಗೆಳತಿ, ಅನ್ನೈ அன்னை = ತಾಯಿ, ಎನ್ ಶೆಯ್ಯುಮೇ என் செய்யுமே = ಏನು ಮಾಡುತ್ತಾಳೆ

~~ನೆಲಗಳ~~, ಸರ್ವೇಶ್ವರನು ಕಠಿಣನು, ಕ್ರೂರ(ಕ್ರೋಧಿಯು), ಲೋಕಗಳನ್ನೆಲ್ಲಾ ವಶಪಡಿಸಿಕೊಂಡ ಕಿರುವಡಿಗಳುಳ್ಳವನು, ಜ್ಞಾನಿಗಳಿಗೆ ಅಂದಾದದಂ ಮೋಹಕಗಳುಳ್ಳವ ರೂಪವುಳ್ಳವನು. ಆದರೂ, ನನ್ನ ಕೆಟ್ಟ ಮನಸ್ಸು ಅವನಲ್ಲೇ ದೃಢವಾಗಿ ನೆಲಸಿದೆಯಲ್ಲ! ಏನಾಶ್ಚರ್ಯ! (ಎಲ ಎಲಾ!)। ಬಲುಸಣ್ಣ ನಡುವನವಳೇ, ಮುಗ್ಧಸ್ವಭಾವದವಳೇ, [illegible] (ನನ್ನ) ತಾಯಿ ಏನು ಮಾಡುತ್ತಾಳೆ? (5)

ಪರಾಂಕುಶ ನಾಯಕಿಗೆ ಭಗವಂತನಲ್ಲಿ ವ್ಯಾಮೋಹ: ಹೆಚ್ಚಿರುವುದನ್ನು ಇಲ್ಲಿ ಸೂಚಿಸಲಾಗಿದೆ.

"ಕಡಿಯನ್" ~~ಕೊಡಿಯನ್~~ " — ಭಗವಂತನನ್ನು 'ಕಠಿಣ' ಎನ್ನುವುದೇಕೆ? ನಿಜವಾಗಿ ಅವನು ಕಠಿಣನೇ? ಅಲ್ಲ. ತನ್ನ ಭಕ್ತನನ್ನು ಪರೀಕ್ಷಿಸಲು, ಅವನಿಗೆ ಕಾಣಿಸದವನಂತೆ ಅವನು ತೋರಿಸಿಕೊಂಡರೂ, ಅವನು ದಯಾಮಯನೇ.

"ಕೊಡಿಯನ್" — ಅವನನ್ನು 'ಕ್ರೂರ', 'ಕೆಟ್ಟವನು', 'ನಿಷ್ಠುರಿ' ಎನ್ನಿಸಿಕೊಳ್ಳುವಷ್ಟು ಕಠಿಣವಾಗಿ ನಡೆದುಕೊಳ್ಳುತ್ತಾನೆ. ಆದರೆ, ನಿಜವಾಗಿ ಅವನ ಚಿತ್ತದಲ್ಲಿ ಅಪಾರ ಆದರ ಇರುತ್ತದೆ.

"ಉಲಗಮ ಕೊಣ್ಡ ಅಡಿಯನ್" — ಭಗವಂತನ ಮೇಲಿನ ಎರಡು ಗುಣಗಳಿಗೆ ನಿದರ್ಶನವೆಂಬಂತೆ ಸ್ವಾಮಿಯು ನಡೆದುಕೊಂಡದ್ದು ಬಲಿಚಕ್ರವರ್ತಿಯ ಬಳಿಯಲ್ಲಿ. ಯಾಚನೆಗಳಿಂದಲೇ ಮೂರುಲೋಕಗಳನ್ನಾತನು

Garani Srinivasan

ಅದ್ವಿತೀಯವಾಗಿ ಬೆಳೆದು, ಬಲಿಚಕ್ರವರ್ತಿಯು ತೊಂಬತ್ತೊಂಬತ್ತು ಯಾಗಗಳನ್ನು ಮುಗಿಸಿದನು. ನೂರನೆಯ ಯಾಗವನ್ನು ಮಾಡಲು ಹೂಡಿದನು. ಅದನ್ನು ಸಾಂಗಗೊಳಿಸಿದ ಕೂಡಲೇ ದೇವೇಂದ್ರನು ತನ್ನ ಪದವಿಯನ್ನು ಅವನಿಗೆ ಬಿಟ್ಟುಕೊಡಬೇಕಾಗುತ್ತಿತ್ತು. ಭಗವಂತನು ದೇವೇಂದ್ರನನ್ನು ಅವನ ಸ್ಥಾನದಲ್ಲಿ ಉಳಿಸಿಕೊಡುವುದಕ್ಕಾಗಿ, ಅಪರಿಮಿತ ಸುಂದರನಾಗಿ, ಪುಟ್ಟ ಬ್ರಹ್ಮಚಾರಿಯ ಆ ವೇಷಧರಿಸಿ, ಬಲಿಯ ಯಾಗಶಾಲೆಗೆ ಬಂದನು. ತನಗೆ ಮೂರು ಹೆಜ್ಜೆಯಷ್ಟು ನೆಲ ಬೇಕೆಂದು ಯಾಚಿಸಿದನು. ಬಲಿಯಿಂದ ಅದನ್ನು ಧಾರೆ ಎರೆಸಿಕೊಂಡನು. ಕೂಡಲೇ, ತ್ರಿವಿಕ್ರಮನಾಗಿ ಬೆಳೆದು, ತನ್ನ ಒಂದು ಹೆಜ್ಜೆಯನ್ನು ಎತ್ತರಿಸಿ, ಭೂಮಂಡಲವನ್ನೆಲ್ಲಾ ಆವರಿಸಿ, ಅದನ್ನು ಅಳೆದುಕೊಂಡುಬಿಟ್ಟನು. ಮತ್ತೊಂದು ಹೆಜ್ಜೆಯನ್ನು ಎತ್ತರಿಸಿ, ಮೇಲಣ ಎಲ್ಲಾ ಲೋಕಗಳನ್ನು ಆವರಿಸಿ, ಅಳೆದುಕೊಂಡನು. 'ಮೂರನೆಯ ಹೆಜ್ಜೆಗೆ ನೆಲವನ್ನು ತೋರಿಸು' ಎಂದು ನಕ್ಕು ಕೇಳಿದನು. ಬಲಿಯು ಆಗ ನಮ್ರನಾಗಿ ತನ್ನ ತಲೆ (ನೆತ್ತಿ)ಯನ್ನು ತೋರಿಸಿದನು. ಭಗವಂತನು ತನ್ನ ಮೂರನೆಯ ಹೆಜ್ಜೆಯನ್ನು ಅವನ ನೆತ್ತಿಯ ಮೇಲಿಟ್ಟನು. ಅವನನ್ನು ವಿಧೇಯನಾದ್ದರಿಂದ ಅನುಗ್ರಹಿಸಿದನು.

"ಅಲರ್ವರ ಮೇನಿ ಮಾಯತ್ತನ್" — ಭಗವಂತನು ತಿಳಿವಳಿಕೆ- ಅಂದಾದವನು. ಅವನ ವಿಲಕ್ಷಣ ಸೌಂದರ್ಯವೂ ಮಾಯೆಯೇ - ಅಪ್ರತಿಮನಾಗಿ, ಆಶ್ಚರ್ಯಕರನಾಗಿ, ಆಕರ್ಷಕನಾಗಿ, ಮಾಯಾಕಾರನಾಗಿ (ಸಂಮೋಹನಕಾರಿಯಾಗಿ) ಇರತಕ್ಕದ್ದು.

ನಾಯಕಿ ಹೇಳುತ್ತಾಳೆ: ಸುಂದರಿ, ಮೃದುಸ್ವಭಾವದವಳೇ, ಗೆಳತಿ, ನನ್ನ ಪ್ರಿಯತಮ ದಿವ್ಯೇಶ್ವರನೇ. ಅವನು ಶಠನಾಗಿ, ಭ್ರಾಂತನಾಗಿ, ಕಳ್ಳನಾಗಿ ಕಂಡು ಬಂದರೂ, ನಿಜವಾಗಿಯೂ, ಅವನು ಸೌಂದರ್ಯಮೂರ್ತಿ. ಅವನ ದಿವ್ಯರೂಪವನ್ನು ತಿಳಿವಳಿಕೆಯಿಂದ ಕಂಡು ಕೊಳ್ಳಲು ಆಗುವುದಿಲ್ಲ. ಆದರೂ, ನನ್ನ ಮನಸ್ಸು ಅವನಲ್ಲಿ ನೆಟ್ಟು ಹೋಗಿದೆ. ಏನಾಶ್ಚರ್ಯವೋ! ಕೇಳಿ. ಹೀಗಿರುವಾಗ, ನನ್ನ ತಾಯಿಯು ಮತ್ತು ಊರವರು ನನ್ನನ್ನು ಏನು ಮಾಡಬಲ್ಲರು?

6. அன்னையென் செய்யிலென்? ஊரென் சொல்லிலென்? தோழிமீர்!,
என்னையினி யுமக்காசையில்லை அகப்பட்டேன,
முன்னையமரர் முதல்வன் வண்துவராபதி
மன்னன், மணிவண்ணன் வாசுதேவன் வலையுளே.

Garani Srinivasan

ಅನ್ನೈಯೆನ್ ಶೆಯ್ಯಿಲೆನ್? ಊರೆನ್ ಶೊಲ್ಲಿಲೆನ್? ತೋೞಿಮೀರ್!
ಎನ್ನೈಯಿನಿ ಉಮಕ್ಕಾಶೈಯಿಲ್ಲೈ ಅಹಪ್ಪಟ್ಟೇನ್,
ಮುನ್ನೈಯಮರರ್ ಮುದಲ್ವನ್ ವಣ್ ತುವರಾಪದಿ
ಮನ್ನನ್, ಮಣಿವಣ್ಣನ್ ವಾಸುದೇವನ್ ವಲೈಯುಳೇ.

ಅನ್ನೈ அன்னை = (ನನ್ನ) ತಾಯಿ, ಎನ್ ಶೆಯ್ಯಿಲ್ ಎನ್ என் செய்யில் என் = ಏನು ಮಾಡಿದರೆ ಏನು?, ಊರ್ ஊர் = ಊರು, ಎನ್ ಶೊಲ್ಲಿಲ್ ಎನ್ என் சொல்லில் என் = ಏನು ಹೇಳಿದರೆ ಏನು?, ತೋೞಿಮೀರ್ தோழிமீர் = ಗೆಳತಿಯರೇ, ಎನ್ನೈ என்னை = ನನ್ನ ವಿಷಯದಲ್ಲಿ, ಇನಿ இனி = ಇನ್ನು, ಉಮಕ್ಕು உமக்கு = ನಿಮಗೆ, ಆಶೈ ಇಲ್ಲೈ ஆசை இல்லை = ಆಶೆಯಿಲ್ಲ (ಆಶೆ ಇರಬಾರದು), ಅಹಪ್ಪಟ್ಟೇನ್ அகப்பட்டேன் = ಸಿಕ್ಕಿಬಿದ್ದೆನೆ, ಮುನ್ನೈ ಅಮರರ್ ಮುದಲ್ವನ್ முன்னை அமரர் முதல்வன் = ಶಾಶ್ವತರಾದ ನಿತ್ಯಸೂರಿಗಳ ಒಡೆಯನು, ವಣ್ வண் = ಸುಂದರವಾದ, ತುವರಾಪದಿ துவராபதி = ದ್ವಾರಕಾಪುರಿಯ, ಮನ್ನನ್ மன்னன் = ಒಡೆಯನು, ಮಣಿವಣ್ಣನ್ மணிவண்ணன் = ನೀಲಮಣಿವರ್ಣನು, ವಾಸುದೇವನ್ வாசுதேவன் = ವಾಸುದೇವನ, ವಲೈಯುಳೇ வலையுளே = ಬಲೆಯಲ್ಲಿಯೇ.

ಗೆಳತಿಯರೇ, ಶಾಶ್ವತವಾದ ನಿತ್ಯಸೂರಿಗಳ ಒಡೆಯನೂ, ಸುಂದರವಾದ ದ್ವಾರಕಾಪುರಿಯ ಒಡೆಯನೂ, ನೀಲಮಣಿವರ್ಣನೂ, ಆದ, ವಾಸುದೇವನ ಬಲೆಯಲ್ಲಿ ನಾನು ಸಿಕ್ಕಿಬಿದ್ದೆನೆ. ಇನ್ನು ನನ್ನ ತಾಯಿ ಏನು ಮಾಡಿದರೇನು? ಊರು ಏನೆಂದರೇನು? (ನಿಮಗಿನ್ನು ನನ್ನ ಆಶೆ ಬೇಡ) ನೀವೂ ನನ್ನ ಆಶೆಯನ್ನು ಬಿಡಿ (6)

ಇಲ್ಲಿ, ಭಗವಂತನ [illegible] ರಕ್ಷಣೆ – [illegible] – ಬಳ[illegible]ನಾದ ಬಳಿಕ, ತನಗೆ ತನ್ನ ತಾಯಿಯ ಮತ್ತು ಊರವರ [illegible] ಅವಕಾಶವಿಲ್ಲ ಎನ್ನುತ್ತಾಳೆ ನಾಯಕಿ.

ತಾಯಿ ಜನ್ಮಕೊಟ್ಟವಳು. ಗೆಳತಿಯರು ಆಪ್ತರು. ಒಡನಾಡಿಗಳು. ಹುಟ್ಟಿದಾಗಿನಿಂದಲೂ ಇವರು ತನ್ನ ಸುಖಕ್ಕೆ ಒದಗಿಬಂದವರು. ಆದ್ದರಿಂದ ಇವರೆಲ್ಲರೂ ಆತ್ಮೀಯರು. ಊರವರು ಹೊರಗಿನ ಜನ. ಇತರರ ಜೀವನದ ರೀತಿಯನ್ನು ಕುರಿತು ಟೀಕಿಸಿ, ವಿಮರ್ಶಿಸತಕ್ಕವರು. ಕೆಲವರು ಸಹಜರೀತಿಯಲ್ಲಿ. ಕೆಲವರು ಕನಿಕರದಿಂದ. ಕೆಲವರು [illegible] ಉದ್ವೇಗದಿಂದ. ಕೆಲವರಂತೂ ಕಡು ಶತ್ರುಗಳರೀತಿಯಲ್ಲಿ. ಹೀಗೆ

Garani Srinivasan

ಊರವರೆಲ್ಲರೂ ಕೇಳಿದರೆ ಇದೇನೆಂದು ಆಕ್ಷೇಪಿಸುತ್ತಾರೆ. ಹಿಂದುಮುಂದು(?) ನೋಡದೆ ಮಾತ್ರ ಎಲ್ಲರೂ ಹೀಯಾಳಿಸುತ್ತಾರೆ. ಯಾವ ಹೆಣ್ಣಾದರೂ ಪ್ರಾಣಕಾಂತ(?) ಮಾರ್ಗದಿಂದ ಎಷ್ಟೆಷ್ಟು ಜಾರಿದರೂ ಸರಿ, ಅದನ್ನು ಕೇವಲಾಪೇಕ್ಷಿಸಿ(?), ಅದನ್ನು ಬಿಟ್ಟು ಕಷ್ಟ ಮಾಡಿ, ಹಳಿದು ಹಾಸ್ಯಮಾಡಿ, ಅಪವಾದವನ್ನು ಹರಡಿ, ಅಪಮಾನಕ್ಕೆ ಈಡು ಮಾಡುತ್ತಾರೆ.

ಪರಾಂಕುಶ ನಾಯಕಿಯ ಮನಸ್ಸೇನು, ನಡತೆಯಂಥದ್ದು ಎಂದು ಅವರು (ಊರವರು) ಸ್ವಲ್ಪವೂ ಗಮನಿಸಿ ತಿಳಿಯುವುದಿಲ್ಲ. ತಮ್ಮಂತೆ ಅವಳಲ್ಲವಲ್ಲ! ಅಷ್ಟೇ ಸಾಕು. ಅವಳದು ತಪ್ಪುದಾರಿ ಎಂದು ನಿರ್ಧಾರಕ್ಕೆ ಬರುತ್ತಾರೆ. ಅವರಿಗೆ ಅವಳು ಇರಲಿ(?), ಹುಟ್ಟಿದ್ದೂ(?), ದಾರಿತಪ್ಪಿದವಳು, ಆಗುತ್ತಾಳೆ. ಅವರು ಅವಳನ್ನು ಹಳಿಯುತ್ತಾರೆ. ನಿಂದಿಸುತ್ತಾರೆ ದೂಷಿಸುತ್ತಾರೆ. ಅವಮಾನ ಮಾಡುತ್ತಾರೆ. ಸಾಧ್ಯವಾದಷ್ಟು ಮನಸ್ಸಿಗೆ ಹಿಂಸೆ ಕೊಡುತ್ತಾರೆ.

ತನ್ನ ಪವಿತ್ರವಾದ ಅಲೌಕಿಕವಾದ(?) ನಡತೆಗೆ ಕಾರಣವೇನೆಂದು ನಾಯಕಿ ತನ್ನ ಆಪ್ತಸಖಿಯಲ್ಲಿ ಹೇಳುತ್ತಾಳೆ.

ನಾಯಕಿ ಹೇಳುತ್ತಾಳೆ: ಗೆಳತಿಯರೇ, ನನ್ನ ಪ್ರಿಯತಮನು ಸರ್ವವ್ಯಾಪಿಯಾದ ವಾಸುದೇವನೇ! ನನ್ನ ಉಜ್ಜೀವನಕ್ಕಾಗಿ ಅವನೇ ಆತನಿಂದ(?) ಬೀಸಿದ(?) ಬಲೆಯಲ್ಲಿ ನಾನು ಸಿಕ್ಕಿಬಿದ್ದಿದ್ದೇನೆ. ಹೀಗೆ, ಎಲ್ಲ ರೀತಿಯಲ್ಲೂ ನಾನು ಅವನ ಅಧೀನ. ಆದರಿಂದ, ನನ್ನ ತಾಯಿ ಏನು ಮಾಡಿದರೇನು? ಊರವರು ಏನೆಂದರೇನು? (ದೃಢವಾದ, ಪವಿತ್ರ(?)) ನನ್ನ ಆಸೆಯನ್ನು ನೀವ್ಯಾರೂ [illegible] ಬಿಡಿ.

7. வலையுளகப்படுத்து என்னை நன்னெஞ்சம் கூவிக்கொண்டு,
அலைகடற்பள்ளியம்மானை ஆழிப்பிரான் தன்னை,
கலைகொளகலல்குல் தோழீ! நம் கண்களாற் கண்டு,
தலையில் வணங்கவும் ஆங்கொலோ? தையலார் முன்பே.

ವಲೈಯುಳಹಪ್ಪಡುತ್ತು ಎನ್ನೈ ನಲ್ ನೆಂಜಮ್ ಕೂವಿಕ್ಕೊಂಡು,
ಅಲೈಕಡಲ್ ಪಳ್ಳಿಯಮ್ಮಾನೈ ಆೞಿಪ್ಪಿರಾನ್ ತನ್ನೈ,
ಕಲೈಕೊಳಹಲಲ್ಗುಲ್ ತೋೞೀ! ನಮ್ ಕಣ್ಗಳಾಲ್ ಕಂಡು,
ತಲೈಯಿಲ್ ವಣಂಗವುಮ್ ಆಂಗೊಲೋ? ತೈಯಲಾರ್ ಮುನ್ಬೇ.

ವಲೈಯುಳ್ வலையுள் = ಬಲೆಯಲ್ಲಿ, ಅಹಪ್ಪಡುತ್ತು அகப்படுத்து = ಸಿಕ್ಕಿಸಿ, ಎನ್ನೈ என்னை = ನನ್ನನ್ನು, (ನನ್ನ) ನಲ್ ನೆಂಜಮ್ நல்நெஞ்சம் = ಒಳ್ಳೆಯ ಮನಸ್ಸನ್ನು, ಕೂವಿಕ್ಕೊಂಡು கூவிக்கொண்டு = ಕೂಗಿ

ಕರೆದುಕೊಂಡು, ಅಲ್ಲಿರುವಲ್ಲಿ ಅವನನ್ನೇ அலகடப்பணி அம்மானை:
ಅಲೆಗಳುತುಂಬಿದ ಕಡಲಲ್ಲಿ ಪವಡಿಸಿರುವ ಸ್ವಾಮಿಯನ್ನು, ಆಲಿ ಪ್ಪಿರಾನ್ ತನ್ನನ್ನೆ
ஆழிப்பிரான் தன்னை ಚಕ್ರಾಯುಧದ ಸ್ವಾಮಿಯನ್ನು, ಕಲ್ಲಿಕೊಳ್
அணிகொள் = ಆಭರಣದಿಂದ ಅಲಂಕೃತವಾದ, அகல் அகம் = ವಿಸ್ತಾರವಾದ
(ಅಗಲವಾದ), அல்குல் அம்கும் = ನಿತಂಬಗಳುಳ್ಳ, ಕೋಲೆಯ தோழீ
ಗೆಳತಿ, ನಮ್ಮ ಕಣ್ಣುಗಳಾಲ್ ಕಣ್ಣು நம் கண் களால் கண்டு = ನಮ್ಮ
ಕಣ್ಣುಗಳಿಂದಲೇ ನೋಡಿ ಕಲ್ಲೆಯಿಲ್ ವಣಙ್ಙುವ ತುಳಾಯಿಲ್ ವಣ
ತಲೆಯಿಂದ ನಮಸ್ಕರಿಸುವಂತೆ, ಆವ ಕಾಲವೋ ஆம்
ஒருகால் ಕಲೆಯಿಂದ ನಮಸ್ಕರಿಸುವಂತೆ, ಆವ ಕಾಲವೋ தொழுது
கொலோ = ಆನುಪ್ಪದೋ ಕಾಣೆ, ತೆಯಲಾರ್ ಮುನ್ನೇ ஊதுயலார்
முன்பே = ಹಿಂಗದರ ಮುಂದೆಯೇ

ನನ್ನನ್ನು ಬಳೆಯಲ್ಲಿ ಸಿಕ್ಕಿಸಿಕೊಂಡು, ನನ್ನ ಬಳೆಯ ಮನಸ್ಸನ್ನು ಪವಡಿಸಿರುವ ಸ್ವಾಮಿ
ತಾನೇ ಕರೆದುಕೊಂಡು, ಅಲೆಗಳುತುಂಬಿದ ಕಡಲಲ್ಲಿ ಪವಡಿಸಿರುವ ಸ್ವಾಮಿ
ಯನ್ನು, ಚಕ್ರಾಯುಧದ ಸ್ವಾಮಿಯನ್ನು, ಆಭರಣದಿಂದ ಅಲಂಕೃತವಾದ
ಅಗಲವಾದ ನಿತಂಬಗಳುಳ್ಳ ಗೆಳತಿ, ನಮ್ಮ ಕಣ್ಣುಗಳಿಂದಲೇ ನೋಡುವಂತೆ
ಯೂ, ತಲೆಬಾಗಿ ನಮಸ್ಕರಿಸುವಂತೆಯೂ, ಹಿಂಗದರ ಮುಂದೆಯೇ, (7)
ಆನುಪ್ಪದೋ ಕಾಣೆ

ಊರ ಹೆಂಗಸರು ತನ್ನನ್ನು ಕಂಡು ಆಡಿಕೊಳ್ಳುವ ಮಾತುಗಳಿಗೆ ನಾಚುತ್ತ
ಉತ್ತರ ಕೊಡುವಂತಾಗಬೇಕು. ತನ್ನ ಸ್ವಾಮಿಯು ಎಲ್ಲಾ ನೋಡುತ್ತಿರುವಂತೆ,
ಎಲ್ಲರ ಎದುರಲ್ಲೇ ಅಲ್ಲಿಗೆ ಬರಬೇಕು. ತಾನು ಅವನ ತಿರುವಡಿಗಳಿಗೆ ತಲೆಬಾಗಿ
ಎಲ್ಲರ ಎದುರಲ್ಲೇ ಅಲ್ಲಿಗೆ ಬರಬೇಕು. ತಾನು ಅವನ ಅವರ ನಿಂದನೆಯ
ವಿಶಾಲವಾದದನ್ನು ಎಲ್ಲರು ನೋಡುವಂತಾಗಬೇಕು. ನಾಯಕಿಯು ಹಬ್ಬಿಯಾಗೆ ಇದು
ಮಾತುಗಳಿಗೆ ಉತ್ತರವಾಗಬೇಕು.

ನಾಯಕಿ ಹೇಳುತ್ತಾಳೆ: ನಮ್ಮನಲ್ಲಿ ಡಾಬನ್ನು ಅಲಂಕರಿಸಿ
ಕೊಂಡ ಸುಂದರ ಗೆಳತಿ, ನನ್ನನ್ನು ತನ್ನ ವಶವಾಗಿಕೊಂಡು, ನನ್ನ ಬಯಕೆಯಾದ
ಮನಸ್ಸನ್ನು ತನ್ನ ಬಳೆಯಲ್ಲಿಟ್ಟುಕೊಂಡಿರುವ ಆ ಪಾಲ್ಗಡಲಶಾಯಿಯೂ
ಚಕ್ರಾಯುಧಧಾರಿಯೂ ಆದ ನನ್ನ ಪ್ರಿಯತಮನು, ನಮ್ಮೆಲ್ಲರ ಕಣ್ಣಮುಂ
ದೆಯೇ, ನನ್ನ ಆ ಹೆಂಗದರ ಮುಂದೆಯೇ, ನನ್ನ ತಿರುವಡಿಗಳನ್ನು ನಮನ್ನು
ರಗಳನ್ನು ಸ್ವೀಕರಿಸುವಂತೆ ಎಂದು ಆನುಪ್ಪದೋ ಕಾಣೆನಲ್ಲ.

8 பேய்முலையுண்டு சகடம் பாய்ந்து மருதிடை
போய் முதல் சாய்த்து, புள்வாய் பிளந்து களிறட்ட,
தூமுறுவல் தொண்டைவாய்ப்பிரானை எந்நான் கொலோ?
யாமுறுகின்றது தோழீ! அன்னையர் நாணவே.

(55)

ಪೇಯ್ ಮುಲೈಯುಣ್ಡು ಶಕಡಮ್ ಪಾಯ್ನ್ದು ಮರುದಿಡೈ
ಪ್ಪೋಯ್ ಮುದಲ್ ಶಾಯ್ತ್ತು, ಪುಳ್‌ವಾಯ್ ಪಿಳನ್ದು ಕಳಿಱಟ್ಟ,
ತೂಮುಱುವಲ್ ತೊಣ್ಡೈವಾಯ್ ಪಿರಾನ್ನೈ ಎನ್ನಾಳ್‌ಕೊಲೋ?,
ಯಾಮುಱುಗಿನ್ಱದು ತೋೞೀ! ಅನ್ನೈಯರ್ ನಾಣವೇ.

ಪೇಯ್ ಮುಲೈ ಉಣ್ಡು பேய் முலை உண்டு = ರಾಕ್ಷಸಿಯ ಮೊಲೆಯನ್ನು ಉಂಡು, ಶಕಡಮ್ ಪಾಯ್ನ್ದು சகடம் பாய்ந்து = ಶಕಟವನ್ನು (ಬಂಡಿಯನ್ನು) ಒದೆದು, ಮರುದು ಇಡೈಪ್ಪೋಯ್ மருது இடைப் போய் = ಅರ್ಜುನವೃಕ್ಷಗಳನಡುವೆ ಹೋಗಿ, ಮುದಲ್ ಶಾಯ್ತ್ತು முதல் சாய்த்து = (ಅವುಗಳನ್ನು) ಬೇರುಸಹಿತ ಬೀಳಿಸಿ, ಪುಳ್‌ವಾಯ್ ಪಿಳನ್ದು புள் வாய் பிளந்து = ಪಕ್ಷಿಯ ಬಾಯನ್ನು ಸೀಳಿ, ಕಳಿಱು ಅಟ್ಟ களிறு அட்ட = ಆನೆಯನ್ನು (ಸಲಗವನ್ನು) ಕೊಂದ, ತೂಮುಱುವಲ್ தூ முறுவல் = ಶುದ್ಧವಾದ ಮಂದಹಾಸದ, ತೊಣ್ಡೈವಾಯ್ தொண்டை வாய் = ತೊಂಡೆಹಣ್ಣಿನಂತೆ ಕೆಂಪಾದ ತುಟಿಗಳ, ಪಿರಾನ್ನೈ பிரானை = ಸ್ವಾಮಿಯನ್ನು, ಎನ್ನಾಳ್ ಕೊಲೋ என் நாள் கொலோ = ಅದೆಂದಿಗೋ, ಯಾಮ್ யாம் = ನಾವು, ಉಱುಗಿನ್ಱದು ತೋೞೀ உறுகின்றது தோழீ = ಸೇರುವುದು ಗೆಳತೀ, ಅನ್ನೈಯರ್ ನಾಣವೇ அன்னையர் நாணவே = ತಾಯಂದಿರು ನಾಚುವಂತೆ.

ಗೆಳತಿ ರಾಕ್ಷಸಿಯ ಮೊಲೆಯನ್ನುಂಡು, ಬಂಡಿಯನ್ನೊದೆದು, ಅರ್ಜುನವೃಕ್ಷಗಳನಡುವೆ ಹೋಗಿ ಅವುಗಳನ್ನು ಬೇರುಸಹಿತ ಬೀಳಿಸಿ, ಪಕ್ಷಿಯ ಬಾಯನ್ನು ಸೀಳಿ, ಮದಗಜವನ್ನು ಕೊಂದ ಶುದ್ಧವಾದ ಮಂದಹಾಸದ ಕೆಂದುಟಿಯ ಸ್ವಾಮಿಯನ್ನು ನಾವು ಸೇರುವುದು ಅದೆಂದಿಗೋ? ತಾಯಂದಿರು ನಾಚುವಂತೆ. (8)

ಹಿಂದಿನ ಪಾಶುರದ (ನಾಯಕಿಯ) ಕಾತರವನ್ನು, ಆಸೆಯನ್ನು ಇಲ್ಲಿಯೂ ಮುಂದುವರಿಸಲಾಗಿದೆ. ಅಲ್ಲದೆ, ಭಗವಂತನ ಶ್ರೀಕೃಷ್ಣಾವತಾರದ ಕೆಲವು ಆಶ್ಚರ್ಯಕರ ಪ್ರಸಂಗಗಳ ಸೂಚನೆಯನ್ನು ಕೊಡಲಾಗಿದೆ.

"ಪೇಯ್ ಮುಲೈ ಉಣ್ಡು" - ಇದು ಪೂತನಾ ಸಂಹಾರದ ವಿಷಯ. ಎಳೆಯ ಕೋಮಲಾಂಗನಾದ ಶ್ರೀಕೃಷ್ಣನನ್ನು ವಂಚನೆಯಿಂದ ಎತ್ತಿಕೊಂಡು, ತನ್ನ ವಿಷದ ಹಾಲನ್ನುಣಿಸಿ ಕೊಲ್ಲಬೇಕೆಂದು ಬಂದ ಪೂತನಿಯ ಹಾಲನ್ನು ಆಸೆಯಿಂದಲೇ ಕುಡಿದು ಅವಳನ್ನು ಕೊಂದುಹಾಕಿದನು.

"ಶಕಡಮ್ ಪಾಯ್ನ್ದು" - ಇದು ಶಕಟಾಸುರ ವಧೆಯ ವಿಷಯ. ಪೂತನಿಯನ್ನು ಸಂಹರಿಸಲು ಬಂದವನು ಶಕಟಾಸುರ. ಬಂಡಿಯಾಕಾರದಲ್ಲಿ, ಮಲಗಿರುವ ಮಗು ಕೃಷ್ಣನ ಮೇಲೆ ಉರುಳಿ ಅವನನ್ನು ಕೊಲ್ಲಲು ನುಗ್ಗಿ ಬಂದಾಗ, ತನ್ನ ಪುಟ್ಟ ಕಾಲಿನಿಂದ ಬಂಡಿಯನ್ನೊದೆದು, ಅದನ್ನು ಪುಡಿಪುಡಿ ಮಾಡಿದನು

"ಮರುದತ್ತೆ ಶಾಯಸ್ತ" – ಇದು ಯಾಮಳಾರ್ಜುನ ಭಂಜನದ ವಿಷಯ. ಅಂಬೆಗಾಲಿಡುವ ಮಗುವನ (ಕೃಷ್ಣನ) ಚೇಷ್ಟೆಗಳಿಗೆ ಕೋಪಗೊಂಡು, ಅವನನ್ನು ಒರಳಿಗೆ ಕಟ್ಟಿದಾಗ, ತಾಯಿ ಯಶೋದೆ ತನ್ನ ಕೆಲಸಕ್ಕೆಂದು ಹೋದಳು. ಮಗುವಾದ ಕೃಷ್ಣನು ತನ್ನ ಹಿಂದೆ ಒರಳನ್ನು ಎಳೆದುಕೊಂಡು ಮುಂದುಗಡೆ ಇದ್ದ ಎರಡು ಅವಳಿ ಮರಗಳ (ಮತ್ತೀಮರಗಳ) ನಡುವೆ ನುಸುಳಿದನು. ಒರಳನ್ನು ತನ್ನ ಕಡೆಗೆ ಎಳೆದುಕೊಳ್ಳುವುದಕ್ಕೆ ಯತ್ನಿಸಿದಾಗ ಆ ಮರಗಳು ಬುಡಸಹಿತ ಉರುಳಿದವು.

"ಪುಳ್ಳವಾಯ್ ಪಿಳನ್ದ" – ಇದು ಬಕಾಸುರವಧೆಯ ವಿಷಯ. ಬಾಲ ಕೃಷ್ಣನು ಗೋವಳ ಬಾಲಕರ ಜೊತೆಯಲ್ಲಿ ದನಕರುಗಳನ್ನು ಮೇಯಿಸಲು ಕಾಡಿಗೆ ಹೋಗುತ್ತಿದ್ದ ಕಾಲದಲ್ಲಿ, ಒಂದು ದಿನ, ಒಂದು ಬಕಪಕ್ಷಿ ಬಾಯನ್ನು ತೆರೆದುಕೊಂಡು ಅವನನ್ನೇ ನುಂಗಿಬಿಟ್ಟಿತು. ಇದನ್ನು ಕಂಡ ಕೃಷ್ಣನು ಅದರ ಕೊಕ್ಕನ್ನು ಹಿಡಿದು, ಅಗಲಿಸಿ, ಸೀಳಿ, ಅದನ್ನು ಕೊಂದುಹಾಕಿದನು.

"ಕಳ್ಳಚ್ಚ" – ಕಂಸನು ಕೃಷ್ಣನನ್ನು ಕೊಲ್ಲಬೇಕೆಂದು ಮಾಡಿದ ಹಲವಾರು ಪ್ರಯತ್ನಗಳು ವಿಫಲಗೊಂಡವು. ಕಡೆಗೆ, ಧನುಃ ಪೂಜೆಯ ನೆಪದಿಂದ ಅವನನ್ನು ಮಥುರೆಗೆ ಬರಮಾಡಿಕೊಂಡನು. ಅಲ್ಲಿ ಯಾವುದಾದರೊಂದು ರೀತಿಯಲ್ಲಿ ಅವನನ್ನು ಕೊಲ್ಲಬೇಕೆಂದು ಯೋಚಿಸಿದನು. ಅವುಗಳಲ್ಲಿ ಮೊದಲನೆಯದು ಕುವಲಯಾಪೀಡವೆಂಬ ಮದ್ದಾನೆಯಿಂದ, ಊರಬಾಗಿಲಲ್ಲೇ ತುಳಿಸಿ ಕೊಲ್ಲಿಸುವುದು. ಊರಬಾಗಿಲಲ್ಲಿ ಕಾದುಕೊಂಡಿದ್ದ ಆ ಮದ್ದಾನೆಯನ್ನು ಬಾಲಕೃಷ್ಣನು ಎದುರಿಸಿ, ಅದರ ದಂತವನ್ನು ಮುರಿದುಕೊಂಡು, ಅದರಿಂದಲೇ ಆ ಆನೆಯನ್ನು ಕೊಂದುಹಾಕಿದನು.

ನಾಯಕಿ ಹೇಳುತ್ತಾಳೆ! ಗೆಳತಿ, ದುಷ್ಟರನ್ನು ದಂಡಿಸುವುದಕ್ಕೆ, ಆಶ್ರಿತರನ್ನು ಕಾಪಾಡುವುದಕ್ಕೆ ಪರಮ ಸಮರ್ಥನಾದ, ಮಂದಹಾಸದಿಂದ ಕೂಡಿದ ಕೆಂದುಟಿಗಳಿಂದ ಆಕರ್ಷಣೀಯ ಭಗವಂತನನ್ನು, ನಮ್ಮನ್ನೆಲ್ಲ ನಿಂದಿಸು ತಿರುವ ಕಾಯಂಬಿಲ್ಲಾ ನಾಟುವಂತೆ, ಅವರ ಕಣ್ಣೆದುರಲ್ಲೇ, ನಾವೆಂದಿಗೆ ಸೇರುವೆವೋ?

9 நாணும் நிறையும் கவர்ந்து என்னை நல் நெஞ்சம் கூவிக்கொண்டு,
சேணுயர் வானத்திருக்கும் தேவபிரான் தன்னை,
ஆணையென் தோழீ! உலகு தோறலர் தூற்றி, ஆம்
கோணைகள் செய்து குதிரியாய் மடலூர்துமே.

Garani Srinivasan

ನಾಣುಮ್ ನಿಱೈಯುಮ್ ಕವರ್ನ್ದು ಎನ್ನೈ ನಲ್ ನೆಂಜಮ್ ಕೂವಿಕ್ಕೊಣ್ಡು,
ಶೇಣುಯರ್ ವಾನತ್ತಿರುಕ್ಕುಮ್ ತೇವಪಿರಾನ್ ತನ್ನೈ,
ಆಣೈಯೆನ್ ತೋೞೀ, ಉಲಗುದೋಱು ಅಲರ್ ತೂಱ್ಱಿ, ಆಮ್
ಕೋಣೈಗಳ್ ಶೆಯ್ದು ಕುದಿರಿಯಾಯ್ ಮಡಲೂರ್ದುಮೇ

ನಾಣುಮ್ நாணும் = ಲಜ್ಜೆಯನ್ನೂ (ಮಾನಮರ್ಯಾದೆಗಳನ್ನೂ), ನಿಱೈಯುಮ್ நிறையும் = ವಿನಯ ಸ್ವಭಾವಗಳನ್ನೂ, ಕವರ್ನ್ದು கவர்ந்து = ಕಸಿದುಕೊಂಡು, ಎನ್ನೈ என்னை = ನನ್ನ, ನಲ್ ನೆಂಜಮ್ நல் நெஞ்சம் = ಒಳ್ಳೆಯ ಮನಸ್ಸನ್ನು, ಕೂವಿಕ್ಕೊಣ್ಡು கூவிக்கொண்டு = ಆಕರ್ಷಿಸಿ, ಸ್ವಾಧೀನ ಪಡಿಸಿಕೊಂಡು, ಶೇಣುಯರ್ சேண் உயர் = ಅತ್ಯಂತ ಎತ್ತರದ (ಎಟುಕಲಾರದ ಎತ್ತರದ), ವಾನತ್ತು ಇರುಕ್ಕುಮ್ வானத்து இருக்கும் = ಪರಮಪದದಲ್ಲಿರುವ, ತೇವಪಿರಾನ್ ತನ್ನೈ தேவபிரான் தன்னை = ~~[illegible]~~ ದೇವದೇವನನ್ನು, ಆಣೈ ஆணை = ಆಣೆ ಮಾಡಿ ಹೇಳುತ್ತೇನೆ (ನಿನಗೆ ನಿರ್ಧಾರವಾಗಿ ಹೇಳುತ್ತೇನೆ), ಎನ್ ತೋೞೀ என் தோழீ = ನನ್ನ ಗೆಳತಿ, ಉಲಗುದೋಱು உலகுதோறு = ಲೋಕದಲ್ಲೆಲ್ಲಾ, ಅಲರ್ ತೂಱ್ಱಿ அலர் தூற்றி = ಪ್ರೇಮಾಪವಾದಗಳನ್ನು ಹರಡಿ (ಚೆಲ್ಲಿ), ಆಮ್ ஆம் = ಸಾಧ್ಯವಾದಷ್ಟು, ಕೋಣೈಗಳ್ ಶೆಯ್ದು கோணைகள் செய்து = ಕುಚೇಷ್ಟೆಗಳನ್ನು ಮಾಡಿ, ಕುದಿರಿಯಾಯ್ குதிரியாய் = ಮಾನಬಿಟ್ಟವಳಾಗಿ, ~~[illegible]~~ ಮಡಲೂರ್ದುಮೇ மடலூர்துமே = ಪ್ರೇಮಭಂಗವನ್ನು ಅನುಭವಿಸುವುದೇ.

ನಾಚಿಕೆಯನ್ನೂ ಮಾನಮರ್ಯಾದೆಯನ್ನೂ ಕಸಿದುಕೊಂಡು, ನನ್ನ ಒಳ್ಳೆಯ ಮನಸ್ಸನ್ನು ಆಕರ್ಷಿಸಿ, ಸ್ವಾಧೀನ ಪಡಿಸಿಕೊಂಡು, ಎಟುಕಲಾರದ ಎತ್ತರದ ಪರಮಪದದಲ್ಲಿರುವ ದೇವದೇವನನ್ನು, ಆಣೆ ಮಾಡಿ ಹೇಳುತ್ತೇನೆ ಗೆಳತಿ, ಲೋಕದಲ್ಲೆಲ್ಲಾ ಪ್ರೇಮಾಪವಾದವನ್ನು ಹರಡಿ, ಸಾಧ್ಯವಾದಷ್ಟು ಕುಚೇಷ್ಟೆಗಳನ್ನು ಮಾಡಿ, ಮಾನಬಿಟ್ಟವಳಾಗಿ, ನನ್ನ ಪ್ರೇಮಭಂಗವನ್ನು ಅನುಭವಿಸುತ್ತೇನೆ. (9)

ತನ್ನ ಪ್ರಿಯತಮನಾದ ಭಗವಂತನನ್ನು ಪರಿಪೂರ್ಣವಾಗಿ ನಚ್ಚಿಕೊಂಡಿದ್ದ ಸ್ತ್ರೀ, ಅವನು ಅವಳನ್ನು ಕಡೆಗಣಿಸಬಹುದೇ? ಹಾಗೆ ಉಪೇಕ್ಷಿಸಿದರೆ, ತನಗುಂಟಾಗುವ ಅಪಮಾನದ ಭಯದಲ್ಲಿ, ತೀವ್ರವಾದ ಕೋಪದಲ್ಲಿ ತಾನೇನು ಮಾಡಬಯಸುವಳೆಂಬುದನ್ನು, ಹೇಗೆ ಅವನ ಮೇಲೆ ಸೇಡು ತೀರಿಸಿಕೊಳ್ಳುತ್ತಾಳೆಂಬುದನ್ನು ನಾಯಿಕೆ ಇಲ್ಲಿ ಬಹಿರಂಗ ಪಡಿಸುತ್ತಾಳೆ.

"ನಾಣಾಮುಮ್ ನಿಱ್ಱೈಯುಮ್ ಕವರ್ನ್ದು" — ಸ್ತ್ರೀ ಸಹಜವಾದ ಗುಣಗಳು ಸಾಧ್ವಿಯಾದವಳಿಗೆ ಎರಡು ಲಜ್ಜೆ (ನಾಚಿಕೆ), ಮಾನಮರ್ಯಾದೆಗಳು. ಇವು ಮುಖ್ಯ ಅವಳು. ಯಾವ ವಿಷಯದಲ್ಲೂ ನಡೆದುಕೊಳ್ಳುವಂತೆ ಅಡಗಿರುವುದು ನಾಯಕಿ ತನ್ನ ನಲ್ಲನನ್ನು ಧ್ಯಾನಿಸುವ ಭರದಲ್ಲಿ, ಸಹಜವಾಗಿ ನಡೆದುಕೊಳ್ಳದೆ ಹೋದ್ದರಿಂದ, ಅವಳು ಜನರ ಬಾಯಿಗೆ ಬಿದ್ದಳು ಅವಮಾನವನ್ನೊಂದಳು ತನ್ನ ಉತ್ತಮ ಗುಣಗಳನ್ನು ಕಳೆದುಕೊಂಡಳು. ಇದಕ್ಕೆಲ್ಲಾ ಕಾರಣ ತನ್ನ ಪ್ರಿಯತಮನೇ ಅವನೇ ತನ್ನ ಗುಣಗಳನ್ನು ಸೂರೆಗೊಂಡವನು

"ಎನ್ನೈ ನಲ್ ನೆಂಜಮ್ ಕೊಂಡಿ ಕೊಣ್ಡು" — ನನ್ನ ಶುದ್ಧವಾದ ಮನಸ್ಸಿನಲ್ಲಿ ಬೇರಾವ ಚಿಂತನೆಗೂ ಎಡೆಕೊಡದಂತೆ ಅದನ್ನು ಸಂಪೂರ್ಣವಾಗಿ ಸ್ವಾಧೀನ ಪಡಿಸಿಕೊಂಡಿದ್ದಾನೆ (ಭಗವಂತನು ಶುದ್ಧವಾದ ಮನಸ್ಸನ್ನೇ ಆಶಿಸುವುದು)

"ಕೋಣಾಯಿರ್ ವಾನತ್ತಿರುಕ್ಕುಮ್ ದೇವಪ್ಪಿರಾನ್" — ಯಾರಿಗೂ ಸುಲಭವಾಗಿ ಎಟುಕದ ಅತ್ಯಂತ ಉನ್ನತಸ್ಥಳವಾದ ಪರಮಪದದಲ್ಲಿ ವಾಸಿಸುವವನು ಆ ದೇವದೇವನು.

ಮುದಲೂ ಕಶು ಮೇ'

"ಉಲಪ್ಪಿಲಲರ್ ಕೊಟ್ರು" — ನನ್ನನ್ನು ವಂಚಿಸಿದ ನನ್ನ ಪ್ರಿಯತಮನ ಮೇಲೆ ಪ್ರೇಮಾತಿರೇಕವಾದವನ್ನು ತೋರಿಸಿ, ನನಗೆ ಸಾಧ್ಯವಾದಷ್ಟು ಕುಚೋದ್ಯದ ಮಾತುಗಳನ್ನು ಆಡಿದು, ಅವನನ್ನು ಹಳಿದು, ಮಾನಗೆಟ್ಟ ಹೆಂಗಸಿನಂತೆ, ಲೋಕದಲ್ಲೆಲ್ಲಾ ಅಲೆದಾಡಿ, ನನ್ನ ಕಿಚ್ಚನ್ನು ತೀರಿಸಿಕೊಳ್ಳುತ್ತೇನೆ.

ನಾಯಕಿ ಹೇಳುತ್ತಾಳೆ: ಗೆಳತಿ, ನನ್ನ ~~ಕೊನೆಯ~~ ನಿರ್ಧಾರವನ್ನು ಕೇಳು. ಆಣೆ ಮಾಡಿ ಹೇಳುತ್ತೇನೆ. ಅತ್ಯಂತ ಉನ್ನತವಾದ ಪರಮಪದದಲ್ಲಿ ನೆಲಸಿರುವ ಸರ್ವೇಶ್ವರ (ದೇವದೇವ) ನೆನಿಸಿಕೊಂಡ ಅವನು ನನ್ನ ಲಜ್ಜೆಯನ್ನು ಮರ್ಯಾದೆಯನ್ನು (ಸಾಧ್ವೀತ್ವವನ್ನು) ಅಪಹರಿಸಿದ್ದಾನೆ. ನನ್ನ ಶುದ್ಧವಾದ ಮನಸ್ಸನ್ನು ತನ್ನ ಸ್ವಾಧೀನ ಪಡಿಸಿಕೊಂಡಿದ್ದಾನೆ. ನನ್ನನ್ನು ವಂಚಿಸಿದನಾದರೋ, ಅವನನ್ನು ಕುರಿತು ಪ್ರೇಮಾತಿರೇಕವಾದವನ್ನು ತೋರಿಸಿ, ಸಾಧ್ಯವಾದಷ್ಟು ಕುಚೋದ್ಯದ ಮಾತುಗಳನ್ನು ಆಡಿದು, ಮಾನಗೆಟ್ಟ ಹೆಂಗಸಿನಂತೆ ಲೋಕದಲ್ಲೆಲ್ಲಾ ಅಲೆದಾಡಿ, ಅವನನ್ನು ಹಳಿದು, ನನ್ನ ಮನಃಕ್ಲೇಶವನ್ನು ತೀರಿಸಿಕೊಳ್ಳುತ್ತೇನೆ.

10. யாமடலூர்ந்தும் எம்மாழியங்கைப்பிரானுடை,
தூமலர் தண்ணந்துழாய் மலர்கொண்டு சூடுவோம்,
யாமடமின்றித் தெருவுதோறயலைதையலார்,
நாணுங்கொப்பழி தூற்றி நாடுமிரைக்கவே.

ಯಾಮದುಲೂರ್ ಸ್ದುಮಾ ಎಮ್ಮಾಲೆಯಿಜ್ಞೈ ಪ್ಪಿರಾನುದ್ಯೆ,
ಶೂಮಲರ್ ಕಣ್ಣಾನು ಲೂಯಿಸ್ ಮಲರ್ ಕೆಣ್ಣಾ ಡುವ್ವೋಳವು,
ಯಾಮದ ಮಿನ್ನಲಾ ಕ್ತೈಹುವ್ವುದ್ದೋಳಯಿಯಲ್ ಕ್ತೈಯಲಾರ್,
ನಾಮ್ವಡ್ಗ್ಜ್ಞಾಪ್ಪಿಲು ಕೂಟ್ರ ನಾಡುಮಿರ್ಕ್ಕ ಕ್ಕವೇ.

ಯಾಮವು ಯಾಂ = ನಾವು, ಮದಲೂರ್ ಸ್ದುಮಾ ಮಡಲ್ಲಾರ್ನ್ದುಮ್ = ತ್ರೀಮಭ್ಯಂಗ ವನ್ನು ಸ್ವೀಕರಿಸಿಯೂ, ಎಮ್ ತಾಂ = ನಮ್ಮ, ಆಲೆ ಪ್ಪಿ = ಚಕ್ರಾಯುಧಧಾರಿಯಾದ (ಒಡೆಯ), ಅಮ್ ಅಂ = ಸುಂದರವಾದ, ಕ್ತೈ ಹಾಕು = ಕೈಯುಳ್ಳ, ಪಿರಾನುದ್ಯೆ ಪಿರಾನುಡೈ = ಸ್ವಾಮಿಯ, ಶೂ ಮಲರ್ ತ್ತಾ ಮರೈ = ಸುಂದರವಾದ, ಅಮ್ ಅಂ = ಸುಂದರವಾದ, ವಿಕಸಿತವಾದ ಹೂಗಳ, ಕಣ್ ತ್ತ ಣ್ = ಕೆಂಪಾದ, ಅಮ್ ಅಂ = ಸುಂದರವಾದ, ಮಲರ್ ಕೆಣ್ಣಾ ಮಲರ್ ಕಣ್ಣಾಲು ಕಲಶಿಯ ತ್ತುಟ್ಟ = ಕುಲಶಿಯ, ಮಲರ್ ಕೆಣ್ಣಾ ಮಲರ್ ಮಡಮ್ ಇನ್ನಲೆ ಮಡಮ್ ಹಾರವನ್ನು ಪಡೆದು, ಯಾಮವು ಯಾಂ = ನಾವು, ಮಡಮ್ ಇನ್ನಲೆ ಮಡಮ್ ಹಾರವನ್ನು ಪಡೆದು, ಕೇಳ್ವುದ್ದೋಳು ಅತ್ತಾರು ತೀರಾಗಿ = ತ್ರೀಜಡಜ ಸ್ವಭಾವ ಮಲ್ಲದಂತೆ, ಕೇಳ್ವುದ್ದೋಳು ಅತ್ತಾರು ತೋಳ್ = ಬಾಹುಗಳ ಉದ್ದಕ್ಕೂ, ಅಯಿಲ್ ಕ್ತೈಯಲಾರ್ ಅಯಿಲ್ ಕ್ತೈಯ ಲಾರ್ = ಅವಂತಿಕರ ದೇವುಗಳಾಗಿ, ನಾ ನ್ಗಾ = ನಾಲಗೆ, ಮದಡ್ಗ್ಜ್ಞಾ ಮಡಗ್ಗ ಲಾರ್ ಅವಂತಿಕರ ದೇವುಗಳಾಗಿ, ನಾ ನ್ಗಾ = ನಿಂದೆಯನ್ನು ಕಾ = ಎದೆಬಡದಂತೆ ಪ್ಪಿಲು ಕೂಟ್ರ ಪ್ಪಿ ತ್ತಾರ್ರಿ = ದೇಶವೆಲ್ಲಾ, ಇತ್ತ (ಅಪವಾದವನ್ನು) ದರದುತ್ತಾ, (ಅದು) ನಾಡುಮ್ ನಾಡುಂ = ತುಂಬಿ ಹೋಗುವಂತೆಯೇ ಕ್ಕವೇ ತಿರಾ ಕಕ ಬೇ = ತುಂಬಿಹೋಗುವಂತೆಯೇ

ನಾವು ತ್ರೀಜಡಜವಾದ ಸ್ವಭಾವವನ್ನು ಬಿಟ್ಟು, ಬಾಹುಗಳ ಉದ್ದಕ್ಕೂ ಅವಂತಿಕರ ದೇವುಗಳಂತೆ, ನಾಲಗೆ ಎದೆಬಡದಂತೆ ನಿಂದೆಯನ್ನು ದರದುತ್ತಾ, ಅದು ದೇಶವೆಲ್ಲಾ ತುಂಬಿ ಹೋಗುವಂತೆ ಪ್ರೇಮಭ್ಯಂಗವನ್ನು ಅನುಭವಿಸಿಯಾದರೂ, ಚಕ್ರಾಯುಧವನ್ನು ಸುಂದರವಾದ ಕೈಯುಳ್ಳ ಒಡೆಯ ವನ್ನ ಸ್ವಾಮಿಯ ವಿಕಸಿತವಾದ ಹೂಗಳ ಕೆಂಪಾದ ನಿಂಗನಾದ ಕುಲಸಿಯ ಹಾರವನ್ನು ಪಡೆಯುತ್ತೇವೆ. (10)

ಭಗವಂತನ ನೈದಾಯಗುಣವನ್ನು ಇಲ್ಲಿ ಕೀರ್ತಿಸಲಾಗುತ್ತಿದೆ

ಭಗವಂತನ ಪ್ರೇಮಭ್ಯಂಗವಾಯಿತೆಂದು ನಾಯಕಿ ಹೇಳುತ್ತಾಳೆ: ಗೆಳತಿ, ನಮಗೆ ಪ್ರೇಮಭ್ಯಂಗವಾಯಿತೆಂದು ಮರೆಯುತ್ತ ದುಮ್ಮಾನದವೇ? ಅಕ್ಕೂ, ಗೆಳತಿ ದವೇ? ತ್ರೀಜಡಜವಾದ ಮಾನ ಮಯಾದೆಗಳನ್ನು ಬಿಡೋಣ. ಅವಂತಿಕರ ದೇವುಗಳ ದಾರಿ, ಬಾಹುಗಳ ಆಲೋಚನೆಗಳನ್ನು ಬಿಡುತ್ತಾ, ಅವಂತಿಕರ ದೇವುಗಳದಾರಿ ಎದೆಕೊಡದಂತೆ ಚಕ್ರಾಯುಧಧಾರಿಯ ನಮ್ಮನ್ನು ತುತ್ತಾ, ನಮ್ಮ ನಾಲಗೆಗೆ ಎಟಕದಷ್ಟು ಬಂದದ್ದನ್ನು ಬಾಯಿಗೆ ಬಂದಹಾಗೆ ದೂಷಿಸುತ್ತಲೂ, ಬಾಹುಗಳ ನಾವುಯನ್ನು ದೇಶದ ಎಲ್ಲೆಲ್ಲಿಯೂ ತುಂಬಿಹೋಗುವಂತೆ ಅವನ ಉದ್ದಕ್ಕೂ ಮತ್ತು ದೇಶದ ಎಲ್ಲೆಲ್ಲಿಯೂ ತುಂಬಿಹೋಗುವಂತೆ ಅವನ ಆಕ್ಷಯವನ್ನು ಘೋಷಿಸುತ್ತಲೂ ಅಲೆದಾಡಿದರೂ, ಅವನು ಧರಿಸಿರುವ ಕೆಂಪಾದ ಕುಲಸಿಯ ಹಾರವನ್ನು ಅವನಿಂದ ಪಡೆದುಕೊಳ್ಳುತ್ತೇವೆ

ಭಗವಂತನನ್ನು ಬಿಡುವಾನಂದ ದೂಷಿಸಬೇಕು. ಅದು ಕೆಟ್ಟದ್ದು

ಅದು ಅವನ ಸಮ್ಮಾನವಾದದ್ದು. ಇಲ್ಲದೇ, ನಿಂದಾಸ್ತುತಿಯೂ ಆಗಬಹುದು. ಅದು ಯಾವುದೇ ಆಗಲಿ ಅವನ ಹೃದಯಾಂತರಂಗದಿಂದ ಬರುವುದು ಔದಾರ್ಯದಿಂದ ಕೂಡಿದ ಪೂರ್ಣ ವಾತ್ಸಲ್ಯವೇ.

11 இரைக்கும் கருங்கடல் வண்ணன் கண்ணபிரான் தன்னை,
விரைக்கொள் பொழில் குருகூர்ச் சடகோபன் சொன்ன,
நிரைக்கொளந்தாதி ஓராயிரத்துளிப்பத்தும்,
உரைக்கவல்லார்க்கு வைகுந்தமாகும் தம்மூரெல்லாம்.

ಇರೈಕ್ಕುಮ್ ಕರುಙ್ಗಡಲ್ ವಣ್ಣನ್ ಕಣ್ಣಪಿರಾನ್ ತನ್ನೈ,
ವಿರೈಕ್ಕೊಳ್ ಪೊழಿಲ್ ಕುರುಹೂರ್ಚ್ಚಡಗೋಪನ್ ಶೊನ್ನ,
ನಿರೈಕ್ಕೊಳನ್ದಾದಿ ಓರಾಯಿರತ್ತುಳಿಪ್ಪತ್ತುಮ್,
ಉರೈಕ್ಕವಲ್ಲಾರ್ಕ್ಕು ವೈಕುನ್ದಮಾಗುಮ್ ತಮ್ಮೂರೆಲ್ಲಾಮ್.

ಇರೈಕ್ಕುಮ್ இரைக்கும் = ಘೋಷಿಸುವ, ಕರು ಕಡಲ್ ವಣ್ಣನ್ கரு கடல் வண்ணன் = ಕಪ್ಪನೆಯ ಕಡಲವರ್ಣನಾದ, ಕಣ್ಣಪಿರಾನ್ ತನ್ನೈ கண்ணபிரான் தன்னை = ಅಚ್ಯುತನಾದ ಸ್ವಾಮಿಯನ್ನು ಕುರಿತು, ವಿರೈಕ್ಕೊಳ್ விரைக்கொள் = ಪರಿಮಳಭರಿತವಾದ, ಪೊழಿಲ್ பொழில் = ಉಪವನಗಳ, ಕುರುಹೂರ್ குருகூர் = ತಿರುಕ್ಕುರುಹೂರಿನ, ಶಡಗೋಪನ್ ಶೊನ್ನ சடகோபன் சொன்ன = ಶಠಗೋಪನು (ನಮ್ಮಾಳ್ವಾರರು) ಹೇಳಿದ, ನಿರೈಕ್ಕೊಳ್ நிரைக்கொள் = ಕ್ರಮವಾಗಿರುವ, ಅನ್ದಾದಿ அந்தாதி = ಅಂತಾದಿಯ, ಓರ್ ಆಯಿರತ್ತುಳ್ ஓர் ஆயிரத்துள் = ಒಂದು ಸಾವಿರ ಪಾಶುರಗಳಲ್ಲಿ, ಇಪ್ಪತ್ತುಮ್ இப்பத்தும் = ಈ ಪತ್ತನ್ನು, ಉರೈಕ್ಕವಲ್ಲಾರ್ಕ್ಕು உரைக்கவல்லார்க்கு = ಕಲಿತು ಹೇಳಬಲ್ಲವರಿಗೆ, ವೈಕುನ್ದಮ್ ಆಗುಮ್ வைகுந்தம் ஆகும் = ವೈಕುಂಠವಾಗುತ್ತದೆ, ತಮ್ ಊರ್ ಎಲ್ಲಾಮ್ தம் ஊர் எல்லாம் = ತಮ್ಮ ಊರುಗಳೆಲ್ಲವೂ

ಘೋಷಿಸುವ ಕಪ್ಪನೆಯ ಕಡಲವರ್ಣನಾದ ಅಚ್ಯುತನಾದ ಸ್ವಾಮಿಯನ್ನು ಕುರಿತು ಪರಿಮಳ ತುಂಬಿದ ಉಪವನಗಳ ತಿರುಕ್ಕುರುಹೂರಿನ ಶಠಗೋಪನು (ನಮ್ಮಾಳ್ವಾರರು) ಹೇಳಿದ ಕ್ರಮವಾದ ಅಂತಾದಿಯ ಒಂದು ಸಾವಿರ ಪಾಶುರಗಳಲ್ಲಿ ಈ ಪತ್ತನ್ನು ಕಲಿತು ಹೇಳಬಲ್ಲವರಿಗೆ ತಮ್ಮ ಊರುಗಳೆಲ್ಲವೂ ವೈಕುಂಠವೇ ಆಗುತ್ತದೆ (11)

ಈ ತಿರುವಾಯ್ಮೊಳಿಯ ಕಡೆಯ ಪಾಶುರ ಇದು. ನಾಂದಾಶೀರ್ವಾದ

ದಿಂದ ಸ್ವಲ್ಪ ಸರಿದರೂ, ಅದು ಅವರನ್ನ 'ಎಚ್ಚರಿಕೆ' ಮಾಡಿಸುತ್ತದೆ. ಸಂಸಾರಿಗಳಿಗೆ ಅದು ಒಗ್ಗುವುದಿಲ್ಲ. ಪ್ರಾಕೃತದ ನ್ಯಾಯಂ ನಡೆಯುವ ಮಾರ್ಗ ಪ್ರಾಪಂಚಿಕರ ಪಾಡಲ್ಲ. ಭಗವಂತನಲ್ಲಿ ಅತೀವ ವ್ಯಾಮೋಹದಿಂದ, ಅವನಿಗಾಗಿ ಕಾತರಿಸುತ್ತ, ಅವನ ದಿವ್ಯನಾಮಗಳನ್ನು ಹಾಡುತ್ತ, ಅವನ ಗುಣಸ್ವಭಾವಗಳನ್ನು ಕೀರ್ತಿಸುತ್ತ ಆಡಿ ಹಾಡುತ್ತಿರುವ ಶುದ್ಧ ಮನಸ್ಸಿನ, ಶುದ್ಧ ಚರಿತ್ರರಾದ ಅವರನ್ನು ಲೋಕದ ಜನ ನಾನಾ ರೀತಿಯಲ್ಲಿ ದೂರುತ್ತಾರೆ. ಮಾನಸಿಕವಾಗಿ ಹಿಂಸಿಸಲು ಯತ್ನಿಸುತ್ತಾರೆ. ಅವರದು ದೃಢವಾದ ಮನಸ್ಸು, ದೃಢವಾದ ಭಕ್ತಿ.

ಮನುಷ್ಯರಂತೆ ಅಲ್ಲ ಭಗವಂತ. ಅವನು ಪರಮ ಉದಾರಿ, ಕರುಣಾಳು, ಸರ್ವಜ್ಞ, ಸರ್ವಶಕ್ತ. ತನ್ನನ್ನು ಒಮ್ಮನದಿಂದ ನಂಬಿದವರ ಕೈಬಿಡುವುದಿಲ್ಲ. ತನ್ನನ್ನು ಬಿಡದೆ ಭಜಿಸುವವರನ್ನು ತಪ್ಪದೆ ಉದ್ಧರಿಸುತ್ತಾನೆ.

ಸಂಸಾರಿಗಳ (ಪ್ರಾಪಂಚಿಕರ) ಉದ್ಧಾರಕ್ಕಾಗಿಯೇ ಅಲೆಗಳು ತುಂಬಿದ ಕಡಲವಣ್ಣನೂ ಅತ್ಯಾಶ್ಚರ್ಯ ಸುಂದರನೂ ಆದ ದೇವೇಶ್ವರನನ್ನು ಹೊಗಳುತ್ತ, ಅದನ್ನೇ ಕುರಿತು ಸರಳವಾದ ರೀತಿಯಲ್ಲಿ, ಎಲ್ಲರಿಗೂ ಅರ್ಥವಾಗುವಂತೆ ಹಾಡುಗಳನ್ನು ರಚಿಸಿ, ಹಾಡಿ, ಆನಂದಿಸಿದವನು, ಮಧುವಲ್ಲರಿ ತುಂಬಿದ ಉಪವನಗಳಿಂದ ಸುತ್ತುವರಿದ ಪ್ರಕೃತಿಸುಂದರವಾದ ತಿರುಕ್ಕುರುಕೂರು ಕ್ಷೇತ್ರ ನಿವಾಸಿಯಾದ ಶಠಕೋಪನೆನಿಸುವನು (ನಮ್ಮಾಳ್ವಾರರು) ಆತ ಬರೆದಿರುವ ಒಂದು ಸಾವಿರ ಪಾಶುರಗಳು ಬಹುರಮ್ಯವಾದ ಅಂತಾದಿಯ ಕಟ್ಟುಪಾಡಿನಲ್ಲಿ ಆಗಿವೆ. ಅವುಗಳಲ್ಲಿ ಈ ತಿರುವಾಯ್ ಮೊಳಿಯ ಹತ್ತು ಪಾಶುರಗಳನ್ನು ಚೆನ್ನಾಗಿ ಕಲಿತು, ಬಿಡದೆ ಹೇಳುತ್ತಿರುವವರಿಗೆ ಅವರು ವಾಸಿಸುವ ಊರುಗಳೇ ಅವರಿಗೆ ಪರಮಪದವಾಗಿ ಪರಿಣಮಿಸುತ್ತದೆ. ಪರಮಪದದ ಪೂರ್ಣಾನಂದವು ತಪ್ಪದೆ ಲಭಿಸುತ್ತದೆ. 10-10-84

ಇದೇ ತಿರುವಾಯ್ ಮೊಳಿಯ ಫಲಶ್ರುತಿ.

— o —

10.10.84

ತಿರುವಾಯ್ಮೊೞಿ - ಐದನೆಯ ದಶಕ - ನಾಲ್ಕನೆಯ ತಿರುವಾಯ್ಮೊೞಿ.

திருவாய்மொழி - ஐந்தாம்பத்து - நான்காந்திருவாய்மொழி

ಊರೆಲ್ಲಾಮ್ ತುಂಜಿ - ஊரெல்லாம் துஞ்சி

1. ஊரெல்லாம் துஞ்சி உலகெல்லாம் நள்ளிருளாய்,
நீரெல்லாம் தேறி ஓர் நீளிரவாய் நீண்டதால்,
பாரெல்லாமுண்ட நம் பாம்பணையான் வாரானால்,
ஆரெல்லே! வல்வினையேன் ஆவிகாப்பாரினியே

ಊರೆಲ್ಲಾಮ್ ತುಂಜಿ ಉಲಗೆಲ್ಲಾಮ್ ನಳ್ಳಿರುಳಾಯ್
ನೀರೆಲ್ಲಾಮ್ ತೇಱಿ ಓರ್ ನೀಳಿರವಾಯ್ ನೀಣ್ಡದಾಲ್,
ಪಾರೆಲ್ಲಾಮುಣ್ಡ ನಮ್ ಪಾಮ್ಬಣೈಯಾನ್ ವಾರಾನಾಲ್,
ಆರೆಲ್ಲೇ! ವಲ್ವಿನೈಯೇನ್ ಆವಿಕಾಪ್ಪಾರಿನಿಯೇ.

ಊರ್ ಎಲ್ಲಾಮ್ ஊர் எல்லாம் ಊರು ಎಲ್ಲವೂ, ತುಂಜಿ துஞ்சி = ನಿದ್ರಿಸಿ, ಉಲಗು ಎಲ್ಲಾಮ್ உலகு எல்லாம் = ಲೋಕವೆಲ್ಲವೂ, ನಳ್ ಇರುಳ್ ಆಯ್ நள் இருள் ஆய் = ಕಗ್ಗತ್ತಲೆಯಾಗಿ, ನೀರ್ ಎಲ್ಲಾಮ್ நீர் எல்லாம் = ನೀರಿನ ಪ್ರದೇಶವೆಲ್ಲವೂ, ತೇಱಿ தேறி = ತಿಳಿಗೊಂಡು, (ತಿಳಿಯಾಗಿ), ಓರ್ ஓர் = ಅಪಾರವಾದ ಒಂದು, ನೀಳ್ ಇರವು ಆಯ್ நீள் இரவு ஆய் = ದೀರ್ಘರಾತ್ರಿಯಾಗಿ, ನೀಣ್ಡದು நீண்டது = (ಅದಾಗಿ) ದೀರ್ಘವಾಗುತ್ತಿದೆ, ಆಲ್ ஆல் = ಅಯ್ಯೋ, ಪಾರ್ ಎಲ್ಲಾಮ್ பார்எல்லாம் ಭೂಮಿಯನ್ನೆಲ್ಲಾ ಉಣ್ಡ உண்ட = ಉಂಡವನಾದ, ನಮ್ ನம் = ನಮ್ಮ, ಪಾಮ್ಬು ಅಣೈಯಾನ್ பாம்பு அணையான் = ಹಾವಿನ ಹಾಸಿಗೆಯವನು, ವಾರಾನ್ வாரான் = ಬಾರನು, ಆಲ್ ஆல் = ಅಯ್ಯೋ, ಆರ್ ಎಲ್ಲೇ ஆர் எல்லே = ಯಾರಿದ್ದಾರೆಯೋ (ಗೆಳತಿ), ವಲ್ವಿನೈಯೇನ್ வல்வினையேன் = ಕಡುಪಾಪಿಯಾದ ನನ್ನ, ಆವಿ ஆவி = ಪ್ರಾಣವನ್ನು, (ಆತ್ಮವನ್ನು), ಕಾಪ್ಪಾರ್ காப்பார் = ರಕ್ಷಿಸುವವರು, ಇನಿಯೇ இனியே = ಇನ್ನುಮೇಲೆ.

ಊರೆಲ್ಲವೂ ನಿದ್ರಿಸಿ, ಲೋಕವೆಲ್ಲವೂ ಕಗ್ಗತ್ತಲೆಯಾಗಿ, ನೀರಿನ ಪ್ರದೇಶವೆಲ್ಲವೂ ತಿಳಿಯಾಗಿ, ಅಪಾರವಾದ ಒಂದು ದೀರ್ಘರಾತ್ರಿಯಾಗಿ, ಅದು ದೀರ್ಘವಾಗುತ್ತಿದೆ (ಬೆಳೆಯುತ್ತಿದೆ). ಭೂಮಿಯನ್ನೆಲ್ಲಾ ಉಂಡವನಾದ ನಮ್ಮ ಹಾವಿನ ಹಾಸಿಗೆಯುಳ್ಳವನು ಬಾರನಲ್ಲ, ಅಯ್ಯೋ! ಕಡುಪಾಪಿ

ಯಾದ ನನ್ನ ಆಶ್ರಮವನ್ನು ರಕ್ಷಿಸುವವರು ಇನ್ನು ಯಾರಿದ್ದಾರೆ? (1)

ಆಳ್ವಾರರು ಇಲ್ಲಿಯೂ 'ನಾಯಕಿ' ಯಾಗಿಯೇ ಇದ್ದಾರೆ. ವಿರಹ ವೇದನೆಯಿಂದ ತಪಿಸುತ್ತಿರುವ ಅವರು ಒಂಟಿಯಾಗಿ ರಾತ್ರಿಯನ್ನು ಕಳೆಯುತ್ತಾ ಹೇಳಿಕೊಂಡು ದುಃಖಿಸುತ್ತಾರೆ.

"ವಾರ್ಕಡಲುಮ್ ನವಮ ವಿಸುಂಬುಮ್ ಯಾನ್ ..." — ಇಲ್ಲಿ ಎರಡು ಬೇರೆ ಬೇರೆ ವಿಷಯಗಳನ್ನು ಹೋಲಿಸಲಾಗಿದೆ. ಮೊದಲನೆಯದು ಪ್ರಳಯ ಕಾಲದಲ್ಲಿ ಭಗವಂತನು ಹೇಗೆ ದಿವ್ಯರಕ್ಷಕನಾಗಿರುತ್ತಾನೆ ಎಂಬುದು. ಎರಡನೆಯದು ಪಾಲ್ಗಡಲಲ್ಲಿ ಅವನು ಶೇಷಶಯನನಾಗಿ ವಿವಿಧ ಜಗದ್ರಕ್ಷಣೆಯನ್ನು ಕುರಿತು ಯೋಚಿಸುತ್ತಾ ಯೋಗನಿದ್ರೆಯಲ್ಲಿರುವುದು.

ಪ್ರಳಯ ಬಂದಾಗ, ಭಗವಂತ ಲೋಕವನ್ನೇ ಇಡಿಯಾಗಿ ನುಂಗಿ, ಅದರ ಎಲ್ಲಾ ಜೀವರಾಶಿಯನ್ನು ತನ್ನ ಹೊಟ್ಟೆಯಲ್ಲಿಟ್ಟು ರಕ್ಷಿಸಿ ತನ್ನ ಮಹಿಮೆಯಿಂದ ರಕ್ಷಣೆಯ ಕಾರ್ಯವನ್ನು ಭಗವಂತ. ಎರಡನೆಯದಲ್ಲಿ, ಅವನು ತನ್ನ ರಕ್ಷಣೆಯ ಕಾರ್ಯವನ್ನು ತನ್ನದೇ ನಿರ್ವಹಿಸುತ್ತಾನೆ. ಪಾಲ್ಗಡಲಲ್ಲಿ ಅವನು ಶೇಷಶಯನನಾಗಿ ಯೋಗನಿದ್ರೆಯಲ್ಲಿದ್ದರೂ, ಪ್ರತಿಯೊಬ್ಬ ಜೀವಿಯ ರಕ್ಷಣೆಯನ್ನು ಕುರಿತು ಚಿಂತಿಸುತ್ತಿರುತ್ತಾನೆ. ರಕ್ಷಣೆಯ ಹೊಣೆ ಹೊತ್ತಿರುವವನೇ ಭಗವಂತ.

ನಾಯಕಿ ಹೇಳುತ್ತಾಳೆ: ಹಗಲು ಕಳೆದು ಕತ್ತಲು ಆವರಿಸಿತು. ಊರಿಗೆ ಊರೇ ನಿದ್ರಿಸುತ್ತಿದೆ. ವಿಲಕ್ಷಣವಾದ ರಾತ್ರಿ ಬೆಳೆಯುತ್ತಿದೆ. ಅತಿದೀರ್ಘವಾದದ್ದು ಅದು ಎಂದು ಕೊನೆ ಬರುತ್ತದೆ. ನಾನು ಒಂಟಿ. ನನಗೆ ಜೊತೆಗಾರನಾದ ನನ್ನ ಪ್ರಿಯತಮನು ಬರಲಿಲ್ಲವಲ್ಲ! ಪ್ರಳಯಕಾಲದಲ್ಲಿ ಭೂಮಿಯ ಕೆಳಗಿನ ಮೇಲಿನ ಎಲ್ಲಾ ಜೀವರಾಶಿಯನ್ನು ತನ್ನ ಹೊಟ್ಟೆಯಲ್ಲಿಟ್ಟು ರಕ್ಷಿಸುವವನು, ಪಾಲ್ಗಡಲಲ್ಲಿ ಹಾವಿನ ಹಾಸಿಗೆಯಲ್ಲಿ ಮಲಗಿ, ನಟಿಸುತ್ತಿದ್ದರೂ, ತನ್ನ ರಕ್ಷಣೆಯ ಕಾರ್ಯವನ್ನು ಮರೆಯದವನು ಆದ ನನ್ನ ಪ್ರಿಯತಮನು ~~ಇನ್ನು~~ ~~ನ~~ ನನ್ನ ರಕ್ಷಣೆಗೆ ಇನ್ನು ಬರಲಿಲ್ಲವಾಗಿ, ನನ್ನನ್ನು ರಕ್ಷಿಸುವವರು ಇನ್ನು ಯಾರಿದ್ದಾರೆ?

ಭಗವಂತನೊಬ್ಬನೇ, ಎಲ್ಲರಿಗೂ ಎಲ್ಲಕಾಲಕ್ಕೂ ರಕ್ಷಕ. ಅವನನ್ನು ನಂಬಿ ಅವನನ್ನು ಪ್ರಿಯಪಡುವವರನ್ನು ~~ಎಂದಾದರೂ~~ ಕೈಬಿಡುವನೇ?

2\. ஆவிகாப்பாரினி யாரே? ஆழ்கடல் மண்விண் மூடி,

மாவிகாரமாய் ஓர் வல்லிரவாய் நீண்ட தால்,

காவிசேர் வண்ணன் என் கண்ணனும் வாரானால்,

பாவியேன் நெஞ்சமே! நீயும் பாங்கல்லையே.

ಆವಿ ಕಾಪ್ಪಾರಿನಿಯಾರ್? ಆಲೀ ಕಡಲ್ ಮಣ್ ವಿಣ್ ಮೂಡಿ,
ಮಾವಿಕಾರಮಾಯ್ ಓರ್ ವಲ್ಲಿರವಾಯ್ ನೀಣ್ಡದಾಲ್,
ಕಾವಿ ಶೇರ್ ವಣ್ಣನ್ ಎನ್ ಕಣ್ಣನುಮ್ ವಾರಾನಾಲ್,
ಪಾವಿಯೇನ್ ನೆಂಜಮೇ! ನೀಯುಮ್ ಪಾಙ್ಗಲ್ಲೈಯೇ.

ಆವಿ ஆவி = ಪ್ರಾಣವನ್ನು, ಕಾಪ್ಪಾರ್ காப்பார் = ಕಾಪಾಡುವವರು,
ಇನಿ இனி = ಇನ್ನು, ಯಾರ್ யார் = ಯಾರು? ಆಲೀ ಕಡಲ್ ஆழி
கடல் = ಆಳವಾದ ಕಡಲನ್ನು, ಮಣ್ மண் = ನೆಲವನ್ನು, ವಿಣ್ விண் =
ಆಕಾಶವನ್ನು, ಮೂಡಿ மூடி = ಮುಚ್ಚಿ (ಆವರಿಸಿಕೊಂಡು), ಮಾ ವಿಕಾರಮ
ಆಯ್ மாவிகாரம் ஆய் = ಅಗಾಧವಾದ ವಿಕಾರವಾಗಿ, ಓರ್ ஓர் = ಒಂದು
(ಅಪಾರವಾದ), ವಲ್ வல் = ಬಲವಾದ, ಇರವು ಆಯ್ இரவு ஆய் =
ರಾತ್ರಿಯಾಗಿ, ನೀಣ್ಡದು ಆಲ್ நீண்டது ஆய் = ದೀರ್ಘವಾದದ್ದಾ[illegible]
ರು, ಅಯ್ಯೋ, ಕಾವಿ ಶೇರ್ ವಣ್ಣನ್ காவி சேர் வண்ணன் = ಕನ್ನೈ
